ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 10 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 320 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜಕಾರಣಿಗಳ 40% ಕಮಿಷನ್ ಚರ್ಚೆಯ ನಡುವೆಯೇ ಅಧಿಕಾರಿಗಳಿಂದ 60% ಕಮಿಷನ್ ಡಿಮ್ಯಾಂಡ್!

ಅಧೀನ ಅಧಿಕಾರಿಯಿಂದಲೇ ಲಂಚ ಸ್ವೀಕರಿಸುವಾಗ ಡಿಸಿಎಫ್ ಪೂರ್ಣಿಮಾ ಲೋಕಾಯುಕ್ತ ಬಲೆಗೆ

ಮಡಿಕೇರಿ, ಮಾ.9–ರಾಜಕೀಯ ಕ್ಷೇತ್ರದಲ್ಲಿ 40 ಪರ್ಸೆಂಟ್ ಕಮಿಷನ್ ಚರ್ಚೆಯಾಗುತ್ತಿರುವ ವೇಳೆಯಲ್ಲೇ ಅಧಿಕಾರಿಗಳ ಹಂತದಲ್ಲಿ ಅದು 60 ಪರ್ಸೆಂಟ್‌ಗೆ ಹೆಚ್ಚಳವಾಗಿದೆಯೇ ಎಂಬ ಅನುಮಾನ ಮೂಡಿಸುವ 'ಕಮಿಷನ್' ವಸೂಲಿ ಪ್ರಸಂಗವೊಂದು ಕೊಡಗಿನಲ್ಲಿ ಬೆಳಕಿಗೆ ಬಂದಿದೆ.

ಅರಣ್ಯ ಇಲಾಖೆ ವತಿಯಿಂದ ನಡೆದ ಕಾಮಗಾರಿಗೆ ಶೇ.60 ಕಮಿಷನ್‌ಗೆ ಬೇಡಿಕೆಯಿಟ್ಟು, ತಮ್ಮ ಅಧೀನ ಅಧಿಕಾರಿಯಿಂದಲೇ ಮುಂಗಡವಾಗಿ 50 ಸಾವಿರ ರೂ. ಲಂಚ ಪಡೆದ ಆರೋಪದಡಿ ಸಾಮಾಜಿಕ ಅರಣ್ಯ ವಿಭಾಗದ ಡಿಸಿಎಫ್ ಪೂರ್ಣಿಮಾ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಈ ಮೂಲಕ ರಾಜಕಾರಣಿಗಳ ಚುನಾವಣೆ ತಲೆಬಿಸಿ ನಡುವೆ ಅಧಿಕಾರಿಗಳು ತಮ್ಮ ಪರ್ಸೆಂಟೇಜ್ ಹೆಚ್ಚಿಸಿಕೊಂಡಿದ್ದಾರೆಯೇ ಎಂಬ ಚರ್ಚೆ ಆರಂಭವಾಗಿದೆ. ಅರಣ್ಯ ಇಲಾಖೆ ವತಿಯಿಂದ ಒಟ್ಟು 1.60 ಲಕ್ಷ ರೂ. ವೆಚ್ಚದ ಎರಡು ಸಣ್ಣ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಇದರಲ್ಲಿ ಶೇ.60ರಷ್ಟು ಅಂದರೆ 1 ಲಕ್ಷ ರೂ. ಕಮಿಷನ್ ತನಗೆ ನೀಡಬೇಕೆಂದು ಸಾಮಾಜಿಕ ಅರಣ್ಯ ವಲಯದ ಪ್ರಭಾರ ವಲಯ ಅರಣ್ಯ ಅಧಿಕಾರಿ ಮಯೂರ ಉದಯ ಕಾರವೇಕರ(27) ಅವರನ್ನು ಡಿಸಿಎಫ್ ಪೂರ್ಣಿಮಾ ಪೀಡಿಸುತ್ತಿದ್ದರು. ಆದರೆ ಪಾರದರ್ಶಕ ಹಾಗೂ ಪ್ರಾಮಾಣಿಕವಾಗಿ ಕಾಮಗಾರಿ ನಡೆಸಿದ್ದೇವೆ. ನಿಮಗೆ ಹಣ ನೀಡಲು ಸಾಧ್ಯವಿಲ್ಲ ಎಂದು ನಿರಾಕರಿಸಿದ್ದರಿಂದ ಸಾರ್ವಜನಿಕವಾಗಿ ಅವರನ್ನು ನಿಂದಿಸಿ, ಅಮಾನತುಗೊಳಿಸಲು ಮೇಲಧಿಕಾರಿಗಳಿಗೆ ವರದಿ ನೀಡುವುದಾಗಿ ಬೆದರಿಸಿದ್ದರು.

ಇದರಿಂದ ಮನನೊಂದ ಆರ್‌ಎಫ್‌ಓ ಮಯೂರ ಉದಯ ಲೋಕಾಯುಕ್ತಕ್ಕೆ ಲಿಖಿತ ದೂರು ಸಲ್ಲಿಸಿದ್ದರು. ಅಲ್ಲದೆ ಮಹಿಳಾ ಮೇಲಾಧಿಕಾರಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಮೊಬೈಲ್ ಸಂಭಾಷಣೆಯ ರೆಕಾರ್ಡ್ ದಾಖಲೆಯನ್ನು ಲೋಕಾಯುಕ್ತಕ್ಕೆ ಸಲ್ಲಿಸಿದ್ದರು.


ಪೂರ್ಣಿಮಾ


ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು(ಮೊ.ಸಂ.04/2023 ಕಲಂ 7(ಎ)(ಬಿ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988(ತಿದ್ದುಪಡಿ ಅಧಿನಿಯಮ –2018) ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆಯ ಯೋಜನೆ ರೂಪಿಸಿದ್ದರು. ಡಿಸಿಎಫ್ ಪೂರ್ಣಿಮಾ ಇಂದು ಅರಣ್ಯ ಭವನದ ಮುಂಭಾಗ ಇರುವ ತನ್ನ ಜೀಪಿನಲ್ಲಿ 50 ಸಾವಿರ ರೂ. ಹಣ ಇಡುವಂತೆ ಆರ್‌ಎಫ್‌ಓ ಮಯೂರ ಉದಯಗೆ ಸೂಚಿಸಿದ್ದರು. ಅದರಂತೆ ಅವರು ಹಣದ ಕವರ್ ಅನ್ನು ಜೀಪಿನಲ್ಲಿ ಇಡುತ್ತಿದ್ದಂತೆ ದಾಳಿ ನಡೆಸಿ ಪೂರ್ಣಿಮಾ ಅವರನ್ನು ಬಂಧಿಸಿದ್ದಾಗಿ ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರಕ್ಕೂ ವಂಚನೆ ಯತ್ನ: ಸಾಮಾಜಿಕ ಅರಣ್ಯ ವಲಯದ ಪ್ರಭಾರ ವಲಯ ಅರಣ್ಯ ಅಧಿಕಾರಿ ಮಯೂರ ಉದಯ ಕಾರವೇಕರ ಕಾರ್ಯವ್ಯಾಪ್ತಿಯ ಹೊದ್ದೂರು ಪೋಟೆಕಾಡು ನರ್ಸರಿಗೆ ಇಬ್ಬರು ವಾಚರ್‌ಗಳನ್ನು ನೇಮಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿತ್ತು. ಆ ಹಿನ್ನೆಲೆಯಲ್ಲಿ ಒಬ್ಬರನ್ನು ನಿಯೋಜಿಸಿಕೊಂಡು ಸರ್ಕಾರದ ನಿಯಮದಂತೆ 15 ಸಾವಿರ ರೂ. ಮಾಸಿಕ ವೇತನ ನೀಡಲಾಗುತ್ತಿತ್ತು. ಡಿಸಿಎಫ್ ಪೂರ್ಣಿಮಾ ಇದರಲ್ಲೂ ಹಣ ಮಾಡಲು ಯತ್ನಿಸಿದ್ದರು. ಮತ್ತೊಬ್ಬ ವಾಚರ್ ನೇಮಿಸಿಕೊಂಡಂತೆ ಸುಳ್ಳು ದಾಖಲೆ ಸೃಷ್ಟಿಸಿ, ಸರ್ಕಾರದಿಂದ ಬರುವ ಮಾಸಿಕ 15 ಸಾವಿರ ರೂ.ಗಳನ್ನು ತನಗೆ ನೀಡುವಂತೆ ಒತ್ತಾಯಿಸಿದ್ದರು. ಇದಕ್ಕೆ ಒಪ್ಪದಿದ್ದಾಗ ಸಾರ್ವಜನಿಕವಾಗಿ ತನ್ನನ್ನು ನಿಂದಿಸುತ್ತಿದ್ದರು ಎಂದು ದೂರಿನಲ್ಲಿ ಮಯೂರ ಉದಯ್ ತಿಳಿಸಿದ್ದಾರೆ ಎನ್ನಲಾಗಿದೆ.

ಲೋಕಾಯುಕ್ತ ಅಪರ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್‌ಕುಮಾರ್ ಠಾಕೂರ್, ಪೊಲೀಸ್ ಮಹಾನಿರೀಕ್ಷಕ ಡಾ.ಎ.ಸುಬ್ರಮಣೇಶ್ವರ ರಾವ್ ನಿರ್ದೇಶನ, ಮೈಸೂರು ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸುರೇಶ್‌ಬಾಬು, ಕೊಡಗು ಲೋಕಾಯುಕ್ತ ಡಿವೈಎಸ್‌ಪಿ ಎಂ.ಎಸ್.ಪವನ್ ಕುಮಾರ್, ಮೈಸೂರು ಲೋಕಾಯುಕ್ತ ಡಿವೈಎಸ್‌ಪಿ ಕೃಷ್ಣಯ್ಯ ಮಾರ್ಗದರ್ಶನದಲ್ಲಿ ಕೊಡಗು ಜಿಲ್ಲೆಯ ಪೊಲೀಸ್ ನಿರೀಕ್ಷಕ ಲೋಕೇಶ ಹಾಗೂ ಮೈಸೂರು ಜಿಲ್ಲೆಯ ಪೊಲೀಸ್ ನಿರೀಕ್ಷಕಿ ಜಯರತ್ನ, ಸಿಬ್ಬಂದಿ ಲೋಕೇಶ್, ಮಂಜುನಾಥ್, ಸಲಾಹುದ್ದೀನ್, ದೀಪಿಕಾ, ಅರುಣ್‌ಕುಮಾರ್, ಶಶಿ, ತ್ರಿವೇಣಿ, ಪ್ರಕಾಶ್ ಮತ್ತು ಲೋಕೇಶ್ ಕಾರ್ಯಾಚರಣೆ ನಡೆಸಿದ್ದರು.

ವಿಧಾನಸೌಧದ ಮುಂದೆ ಮಾ.24ರಂದು ಬಸವೇಶ್ವರ, ಕೆಂಪೇಗೌಡರ ಪ್ರತಿಮೆ ಅನಾವರಣ

ಬೆಂಗಳೂರು, ಮಾ.9(ಕೆಎಂಶಿ)– ವಿಧಾನಸೌಧದ ಮುಂದೆ ನೂತನವಾಗಿ ನಿರ್ಮಾಣಗೊಂಡಿರುವ ಕಾಯಕ ಯೋಗಿ ಜಗಜ್ಯೋತಿ ಶ್ರೀ ಬಸವೇಶ್ವರ ಹಾಗೂ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳು ಇದೇ 24ರಂದು ಅನಾವರಣಗೊಳ್ಳಲಿವೆ.


ಅಮಿತ್ ಷಾ

ಕೇಂದ್ರ ಗೃಹಸಚಿವ ಅಮಿತ್ ಷಾ ಅವರು ಪ್ರತಿಮೆಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮೊದಲೇ ಉದ್ಘಾಟನೆ ಮಾಡಲು ಸರ್ಕಾರ ಸಿದ್ಧತೆ ನಡೆಸಿದೆ. ಈ ಪ್ರತಿಮೆಗಳ ಅನಾವರಣದಿಂದ ರಾಜ್ಯದ 2 ಪ್ರಬಲ ಸಮುದಾಯಗಳಾದ ಲಿಂಗಾಯತ ಮತ್ತು ಒಕ್ಕಲಿಗರಿಗೆ ಸಂದೇಶ ರವಾನಿಸಿ ಮತಗಿಟ್ಟಿಸಿಕೊಳ್ಳುವ ಲೆಕ್ಕಾಚಾರವು ಇದರಲ್ಲಿ ಅಡಗಿದೆ.

ನಿಷ್ಪಕ್ಷಪಾತ ಚುನಾವಣೆಗೆ ಹೊರಗಿನ ಅಧಿಕಾರಿಗಳ ಮತಗಟ್ಟೆಗಳಿಗೆ ನಿಯೋಜಿಸಿ

- ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಚುನಾವಣಾ ಆಯೋಗ ಆದೇಶ
- ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಂಡದಿಂದ ರಾಜ್ಯದ ಅಧಿಕಾರಿಗಳೊಂದಿಗೆ ಸಮಾಲೋಚನೆ

ಬೆಂಗಳೂರು, ಮಾ.9(ಕೆಎಂಶಿ)– ವಿಧಾನಸಭಾ ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಲು ಮತಗಟ್ಟೆಗಳಿಗೆ ಕ್ಷೇತ್ರ ಮತ್ತು ಜಿಲ್ಲೆಯ ಹೊರಗಿನ ಅಧಿಕಾರಿಗಳನ್ನು ನಿಯೋಜಿಸುವಂತೆ ಕೇಂದ್ರ ಚುನಾವಣಾ ಆಯೋಗ, ಮುಖ್ಯ ಕಾರ್ಯದರ್ಶಿಯವರಿಗೆ ಆದೇಶಿಸಿದೆ.


ರಾಜೀವ್‌ಕುಮಾರ್

ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆ ಪೂರ್ವ ತಯಾರಿ ಪರಿವೀಕ್ಷಣೆಗಾಗಿ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ನೇತೃತ್ವದ ಹಿರಿಯ ಅಧಿಕಾರಿಗಳ ತಂಡ, ಇಂದು ಮುಖ್ಯ ಕಾರ್ಯದರ್ಶಿ ಹಾಗೂ ಹಿರಿಯ ಅಧಿಕಾರಿಗಳ ಜೊತೆ ಸುದೀರ್ಘ ಸಮಾಲೋಚನೆ ನಡೆಸಿತು. ಕಳೆದ ಆರು ತಿಂಗಳಲ್ಲಿ ರಾಜ್ಯ ಸರ್ಕಾರ ವರ್ಗಾವರ್ಗಿ ಮಾಡಿರುವ ನೌಕರರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಆಯೋಗಕ್ಕೆ ಒದಗಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದೆ. ಚುನಾವಣೆ



ನಡೆಯುವ ಕ್ಷೇತ್ರ ಹಾಗೂ ಜಿಲ್ಲೆಯಲ್ಲಿ ಕಳೆದ ಮೂರರಿಂದ ಐದು ವರ್ಷಗಳ ಕಾಲ ಸುದೀರ್ಘವಾಗಿ ಬೀಡುಬಿಟ್ಟಿರುವ ಮತ್ತು ಇತ್ತೀಚೆಗೆ ಸ್ವಯಂ ಪ್ರೇರಿತವಾಗಿ ವರ್ಗಾವಣೆ ಬಯಸಿದ ನೌಕರರ ಪಟ್ಟಿಯನ್ನು ಸಲ್ಲಿಸುವಂತೆ ಹೇಳಿದೆ. ಇಂದಿನಿಂದ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಚುನಾವಣೆ ಸಿದ್ಧತೆ ▶ 8ನೇ ಪುಟಕ್ಕೆ

ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಗುರುವಾರ ಬೆಂಗಳೂರು ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದರು. ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವಂತಹ ಅಕ್ರಮಗಳ ವಿಷಯವಾಗಿ ಕೆಲವೊಂದು ಪ್ರಮುಖ ಮಾಹಿತಿ ನೀಡುವುದರ ಜೊತೆಗೆ ಪೂರಕ ದಾಖಲೆಯನ್ನು ನೀಡಿದ್ದಾರೆ. ಪ್ರತಾಪ್‌ಸಿಂಹ ಅವರ ಮನವಿಗೆ ರಾಜ್ಯಪಾಲರು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.



ದ್ವಿತೀಯ ಪಿಯು ಪರೀಕ್ಷೆ ಆರಂಭ

ಮೊದಲ ದಿನ ಕನ್ನಡ ಭಾಷೆಗೆ 979 ಮಂದಿ ಗೈರು

ಮೈಸೂರು, ಮಾ.9(ಆರ್‌ಕೆ)– ರಾಜ್ಯಾದ್ಯಂತ ಇಂದಿನಿಂದ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗಳು ಆರಂಭವಾಗಿವೆ.

ಮೈಸೂರು ಜಿಲ್ಲೆಯಲ್ಲಿ ಮೊದಲ ದಿನ, ಕನ್ನಡ ಭಾಷೆ ಪರೀಕ್ಷೆಗೆ ಒಟ್ಟು 27,734 ವಿದ್ಯಾರ್ಥಿಗಳು ನೋಂದಣಿಯಾಗಿದ್ದರಾದರೂ, 26,755 ಮಂದಿ ಪರೀಕ್ಷೆ ಬರೆದಿದ್ದು, ಶೇ.96.47 ರಷ್ಟು ಹಾಜರಾತಿ ಇತ್ತು. 979 ಮಂದಿ ಪರೀಕ್ಷೆಗೆ ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಮತ್ತು ವೃತ್ತಿ ತರಬೇತಿ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ನಾಗಮಲ್ಲೇಶ್ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ವಾರ್ಷಿಕ ದ್ವಿತೀಯ ಪಿಯು ಪರೀಕ್ಷೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 35,020 ಮಂದಿ ನೋಂದಣಿಯಾಗಿದ್ದು, ಮೈಸೂರು ನಗರದ 26 ಸೇರಿ ಜಿಲ್ಲೆಯಾದ್ಯಂತ 50 ಕೇಂದ್ರಗಳ ಸ್ಥಾಪಿಸಲಾಗಿದೆ. ಮೈಸೂರಿನ ಮಹಾರಾಣಿ ಕಾಲೇಜು ಮತ್ತು ಕುವೆಂಪುನಗರದ ಸರ್ಕಾರಿ ಪಿಯು ಕಾಲೇಜು ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದ ನಾಗಮಲ್ಲೇಶ್, ಸುಗಮ ಪರೀಕ್ಷೆಗೆ



ಮಾಡಿರುವ ವ್ಯವಸ್ಥೆಗಳನ್ನು ಖಚಿತಪಡಿಸಿಕೊಂಡರು. ಜಿಲ್ಲಾ ಖಜಾನೆಯಿಂದ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ಜಿಪಿಎಸ್ ಅಳವಡಿಸಿರುವ 10 ವಾಹನಗಳಲ್ಲಿ ▶ 8ನೇ ಪುಟಕ್ಕೆ


ಸುಮಲತಾ ಬಿಜೆಪಿ ಸೇರುವುದು ಖಚಿತ

- ಶಾಸಕ ಸಿ.ಎಸ್.ಪುಟ್ಟರಾಜು ಭವಿಷ್ಯ
- ಸರ್ಕಾರಿ ಕಾರ್ಯಕ್ರಮವಾದ್ದರಿಂದ ಪ್ರಧಾನಿ ಮೋದಿ ಸಮ್ಮುಖದಲ್ಲಿ ಕಮಲ ಹಿಡಿಯುವ ಅವರ ಕನಸು ಭಗ್ನ
- ಮಂಡ್ಯದಲ್ಲಿ ಬೇರೆಯವರ ಆಟ ನಡೆಯಲ್ಲ; ಬಿಜೆಪಿಗೆ ಟಾಂಗ್
- ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ನಮಗೂ ಸಲ್ಲಬೇಕು

ಮೈಸೂರು, ಮಾ.9(ಎಂಟಿವೈ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟನೆ ವೇಳೆ ಮಂಡ್ಯ ಸಂಸದೆ ಸುಮಲತಾ ಅಂಬರೀಶ್, ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಬಿಜೆಪಿ ಸೇರಲು ಬಯಸಿದ್ದರು. ಅದು ಸರ್ಕಾರಿ ಕಾರ್ಯಕ್ರಮವಾಗಿರುವುದರಿಂದ ಅವರ ಕನಸು ಭಗ್ನವಾಗಿದೆ. ಆದರೆ, ಅವರು ಬಿಜೆಪಿಗೆ ಸೇರುವುದು ಖಚಿತ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಯಾರೇ ಬಂದರೂ ಮಂಡ್ಯದಲ್ಲಿ ಜೆಡಿಎಸ್ ಪ್ರಾಬಲ್ಯ ಕುಗ್ಗುವುದಿಲ್ಲ. ಇಲ್ಲಿ ಬೇರೆಯವರ ಆಟ ನಡೆಯಲ್ಲ ಎಂದು ಬಿಜೆಪಿ ನಾಯಕರಿಗೆ ಟಾಂಗ್ ನೀಡಿದರು.

ಮಂಡ್ಯ ಜಿಲ್ಲೆಯನ್ನೇ ಗುರಿಯಾಗಿಸಿಕೊಂಡು ಬಿಜೆಪಿ ಸಮಾವೇಶ, ರ್‍ಯಾಲಿ ಸೇರಿ



ದಂತೆ ಇನ್ನಿತರ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಮಂಡ್ಯದಲ್ಲಿ ಒಂದೆಡೆ ಕಾಂಗ್ರೆಸ್, ಮತ್ತೊಂದೆಡೆ ಬಿಜೆಪಿ ಬಲಗೊಂಡರೆ ಜೆಡಿಎಸ್‌ಗೆ ಜಯ ಸುಲಭವಾಗಲಿದೆ. ಮೊದಲಿನಿಂದಲೂ ಜೆಡಿಎಸ್ ಭದ್ರಕೋಟೆಯಾಗಿದ್ದು, ಕಾರ್ಯಕರ್ತರೇ ಮಾಜಿ ಸಿಎಂ ಕುಮಾರಸ್ವಾಮಿ ಅವರಿಗೆ ಶಕ್ತಿಯಾಗಿದ್ದಾರೆ. ಜಿಲ್ಲೆಯಲ್ಲಿ ಪಕ್ಷದ ಬೆಂಬಲಿಗರು, ಮತದಾರರು ಅನ್ಯ ಪಕ್ಷಗಳಿಗೆ ಹೋಗುವ ಪ್ರಶ್ನೆಯೇ ಇಲ್ಲ. ಹಾಗಾಗಿ ನಮ್ಮ ಅಭ್ಯರ್ಥಿಗಳ ಗೆಲುವು ಸುಲಭ ಸಾಧ್ಯವಾಗುತ್ತದೆ ಎಂದರು.

ನಮ್ಮ ಪಾಲು ಇದೆ: ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಕ್ರೆಡಿಟ್‌ಗೆ ಇದೀಗ ಜೆಡಿಎಸ್ ನಾಯಕರು ಕೈಹಾಕಿದ್ದಾರೆ. ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ನಿರ್ಮಾಣದಲ್ಲಿ ಜೆಡಿಎಸ್ ಪಾಲು ಇದೆ ಎಂದು ಶಾಸಕ ಸಿ.ಎಸ್. ಪುಟ್ಟರಾಜು ಬಲವಾಗಿ ಪ್ರತಿಪಾದಿಸಿದರು. ಮೈತ್ರಿ ಸರ್ಕಾರದಲ್ಲೇ ಹೆದ್ದಾರಿಗೆ ಅನುಮೋದನೆ ನೀಡಲಾಗಿತ್ತು. ನಾನು ಸಂಸದನಾಗಿದ್ದ ವೇಳೆ ಇದಕ್ಕಾಗಿ ಹೋರಾಟ ಮಾಡಿದ್ದೆ. ಹೆದ್ದಾರಿ ನಿರ್ಮಾಣದ ವಿಚಾರದಲ್ಲಿ ಮೈಸೂರು ಸಂಸದ ಪ್ರತಾಪ್ ಸಿಂಹ ಹೆಜ್ಜೆ ಹೆಜ್ಜೆಗೂ ಚೀಫ್ ಇಂಜಿನಿಯರ್ ರೀತಿ ವರ್ತಿಸುತ್ತಿದ್ದಾರೆ. ಮೈಸೂರು ಸಂಸದರ ವ್ಯಾಪ್ತಿಗೆ ಈ ಹೆದ್ದಾರಿ ಬರುವುದು ಕೇವಲ 2–3 ಕಿ.ಮೀ. ಮಾತ್ರ. ಆದರೂ ಇಡೀ ರಸ್ತೆ ತನ್ನದೇ ವ್ಯಾಪ್ತಿಗೆ ಬರುವಂತೆ, ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ತಾವೇ ಮಾಡಿಸಿದಂತೆ ಮಾತನಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಇವರಿಗೆ ರಸ್ತೆ ನಿರ್ಮಾಣದ ಗುತ್ತಿಗೆ ಕೊಟ್ಟಿದೆಯಾ ಎಂದು ವಾಗ್ದಾಳಿ ನಡೆಸಿದರು. ಬೆಂಗಳೂರು–ಮೈಸೂರು ಹೈವೇ ಅವೈಜ್ಞಾನಿಕವಾಗಿದೆ. ಈಗಲೇ ದಿನನಿತ್ಯ ಎರಡು ಮೂರು ಅಪಘಾತಗಳಾಗುತ್ತಿವೆ. ನ್ಯೂನತೆಗಳನ್ನು ಸರಿಪಡಿಸಲು ಆದ್ಯತೆ ನೀಡದೇ, ಎಲ್ಲಾ ಸಾಧನೆಯನ್ನು ನಾನೇ ಮಾಡಿದೆ ಎಂದು ಹೇಳಿಕೊಳ್ಳುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಸುಮಲತಾ ಬಿಜೆಪಿ ಸೇರ್ಪಡೆ ನಿರ್ಧಾರ

ಇಂದು ಮಂಡ್ಯದಲ್ಲಿ ಮಹತ್ವದ ಪತ್ರಿಕಾಗೋಷ್ಠಿ


ಬೆಂಗಳೂರು, ಮಾ.9(ಕೆಎಂಶಿ)– ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯೆ ಸುಮಲತಾ ಅಂಬರೀಶ್ ಬಿಜೆಪಿ ಸೇರಲು ವೇದಿಕೆ ಸಿದ್ಧವಾಗಿದೆ.



ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲು ಬಿಜೆಪಿ ವರಿಷ್ಠರು ಹಸಿರುನಿಶಾನೆ ತೋರಿದ್ದು, ಬಹುಶಃ ಶುಕ್ರವಾರವೇ ಕಮಲದ ಚಿಹ್ನೆ ಹಿಡಿಯಲಿದ್ದಾರೆ. ಸುಮಲತಾ ಅವರು ನಾಳೆ ಪತ್ರಿಕಾಗೋಷ್ಠಿ ಕರೆದಿದ್ದು, ತಮ್ಮ ಮುಂದಿನ ರಾಜಕೀಯ ನಿಲುವುಗಳ ಬಗ್ಗೆ ಅವರು ಪ್ರಕಟಿಸಲಿದ್ದಾರೆ ಎಂದು ಹೇಳಲಾಗಿದೆ. ಕಳೆದ ಹಲವು ದಿನಗಳಿಂದ ತಮ್ಮ ಬೆಂಬಲಿಗರು, ಹಿತೈಷಿಗಳು, ಆಪ್ತರ ಜೊತೆ ಸಮಾಲೋಚನೆ ನಡೆಸಿರುವ ಅವರು ಯಾವ ಪಕ್ಷ ಸೇರ್ಪಡೆ ಸೂಕ್ತ ಎಂಬ ಅಭಿಪ್ರಾಯವನ್ನು ಸಂಗ್ರಹಿಸಿದ್ದರು. ಬಹುತೇಕರು ಈಗಿನ ಪರಿಸ್ಥಿತಿಯಲ್ಲಿ ಬಿಜೆಪಿ ಸೇರ್ಪಡೆಯಾದರೆ 2024ರ ಲೋಕಸಭಾ ಚುನಾವಣೆಯಲ್ಲೂ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲಿದ್ದು, ಸಚಿವ ಸ್ಥಾನ ಪಡೆಯಬಹುದೆಂಬ ಸಲಹೆಯನ್ನು ಕೊಟ್ಟಿದ್ದರು. ಇದರ ಜೊತೆಗೆ ಕೆಲ ದಿನಗಳ ಹಿಂದೆ ಸುಮಲತಾ ಅವರು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಭೇಟಿಯಾಗಿದ್ದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅವರಿಗೆ ಬಿಜೆಪಿ, ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸದೆ ಬೆಂಬಲ ಸೂಚಿಸಿತ್ತು. ಇದೇ 12ರಂದು ಪ್ರಧಾನಿ ನರೇಂದ್ರ ಮೋದಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆಯನ್ನು ಲೋಕಾರ್ಪಣೆ ಮಾಡುವುದಕ್ಕೂ ಮುನ್ನವೇ ಸುಮಲತಾ ಅವರು ತಮ್ಮ ರಾಜಕೀಯ ನಿರ್ಧಾರ ಪ್ರಕಟಿಸಲಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷೆಯಿಂದ ತವರು ಕ್ಷೇತ್ರ ಶಿಗ್ಗಾವಿ ಸೇಫಲ್ಲಾ

ದಾವಣಗೆರೆ ದಕ್ಷಿಣದಿಂದ ಕಣಕ್ಕಿಳಿಯಲು ಸಿಎಂ ಬಸವರಾಜ ಬೊಮ್ಮಾಯಿ ಚಿಂತನೆ



- ಈ ಕ್ಷೇತ್ರದ ಎಸ್.ಎ.ರವೀಂದ್ರನಾಥ್ ವಯೋಸಹಜ ಕಾರಣದಿಂದ ನಿವೃತ್ತಿ ಸಾಧ್ಯತೆ
- ವೀರಶೈವ ಲಿಂಗಾಯತ ಸಾದರ ಸಮುದಾಯಕ್ಕೆ ಸೇರಿದ ಜನ ಹೆಚ್ಚಾಗಿರುವುದೊಂದು ಅನುಕೂಲಕಾರಿ

ಬೆಂಗಳೂರು, ಮಾ.9(ಕೆಎಂಶಿ)– ಮತ್ತೊಂದು ಅವಧಿಗೆ ಮುಖ್ಯಮಂತ್ರಿಯಾಗಲು ಬಯಸಿರುವ ಬಸವರಾಜ ಬೊಮ್ಮಾಯಿ ಅವರು ತವರು ಕ್ಷೇತ್ರದ ಬದಲಿಗೆ ಮಧ್ಯ ಕರ್ನಾಟಕದಿಂದ ಸ್ಪರ್ಧಿಸಲು ಮುಂದಾಗಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬೊಮ್ಮಾಯಿ ಅವರಿಗೆ ದಾವಣಗೆರೆ ದಕ್ಷಿಣ ಸುರಕ್ಷಿತವೆಂಬುದು ಚುನಾವಣಾ ಪೂರ್ವ ಸಮೀಕ್ಷೆಯ ವರದಿಯಿಂದ ತಿಳಿದು ಬಂದಿದ್ದು, ಇದುವರೆಗೂ ಪ್ರತಿನಿಧಿಸುತ್ತಿದ್ದ ಶಿಗ್ಗಾವಿ ತವರು ಕ್ಷೇತ್ರ ಸುರಕ್ಷಿತವಲ್ಲ. ಪರ್ಯಾಯ ಕ್ಷೇತ್ರವೊಂದನ್ನು ನೋಡಿಕೊಳ್ಳುವುದು ಸೂಕ್ತ ಎಂಬ ಸಲಹೆ ಮಾಡಿರುವುದಲ್ಲದೆ, ದಾವಣಗೆರೆ ದಕ್ಷಿಣ ಸುರಕ್ಷಿತ ಎಂಬ ಮಾಹಿತಿ ನೀಡಲಾಗಿದೆ. ಇದುವರೆಗೂ ಈ ಕ್ಷೇತ್ರದಲ್ಲಿ ಪ್ರತಿನಿಧಿಸುತ್ತಿದ್ದ ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಅವರು ವಯೋಸಹಜ ಕಾರಣಗಳಿಂದ ಚುನಾವಣಾ ಕಣದಿಂದ ಹಿಂದೆ ಸರಿಯಬಹುದು ಎಂಬ ಮಾಹಿತಿ ಇದೆ. ವೀರಶೈವ ಸಮುದಾಯದ ಸಾದರ ▶ 8ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿದ್ದಾರೆ 500 ಮಂದಿ ತೃತೀಯ ಲಿಂಗಿ ಮತದಾರರು

- ಇದುವರೆಗೆ ಮತದಾರರ ಪಟ್ಟಿಯಲ್ಲಿ 210 ಮಂದಿ ಮಾತ್ರ ನೋಂದಣಿ
- ಎಲ್ಲರಿಗೂ ಗುರುತಿನ ಚೀಟಿ ಕಲ್ಪಿಸುವ ಭರವಸೆ ನೀಡಿದ ಜಿಲ್ಲಾಧಿಕಾರಿಗಳು
- ತೃತೀಯ ಲಿಂಗಿ ಮತದಾರರೊಂದಿಗೆ ಡಿಸಿ ಡಾ.ರಾಜೇಂದ್ರ ಸಭೆ

ಮೈಸೂರು, ಮಾ. 9– ಹೆಣ್ಣು ಇಲ್ಲವೇ ಗಂಡು ಅಲ್ಲದೆ ತೃತೀಯ ಲಿಂಗಿಗಳಾಗಿಯೇ ಗುರುತಿಸಿಕೊಳ್ಳಲು ಇಚ್ಛಿಸುವವರಿಗೆ ಗುರುತಿನ ಚೀಟಿಯನ್ನು ಒದಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಭರವಸೆ ನೀಡಿದರು.

ಜಿಲ್ಲಾ ಸ್ವೀಪ್ ಸಮಿತಿಯ ವತಿಯಿಂದ ಜಿಲ್ಲಾ ಪಂಚಾಯತ್‌ನ ದೇವರಾಜ ಅರಸು ಸಭಾಂಗಣದಲ್ಲಿ ತೃತೀಯ ಲಿಂಗಿ ಮತದಾರರೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ 500 ತೃತೀಯ ಲಿಂಗಿಗಳಿಗೂ ಮತದಾರರ ಚೀಟಿ ದೊರೆಯಬೇಕು. ಎಲ್ಲರೂ ತಪ್ಪದೇ ಮತದಾನ ಮಾಡಬೇಕು ಎಂದು ತಿಳಿಸಿದರು.

ತೃತೀಯ ಲಿಂಗಿಗಳಾಗಿದ್ದೂ ಗುರುತಿನ ಚೀಟಿಯಲ್ಲಿ ಗಂಡು ಅಥವಾ ಹೆಣ್ಣು ಎಂದಿದ್ದು ಅದನ್ನು ತಿದ್ದುಪಡಿ ಮಾಡಿಸಿಕೊಂಡು



ತೃತೀಯ ಲಿಂಗಿಗಳಾಗಿಯೇ ಗುರುತಿಸಿಕೊಳ್ಳಲು ಇಚ್ಛಿಸುವವರಿಗೆ ಜಿಲ್ಲಾಡಳಿತ ತೃತೀಯ ಲಿಂಗಿಗಳು ಎಂದೇ ಚೀಟಿ ನೀಡುವ ಅವಕಾಶವಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸದಿದ್ದಲ್ಲಿ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಅಥವಾ ಡೆವಲಪ್‌ಮೆಂಟ್ ಆಫೀಸರ್‌ಗೆ ಮನವಿ ನೀಡಬಹುದು ಎಂದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಇದೇ ವೇಳೆ ಮಾತನಾಡಿ, ನಿಮ್ಮ ಸಮುದಾಯದಲ್ಲಿ ಎಷ್ಟೇ ವಿಧಗಳಿದ್ದರೂ ಸರ್ಕಾರದಿಂದ ಸೌಲಭ್ಯ ಪಡೆಯುವಾಗ ಎಲ್ಲರೂ ಒಟ್ಟಾಗಿ ಬರಬೇಕು. ಮತದಾರರ ಚೀಟಿ ಪಡೆಯುವಲ್ಲಿ ಏನಾದರೂ ಸಮಸ್ಯೆಗಳಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಗುರುತಿನ ಚೀಟಿ ಪಡೆದುಕೊಳ್ಳಿ ಎಂದು ಸೂಚಿಸಿದರು. ▶ 8ನೇ ಪುಟಕ್ಕೆ

ಮಾ.12ರಂದು ವಿರಳ ಕಾಯಿಲೆಗಳ ವಿರುದ್ಧ ಮ್ಯಾರಥಾನ್

ಮೈಸೂರು, ಮಾ.9–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ಆರ್ಗನೈಸೇಶನ್ ಫಾರ್ ರೇರ್ ಡಿಸೀಸ್ ಆಫ್ ಇಂಡಿಯಾ (ORDI) ಸಹಯೋಗದಲ್ಲಿ ಮಾ. 12 ರಂದು 'ರೇಸ್ ಫಾರ್ 7' ಮ್ಯಾರಥಾನ್ ಅನ್ನು ಆಯೋಜಿಸಿದೆ. ಅಂದು ಬೆಳಗ್ಗೆ 6.30 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯಿರುವ ಅರಮನೆಯ ಉತ್ತರ ದ್ವಾರದಿಂದ ಆರಂಭವಾಗುವ 'ರೇಸ್ ಫಾರ್ 7' ಮ್ಯಾರಥಾನ್ ದೇವರಾಜ ಅರಸು ರಸ್ತೆ, ಜೆ.ಎಲ್.ಬಿ. ರಸ್ತೆ, ವಿನೋಬಾ ರಸ್ತೆ, ಸರಸ್ವತಿಪುರಂ ಅಗ್ನಿಶಾಮಕ ದಳ, ರಾಮಸ್ವಾಮಿ ವೃತ್ತ, ಚಾಮರಾಜ ಡಬಲ್ ರಸ್ತೆ, ಗನ್ ಹೌಸ್ ವೃತ್ತ, ಹಾರ್ಡಿಂಜ್ ಸರ್ಕಲ್ ಮೂಲಕ ಸಾಗಿ, ಮರಳಲಿದೆ. ಭಾರತದಲ್ಲಿ ವಿರಳವಾದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಬಗ್ಗೆ ಅರಿವು ಮೂಡಿಸಲು ಮತ್ತು ರೋಗಿಗಳು ಮತ್ತು ಅವರ ಕುಟುಂಬಸ್ಥರ ಸವಾಲುಗಳನ್ನು ಪರಿಹರಿಸಲು ಹಲವು ನಗರಗಳಲ್ಲಿ ರೇಸ್ ಫಾರ್ 7 ಓಟ, ನಡಿಗೆ ಮ್ಯಾರಥಾನ್ 8ನೇ ಆವೃತ್ತಿಯನ್ನು ನಡೆಸುತ್ತಿರುವುದಾಗಿ ವಿರಳ ಕಾಯಿಲೆಗಳ ಭಾರತೀಯ ಸಂಸ್ಥೆ (ORDI) ಘೋಷಿಸಿದೆ. ಭಾರತದಲ್ಲಿ ವಿರಳ ಕಾಯಿಲೆಗಳಿಂದ ಬಳಲುತ್ತಿರುವ ಅಂದಾಜು 70 ದಶಲಕ್ಷ ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಕಾರ್ಯಕ್ರಮವು ಸಾರ್ವಜನಿಕರಿಗೆ ಮುಕ್ತವಾಗಿದೆ. ವಿರಳವಾದ ರೋಗಗಳಿಂದ ಬಳಲುತ್ತಿರುವವರು ಮತ್ತು ಅವರ ಕುಟುಂಬಸ್ಥರೂ ಇದರಲ್ಲಿ ಭಾಗವಹಿಸಬಹುದು ಎಂದು ಜೆಎಸ್‌ಎಸ್ ಆಸ್ಪತ್ರೆಯ ಡಾ.ದೀಪಾ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಜಿಲ್ಲಾ ಸಹಕಾರ ಸಮಿತಿ ಸಭೆ

ಮೈಸೂರು, ಮಾ.9–ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ನಾಳೆ (ಮಾ.10) ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಹಕಾರ ಸಮಿತಿಯ ಪ್ರಥಮ ಸಭೆಯನ್ನು ಏರ್ಪಡಿಸಲಾಗಿದೆ. ಜಿಲ್ಲೆಯ ಎಲ್ಲಾ ಹಂತದ ಸಹಕಾರ ಸಂಘ, ಸಹಕಾರ ಬ್ಯಾಂಕ್, ಹಾಲು ಉತ್ಪಾದಕರ ಸಹಕಾರ ಸಂಘ, ಬ್ಯಾಂಕ್ ಇತರೆ ಎಲ್ಲಾ ಸಂಘಗಳ ಕಾಂಗ್ರೆಸ್ ಬೆಂಬಲಿತ ಅಧ್ಯಕ್ಷರುಗಳು ಮತ್ತು ನಿರ್ದೇಶಕರುಗಳು ಭಾಗವಹಿಸಬೇಕೆಂದು ಕೋರಲಾಗಿದೆ.

ಒಡನಾಡಿ ಸೇವಾ ಸಂಸ್ಥೆಗೆ ನೈತಿಕ, ಸಾಮಾಜಿಕ ಬೆಂಬಲ ಕ್ರೋಢೀಕರಿಸಲು

ಮಾ.11ರಂದು ಮೈಸೂರಲ್ಲಿ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮ





ಮೈಸೂರು, ಮಾ.9(ಜಿಎ)– ಒಡನಾಡಿ ಸೇವಾ ಸಂಸ್ಥೆಗೆ ನೈತಿಕ ಹಾಗೂ ಸಾಮಾಜಿಕ ಬೆಂಬಲವನ್ನು ಕ್ರೋಢೀಕರಿಸುವ ಉದ್ದೇಶದಿಂದ ಮಾನವೀಯ ಸಮಾನತೆಗಾಗಿ 'ಒಂದು ದಿನ–ಒಂದು ಧ್ವನಿ' ಎಂಬ ಆಶಯದೊಂದಿಗೆ 13ನೇ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ–ಪರಶು ತಿಳಿಸಿದ್ದಾರೆ. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಯೋಗವನ್ನು ಒಂದು ಮಾನವೀಯ ಸಾಧನವನ್ನಾಗಿ ಬಳಸಿ, ಮಾನವ ಸಾಗಾಣಿಕೆ, ಲೈಂಗಿಕ ದೌರ್ಜನ್ಯ ವಿರುದ್ಧ ಎಲ್ಲಾ ದೇಶಗಳ ಸಂಸ್ಕೃತಿ ಹಾಗೂ ಗಡಿಗಳನ್ನು ದಾಟಿ ಒಂದು ಆಂದೋಲನವನ್ನು ರೂಪಿಸಲು ಒಡನಾಡಿಯು 'yoga stops traffick'(ಯೋಗವು ಸಾಗಾಣಿಕೆಯನ್ನು ನಿಲ್ಲಿಸುತ್ತದೆ) ಎಂಬ ಕಾರ್ಯಕ್ರಮವನ್ನು ಕಳೆದ 13 ವರ್ಷಗಳಿಂದ ಆಯೋಜಿಸುತ್ತಾ ಬಂದಿದೆ ಎಂದರು.

ಈ ಬಾರಿಯ ಯೋಗ ಕಾರ್ಯಕ್ರಮವನ್ನು ಮಾ.11 ರಂದು ಬೆಳಗ್ಗೆ 7.30 ರಿಂದ 8.30ರವರೆಗೂ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಕರ್ನಾಟಕ ರಾಜ್ಯ ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ, ನಳಂದ ವಿಶ್ವವಿದ್ಯಾನಿಲಯದ ಭೋದಿದತ್ತ ಜಗದೀಶ್ ಬಂತೇಜಿ, ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಯೋಗಾ ಚಾರ್ಯ ಡಾ.ಪಿ.ಸಿ.ಮೂರ್ತಿ ಹಾಗೂ ಒಡನಾಡಿಯ ಮಹಿಳೆಯರು ಮತ್ತು ಮಕ್ಕಳು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

'yoga stops traffick' (ಯೋಗವು ಸಾಗಾಣಿಕೆಯನ್ನು ನಿಲ್ಲಿಸುತ್ತದೆ) ಈ ಅಂತರರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾರತ, ಇಂಗ್ಲೆಂಡ್, ಅಮೇರಿಕಾ, ಆಸ್ಟ್ರೇಲಿಯಾ, ಹಾಲೆಂಡ್, ಮೆಕ್ಸಿಕೋ, ಸ್ವೀಡನ್, ಫ್ರಾನ್ಸ್, ಅರ್ಜೆಂಟೈನಾ, ಕೆನಡಾ, ಇಸ್ರೇಲ್ ಸೇರಿದಂತೆ ಅನೇಕ ದೇಶಗಳು ಏಕಕಾಲದಲ್ಲಿ ಭಾಗಿಯಾಗಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಳಂದ ವಿಶ್ವವಿದ್ಯಾನಿಲಯದ ಭೋದಿದತ್ತ ಜಗದೀಶ್ ಬಂತೇಜಿ, ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಯೋಗಾಚಾರ್ಯ ಡಾ.ಪಿ.ಸಿ.ಮೂರ್ತಿ, ಸಂಚಾಲಕ ಪ್ರದೀಪ್ ಉಪಸ್ಥಿತರಿದ್ದರು.

> "ಸ್ಯಾಂಟ್ರೋ ರವಿ ಪ್ರಕರಣಕ್ಕೆ ಸಂಬಂಧಿಸಿದಂತೆ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ–ಪರಶು ಪ್ರತಿಕ್ರಿಯಿಸಿ, ಸ್ಯಾಂಟ್ರೋ ರವಿ ಪ್ರಸ್ತುತ ಜೈಲಿನಲ್ಲಿದ್ದಾನೆ. ಸುಳ್ಳು ಪ್ರಕರಣ ದಾಖಲಿಸಿದ ಪೊಲೀಸ್ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಸಿಐಡಿ ವಿಶೇಷ ತನಿಖೆ ಕೈಗೊಂಡಿದೆ. ಸರ್ಕಾರದ ಬಳಿ ಹೋದ ನಂತರ ನಮ್ಮ ಜವಾಬ್ದಾರಿ ಮುಗಿಯುತ್ತದೆ. ಆದರೆ, ಒತ್ತಡ ಮಾತ್ರ ಹಾಕಬಹುದಾಗಿದೆ. ತನಿಖಾ ಸಂಸ್ಥೆ ತನಿಖೆ ಕೈಗೊಂಡು ಕ್ರಮ ಜರುಗಿಸಬೇಕಿದೆ ಎಂದರು. ಮುರುಘಾ ಮಠದಿಂದ ಬಂದಿರುವ ಮಕ್ಕಳು ನಮ್ಮ ಸುಪರ್ದಿಯಲ್ಲಿ ಸುರಕ್ಷಿತವಾಗಿದ್ದಾರೆ. ಹಾಗೇ ಅವರು ಶಾಲೆಯಲ್ಲಿ ವಿದ್ಯಾಭ್ಯಾಸದ ಕಡೆ ಗಮನ ಹರಿಸಿದ್ದಾರೆ. ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದ್ದೇವೆ. ಅದು ಆದರೆ, ಮತ್ತಷ್ಟು ಮಕ್ಕಳ ರಕ್ಷಣೆಯಾಗಲಿದೆ ಎಂದು ತಿಳಿಸಿದರು.

ಯೋಗಾಸನದಲ್ಲಿ ರಕ್ಷಿತಾಗೆ ಪ್ರಥಮ



ಮೈಸೂರು, ಮಾ. 9–ಮೈಸೂರಿನಲ್ಲಿ ನಡೆದ ಸೌತ್ ಇಂಡಿಯನ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ನಲ್ಲಿ 20 ವರ್ಷದೊಳಗಿನ ಯೋಗಾಸನ ಸ್ಪರ್ಧೆಯಲ್ಲಿ ಕು. ಎಸ್.ಕೆ. ರಕ್ಷಿತಾ ಪ್ರಥಮ ಸ್ಥಾನ ಗಳಿಸಿದ್ದಾರೆ. ಇವರು ವಿವೇಕಾನಂದ ಯೋಗ ಸಂಸ್ಥೆಯ ಯೋಗ ಗುರು ಡಾ. ಪಿ. ಗಣೇಶ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಬಿಜಿಎಸ್ ಸಂಸ್ಥೆಯಲ್ಲಿ ದ್ವಿತೀಯ ಪಿಯು ಓದುತ್ತಿದ್ದಾರೆ. ವಿದ್ಯಾರಣ್ಯಪುರಂನ ಎಸ್. ಸತೀಶ್ ರಾಜ್ ಹಾಗೂ ಶ್ರೀಮತಿ ಎಸ್. ಕವಿತಾ ಅವರ ಪುತ್ರಿ.

ಬಿಜೆಪಿ ಬಿಟ್ಟು ಬೇರೆ ಯಾವುದೇ ಪಕ್ಷಕ್ಕೆ ಮತ ಹಾಕಿ

ಮತದಾರರಲ್ಲಿ ದಲಿತ ವೆಲ್ಫೇರ್ ಟ್ರಸ್ಟ್ ಮನವಿ



ಮೈಸೂರು, ಮಾ.9(ಜಿಎ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಿಟ್ಟು ಬೇರೆ ಯಾವುದಾದರೂ ಪಕ್ಷಕ್ಕೆ ಮತ ಹಾಕಿ ಎಂದು ದಲಿತ ವೆಲ್ಫೇರ್ ಟ್ರಸ್ಟ್‌ನ ಜಿಲ್ಲಾಧ್ಯಕ್ಷ ಶಾಂತರಾಜು ಮತದಾರರಲ್ಲಿ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ನಾಲ್ಕು ವರ್ಷದ ಅವಧಿಯಲ್ಲಿ ದಲಿತರ ಮೇಲೆ ನಿರಂತರವಾಗಿ ಶೋಷಣೆಗಳು ನಡೆಯುತ್ತಿದ್ದು, ನೆಮ್ಮದಿ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿ ಅಮಾಯಕರು ಬಲಿಯಾಗುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಚಾರ ಮಂಡನೆ ಮಾಡುವುದು ತಪ್ಪು ಎಂದರೆ, ಬದುಕುವುದೇ ಕಷ್ಟಕರವಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿಯ ಈ ದಲಿತ ವಿರೋಧಿ ಧೋರಣೆಗೆ ಉದಾಹರಣೆಯಾಗಿ ಕೋಲಾರ ಸಂಸದ ಮುನಿಸ್ವಾಮಿ ಕುಮ್ಮಕ್ಕಿನಿಂದ ಪೊಲೀಸರು ಕೋಲಾರದ ದಲಿತ ಹೋರಾಟಗಾರ ಸಂದೇಶ್ ವಿರುದ್ಧ ಯಾವುದೇ ದೂರು ಇಲ್ಲದಿದ್ದರೂ ಏಕಾಏಕಿ ಬಂಧಿಸಿದ್ದಾರೆ. ಇದರಿಂದ ನೊಂದ ಸಂದೇಶ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರಿಗೆ ಧೈರ್ಯ ತುಂಬುವ ಸಲುವಾಗಿ ರಾಜ್ಯಾದ್ಯಂತ ಸುದ್ದಿಗೋಷ್ಠಿ ನಡೆಸಿ, ಬೆಂಬಲ ಸೂಚಿಸಿದ್ದೇವೆ ಎಂದು ಶಾಂತರಾಜು ತಿಳಿಸಿದರು. ಮೈಸೂರಿನಲ್ಲಿಯೂ ದಲಿತರ ಮೇಲೆ ಶೋಷಣೆಗಳು ನಡೆಯುತ್ತಿದ್ದು, ಬಿಜೆಪಿಯ ಓರ್ವ ಕಾರ್ಯಕರ್ತ ದಲಿತರ ಮೇಲೆ ಮಾಡಿದ ದೌರ್ಜನ್ಯದ ವಿರುದ್ಧ ಪೊಲೀಸರು ಪ್ರಕರಣವನ್ನು ದಾಖಲಿಸಲಿಲ್ಲ. ದಲಿತರ ವಿರುದ್ಧವೇ ನಿರಂತರ ಶೋಷಣೆಗಳು ನಡೆಯುತ್ತಿವೆ. ಆದ್ದರಿಂದ ಮುಂದಿನ ಚುನಾವಣೆಯಲ್ಲಿಯೂ ಬಿಜೆಪಿ ಅಧಿಕಾರಕ್ಕೆ ಬಂದರೆ, ದಲಿತರು ಬದುಕುವುದೇ ಕಷ್ಟಕರವಾಗಲಿದೆ. ಈ ಹಿನ್ನೆಲೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಹೊರತುಪಡಿಸಿ ಬೇರೆ ಯಾವುದಾದರೂ ಪಕ್ಷಕ್ಕೆ ಮತ ನೀಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಚಿಕ್ಕ ಅಂದಾನಿ, ಶಿವಪ್ಪ, ಸಿದ್ದು ಸ್ವಾಮಿ ಉಪಸ್ಥಿತರಿದ್ದರು.

ಭವ್ಯ ಭಾರತಕ್ಕಾಗಿ ಮತ ಚಲಾಯಿಸುವೆ

101 ವರ್ಷದ ಮಾಜಿ ಯೋಧ ವೀರರಾಜ್ ಅರಸ್ ಉತ್ಸಾಹದ ನುಡಿ

ಮೈಸೂರು, ಮಾ.9(ಆರ್‌ಕೆ)– ಭವಿಷ್ಯದ ಭವ್ಯ ಭಾರತ ನಿರ್ಮಾಣಕ್ಕಾಗಿ ತಪ್ಪದೇ ಮತ ಚಲಾಯಿಸುವೆ ಎಂದು ಶತಾಯುಷಿ 101 ವರ್ಷದ ಮಾಜಿ ಸೈನಿಕ ಎಂ.ಕೆ.ವೀರ ರಾಜ ಅರಸ್ ಅತ್ಯಂತ ಉತ್ಸಾಹದಿಂದ ತಿಳಿಸಿದ್ದಾರೆ.

91 ವರ್ಷದ ಪತ್ನಿ ಶ್ರೀಮತಿ ಬಿ.ನಾಗರತ್ನರೊಂದಿಗೆ ಮೈಸೂರಿನ ಕುವೆಂಪುನಗರದ 2ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಸಿಐಟಿಬಿಯ ಎಲ್‌ಐಜಿ ಮನೆಯಲ್ಲಿ ನೆಲೆಸಿರುವ ವೀರರಾಜ ಅರಸ್, 'ಮೈಸೂರು ಮಿತ್ರ'ನಲ್ಲಿ ಮತದಾನ ಮಾಡುವ ಆಸಕ್ತಿ ಹೊರ ಹಾಕಿದರು.

ಇಲ್ಲಿಯವರೆಗೂ ಪ್ರತಿ ಬಾರಿಯೂ ಪತ್ನಿಯೊಂದಿಗೆ ಮತಗಟ್ಟೆಗೆ ತೆರಳಿ ನಮ್ಮ ಹಕ್ಕು ಚಲಾಯಿಸಿದ್ದೇವೆ. ಈಗ ನನಗೆ ನಿಲ್ಲಲು, ನಡೆಯಲು ಆಗುತ್ತಿಲ್ಲ. ಅಂಚೆ ಮತದಾನಕ್ಕೆ ಅವಕಾಶ ನೀಡಿದರೆ, ನಾವು ಚಲಾಯಿಸುತ್ತೇವೆ ಎಂದು ಹೇಳುವ ಮೂಲಕ ತಮ್ಮ ಹಕ್ಕು ಚಲಾಯಿಸಲು ಉತ್ಸಾಹ ತೋರಿದರು. ನಿನ್ನೆಯಷ್ಟೇ ಶತಾಯುಷಿಗಳು, 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಮತದಾನ ಸಂಬಂಧ ಸಂವಾದ ನಡೆಸುವ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಶತಾಯುಷಿ ಎಂ.ಕೆ.ವೀರರಾಜ ಅರಸ್ ಅವರನ್ನು ಸಂಪರ್ಕಿಸಿ, ಅವರ ಆರೋಗ್ಯ ವಿಚಾರಿಸುವುದರೊಂದಿಗೆ ಮತದಾನ ಸಂಬಂಧ ಚರ್ಚಿಸಿದ್ದರು. 1940ರಲ್ಲಿ ಸೇನೆಗೆ ಸೇರಿ, 26 ವರ್ಷಗಳ ಸೇವೆ ನಂತರ ನಾನು 1966ರಲ್ಲಿ ನಿವೃತ್ತಿಯಾಗಿದ್ದೇನೆ. ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರೂ ಈಗಾಗಲೇ ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದು, 74 ವಯೋಮಾನ ಮೇಲ್ಪಟ್ಟವರು. ಇವರೆಲ್ಲಾ ಬೆಂಗಳೂರಲ್ಲಿ ನೆಲೆಸಿದ್ದಾರೆ.



91 ವರ್ಷದ ಪತ್ನಿ ಬಿ.ನಾಗರತ್ನರೊಂದಿಗೆ 101 ವರ್ಷದ ಶತಾಯುಷಿ ಎಂ.ಕೆ.ವೀರರಾಜ್ ಅರಸ್

ಇದೇ ಮೊದಲ ಬಾರಿ ಜಿಲ್ಲಾಧಿಕಾರಿಗಳು ಶತಾಯುಷಿಗಳು ಸೇರಿದಂತೆ 80 ವರ್ಷ ಮೇಲ್ಪಟ್ಟವರನ್ನು ವರ್ಚ್ಯುಯಲ್ ಮೂಲಕ ಸಂಪರ್ಕಿಸಿ, ಅವರ ಯೋಗಕ್ಷೇಮ ವಿಚಾರಿಸಿ, ಮತ ಚಲಾವಣೆ ಸಂಬಂಧ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ವಯೋಸಹಜ ಖಾಯಿಲೆಯಿಂದ ಹಾಸಿಗೆ ಹಿಡಿದಿರುವವರು, ಮತಗಟ್ಟೆಗಳಿಗೆ ತೆರಳಲು ಸಾಧ್ಯವಾಗದವರೂ ಮತದಾನ ಮಾಡಲು ಪರ್ಯಾಯ ವ್ಯವಸ್ಥೆ ಮಾಡುವ ಸಂಬಂಧ ಭಾರತ ಚುನಾವಣಾ ಆಯೋಗದೊಂದಿಗೆ ಚರ್ಚಿಸಿ, ಸಲಹೆ ಪಡೆಯಲು ಯತ್ನಿಸುತ್ತಿರುವ ಜಿಲ್ಲಾಧಿಕಾರಿಗಳು, ಜನರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ.

ಅಕ್ಕಯ್ಯಮ್ಮ, ನಾಗೇಗೌಡ, ಸಿದ್ದಮ್ಮ, ಶಿವಪ್ಪ, ಸಣ್ಣಮ್ಮ, ನಿಂಗೇಗೌಡ ಸೇರಿದಂತೆ ಜಿಲ್ಲೆಯ ಹಲವು ಶತಾಯುಷಿಗಳೊಂದಿಗೆ ಡಾ. ರಾಜೇಂದ್ರ ಬುಧವಾರ ವೀಡಿಯೋ ಕಾನ್ಫರೆನ್ಸ್ ಮೂಲಕ ಸಮಾಲೋಚಿಸಿದ್ದಾರೆ.

ಉಚಿತ ಚಿಕಿತ್ಸಾ ಶಿಬಿರ

ಮೈಸೂರು,ಮಾ.9–ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಹೊರರೋಗಿ ಶಲ್ಯತಂತ್ರ ವಿಭಾಗದಲ್ಲಿ (ರೂಮ್ ನಂಬರ್–06) ಮಾರ್ಚ್ 13 ರಿಂದ 18ರವರೆಗೆ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ Piles, Fistula, fissure, Pilonidal sinus, Varicose veins, Ulcers (ದುಷ್ಟ ವ್ರಣಗಳು) (Corn), Keloid, Warts, ಮಂಡಿನೋವು, ಬೆನ್ನುನೋವು & ಹಿಮ್ಮಡಿ ನೋವು ಈ ಎಲ್ಲಾ ತೊಂದರೆಗಳಿಗೆ ತಪಾಸಣಾ ಮತ್ತು ಉಚಿತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಶಲ್ಯತಂತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕ ಡಾ. ನಳಿನಿ .ಎನ್ (ಮೊ.ನಂ: 7975491224) ಅವರನ್ನು ಬೆಳಗ್ಗೆ 9 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.12ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಪ್ರಧಾನಿ ಆಗಮನ: ಅಗತ್ಯ ಭದ್ರತೆ, ಶಿಷ್ಟಾಚಾರ ಪಾಲನೆಯಾಗಲಿ

ಎಸ್‌ಪಿಜಿ ಅಧಿಕಾರಿ ಅಂಬರೀಷ್ ಉಪಾಧ್ಯಾಯ ಸೂಚನೆ

ಮೈಸೂರು, ಮಾ.9– ಪ್ರಧಾನಮಂತ್ರಿ ನರೇಂದ್ರ ಮೋದಿ ಮಾ.12 ರಂದು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ಉದ್ಘಾಟಿಸಲು ಮಂಡ್ಯ ಜಿಲ್ಲೆಗೆ ಆಗಮಿಸುತ್ತಿದ್ದು, ಅವರು ಮೊದಲು ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ನಂತರ ಹೆಲಿಕಾಪ್ಟರ್ ಮೂಲಕ ಮಂಡ್ಯಕ್ಕೆ ಪ್ರಯಾಣಿಸುವರು. ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಸೂಕ್ತ ಭದ್ರತೆ ಮತ್ತು ಶಿಷ್ಟಾಚಾರ ಕಲ್ಪಿಸುವಂತೆ ವಿಶೇಷ ಭದ್ರತಾ ಪಡೆಯ (ಎಸ್.ಪಿ.ಜಿ) ಅಧಿಕಾರಿ ಅಂಬರೀಷ್ ಉಪಾಧ್ಯಾಯ ತಿಳಿಸಿದರು.


ಇಂದು ಮೈಸೂರು ವಿಮಾನ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳು ಬೆಳಗ್ಗೆ 11.10ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ಹೆಲಿಕಾಪ್ಟರ್ ಮೂಲಕ ಮಂಡ್ಯಕ್ಕೆ ತೆರಳುವರು. ಪುನಃ ಮಧ್ಯಾಹ್ನ 1.35ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಮರಳಿ ಹುಬ್ಬಳ್ಳಿಗೆ ತೆರಳುವರು. ಈ ಸಂದರ್ಭದಲ್ಲಿ ಅಗತ್ಯ ಭದ್ರತೆ ಒದಗಿಸುವುದು ಸ್ಥಳೀಯ ಪೊಲೀಸ್ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಪ್ರಧಾನಮಂತ್ರಿಗಳನ್ನು ಸ್ವಾಗತಿಸಲು ಮುಖ್ಯಮಂತ್ರಿಗಳು, ಮಂತ್ರಿಗಳು ಹಾಗೂ ಕೇಂದ್ರ ಮಂತ್ರಿಗಳು ಆಗಮಿಸುವರು. ಇವರಿಗೆ ಶಿಷ್ಟಾಚಾರ ಪಾಲನೆಯಾಗಬೇಕು. ಹತ್ತಿರದಲ್ಲಿ ವ್ಯವಸ್ಥಿತ ಆಸ್ಪತ್ರೆ ಗುರುತಿಸಿಕೊಂಡಿರಬೇಕು. 3 ಆಂಬುಲೆನ್ಸ್ ಸೇವೆ ಒದಗಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು. ಅನಿವಾರ್ಯ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ರಸ್ತೆ ಮೂಲಕ ಮಂಡ್ಯಕ್ಕೆ ಪ್ರಯಾಣ ಬೆಳೆಸುವ ಸಂದರ್ಭ ಉಂಟಾದರೆ ಈ ನಿಟ್ಟಿನಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆಯೂ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೇರಿದಂತೆ ಏರ್‌ಪೋರ್ಟ್ ಅಥಾರಿಟಿ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಲಯನ್ಸ್ ಕ್ಲಬ್ ಆಫ್ ಮೈಸೂರ್ ಗಂಗೋತ್ರಿ ವತಿಯಿಂದ ಮಹಿಳಾ ದಿನಾಚರಣೆ



ಮೈಸೂರು, ಮಾ.9– ಮೈಸೂರ್ ಸೆಂಟ್ರಲ್ ಲಯನ್ಸ್ ಸಂಸ್ಥೆ ಸಭಾಂಗಣ (ಡಿ.ಸಿ. ಆಫೀಸ್ ಹತ್ತಿರ) ಲಯನ್ಸ್ ಕ್ಲಬ್ ಆಫ್ ಮೈಸೂರ್ ಗಂಗೋತ್ರಿ ಸಂಸ್ಥೆಯ 17ನೇ ಸಂಸ್ಥಾಪನ ದಿನಾಚರಣೆ ಮತ್ತು ಮಹಿಳಾ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಯಿತು. ಸೇವಾ ಕಾರ್ಯಕ್ರಮವಾಗಿ 24000 ರೂ.ಗಳ ಒಂದು ವಿದ್ಯುತ್ ಚಾಲಿತ ಹೊಲಿಗೆ ಯಂತ್ರ, ಕ್ಯಾನ್ಸರ್ ರೋಗಿಗೆ 16000 ರೂ.ಗಳು, ಮತ್ತು ಬಡ ವಿದ್ಯಾರ್ಥಿ ಕಾಲೇಜಿಗೆ ಶುಲ್ಕಕ್ಕೆ 7000 ರೂಗಳನ್ನು ನೀಡಲಾಯಿತು. ಮಾಜಿ ಜಿಲ್ಲಾ ರಾಜ್ಯಪಾಲರು ಲಯನ್ ಕೆ.ದೇವೇಗೌಡ, ಜಿಲ್ಲಾ ರಾಜ್ಯಪಾಲರು ಎಲೆಕ್ಟ್ ಲಯನ್ ಡಾ॥ ಎನ್. ಕೃಷ್ಣೇಗೌಡ, ಉಪ ಜಿಲ್ಲಾ ರಾಜ್ಯಪಾಲ ಲಯನ್ ಎನ್. ಸುಬ್ರಹ್ಮಣ್ಯ, ಉಪ ಜಿಲ್ಲಾ ರಾಜ್ಯಪಾಲ ಕೆ.ಎಲ್.ರಾಜಶೇಖರ್ ಭಾಗವಹಿಸಿದ್ದರು. ಗಂಗೋತ್ರಿ ಲಯನ್ ಸಂಸ್ಥೆ ಅಧ್ಯಕ್ಷರಾದ ಲಯನ್ ಮೀನಾ ರವಿಶಂಕರ್ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಬಿ.ಮಾಲತಿ ಸುನಿಲ್‌ಕುಮಾರ್ ಮತ್ತು ಮಂಡ್ಯ ಪ್ರೇರಣಾ ವಿಶೇಷಚೇತನರ ಟ್ರಸ್ಟ್ ಸಂಸ್ಥಾಪಕರಾದ ಶ್ರೀಮತಿ ಡಿ.ಆರ್. ಚೈತ್ರ ರವಿಕುಮಾರ್ ಅವರನ್ನು ಮಹಿಳಾ ದಿನಾಚರಣೆ ವಿಶೇಷವಾಗಿ ಸನ್ಮಾನಿಸಲಾಯಿತು. ಸಂಸ್ಥಾಪನ ದಿನಾಚರಣೆ ಸಮಾರಂಭದ ಅಧ್ಯಕ್ಷರಾದ ಶ್ರೀಮತಿ ಮಾಲಾ ಚಂದ್ರಶೇಖರ್, ಕಾರ್ಯದರ್ಶಿ ಲಯನ್ ಅನುರಾಧ ನಂದೀಶ್, ಖಜಾಂಚಿ ಲಯನ್ ಕಲಾವತಿ ಮುಂತಾದ ಸದಸ್ಯರು ಹಾಜರಿದ್ದರು.

ಸಾಹಿತಿ ಮಲೆಯೂರು ಗುರುಸ್ವಾಮಿ ನಿಧನಕ್ಕೆ ಸಚಿವ ವಿ.ಸೋಮಣ್ಣ ಸಂತಾಪ



ಮೈಸೂರು, ಮಾ.9–ಹಿರಿಯ ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ ಅವರ ನಿಧನಕ್ಕೆ ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರೂ ಆದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತೀವ್ರ ಸಂತಾಪ ಸೂಚಿಸಿದ್ದಾರೆ.

ಸಮಾಜದ ಚಿಂತಕರು, ಕವಿಗಳು,ವಿಮರ್ಶಕರು, ಉತ್ತಮವಾಕ್ಪಟು, ಮೇರು ಸಾಹಿತಿ, ಸರಳ–ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ್ದ, ನನ್ನ ಆತ್ಮೀಯರೂ ಆಗಿದ್ದ ಪ್ರೊ.ಮಲೆಯೂರು ಗುರುಸ್ವಾಮಿಯವರ ನಿಧನದಿಂದ ನನಗೆ ಅತೀವ ದುಃಖವಾಗಿದೆ. ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಶರಣ ತತ್ವ ಮತ್ತು ಚಿಂತನೆಗಳನ್ನು ನಾಡಿನ ಜನತೆಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು. ಅವರ ನಿಧನದಿಂದ ಸಾಹಿತ್ಯ ಲೋಕದ ಮತ್ತೊಂದು ಕೊಂಡಿ ಕಳಚಿರುವುದು ಇಡೀ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ.

ಅಗಲಿದ ಚೇತನಕ್ಕೆ ಭಗವಂತ ಚಿರಶಾಂತಿ ನೀಡಲಿ. ಅವರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ಸಚಿವ ವಿ.ಸೋಮಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೇಷಭೂಷಣ, ಪ್ರಸಾದನ ಕಾರ್ಯಾಗಾರ

ಮೈಸೂರು, ಮಾ.9– ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವತಿಯಿಂದ ವೇಷಭೂಷಣ ಹಾಗೂ ಪ್ರಸಾದನ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ರಂಗಕರ್ಮಿ ಬಿ.ಎಂ. ರಾಮಚಂದ್ರ ಅವರು ಮಾರ್ಚ್ 13 ರಿಂದ 15 ರವರೆಗೆ ಮಧ್ಯಾಹ್ನ 2.30 ರಿಂದ 5 ಗಂಟೆಯವರೆಗೆ ಕಾರ್ಯಾಗಾರವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಿಕೊಡುವರು. ನಾಟಕ ಹಾಗೂ ನೃತ್ಯಾಸಕ್ತ ವಿದ್ಯಾರ್ಥಿಗಳು ಹಾಗೂ ಕಲಾಸಕ್ತರು ಭಾಗವಹಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ


ಬ್ರಿಗೇಡಿಯರ್ (ನಿವೃತ್ತ) ಮುಕ್ಕಾಟೀರ ಅಶೋಕ್ ಕಾರ್ಯಪ್ಪ

ಮೈಸೂರು, ಮಾ.9–ಮೈಸೂರಿನ ಸಿದ್ಧಾರ್ಥನಗರದ ಟಿ. ನರಸೀಪುರ ರಸ್ತೆಯಲ್ಲಿರುವ ಬ್ರಿಗೇಡ್ ಹಾರಿಜಾನ್ ಅಪಾರ್ಟ್‌ಮೆಂಟ್‌ನ ನಂ. 1006ರ ನಿವಾಸಿ ಬ್ರಿಗೇಡಿಯರ್ (ನಿವೃತ್ತ) ಮುಕ್ಕಾಟೀರ ಅಶೋಕ್ ಕಾರ್ಯಪ್ಪ ಗುರುವಾರ ಬೆಳಗ್ಗೆ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು.



ಮೂಲತಃ ಕೊಡಗು ಜಿಲ್ಲೆಯ ದೇವನಗೇರಿಯವರಾದ ಇವರು ಪತ್ನಿ ಚಿತ್ರಾ ಕಾರ್ಯಪ್ಪ, ಪುತ್ರರಾದ ಎಂ.ಸಿ. ಪೊನ್ನಪ್ಪ ಮತ್ತು ಎಂ.ಸಿ. ಮುತ್ತಣ್ಣ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.3.2023 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಕೈಲಾಸ ವಾಹನೋತ್ಸವ ನಂತರ ಶಯನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ದೃಶ್ಯತಾ ಪರಿಕರಗಳು : ನಿಮ್ಮ ಸಂಶೋಧನೆಯ ಪ್ರಭಾವವನ್ನು ಹೆಚ್ಚಿಸುವ ಕಾರ್ಯತಂತ್ರಗಳು ಮತ್ತು ಸಂಪನ್ಮೂಲಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎ.ಪಿ. ಜ್ಞಾನಪ್ರಕಾಶ್, ಗೌರವ ಅತಿಥಿಗಳು : ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಅಧ್ಯಕ್ಷ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಬೆಳಗ್ಗೆ 10ಕ್ಕೆ.

■ **ಅಮೃತ ವಿಶ್ವವಿದ್ಯಾಪೀಠಂ, ದೃಶ್ಯ ಸಂವಹನ ವಿಭಾಗ :** ಸಿನಿರಮಾ–2023, ರಾಷ್ಟ್ರ ಮಟ್ಟದ ಕಿರು ಚಲನಚಿತ್ರೋತ್ಸವ, ಉದ್ಘಾಟನೆ : ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಮಂಡ್ಯ ರಮೇಶ್, ಬೆಳಗ್ಗೆ 11.30ಕ್ಕೆ ಡಾ. ನಾಗತಿಹಳ್ಳಿ ಚಂದ್ರಶೇಖರ್ ಅವರಿಂದ ಚಿತ್ರಕಥೆ ಬರವಣಿಗೆ ಕುರಿತು ಉಪನ್ಯಾಸ, ಮಧ್ಯಾಹ್ನ 2ಕ್ಕೆ ಕೊಬ್ಬಿಯ ಸ್ಟೋರೀಸ್ ಸೋಶಿಯಲ್ ಸಂಸ್ಥಾಪಕಿ ಡಾ. ಸಂಗೀತಾ ಜಾನಚಂದ್ರನ್ ಅವರಿಂದ 'ಸಿನಿಮಾ ಮಾರ್ಕೆಟಿಂಗ್ ಪ್ರೊಮೋಶನ್ಸ್' ಕುರಿತು ಉಪನ್ಯಾಸ, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ ಆವರಣ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮಹಿಮಾ ಪ್ರಕಾಶನ:** ಪ್ರೊ. ಜಿ. ಚಂದ್ರಶೇಖರ್ ಅವರ ಅನುವಾದಿತ ಕೃತಿ ಅಜ್ಞಾತವಾಸದ ಒಡನಾಡಿಗಳು ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಅಧ್ಯಕ್ಷತೆ ಮತ್ತು ಪುಸ್ತಕ ಬಿಡುಗಡೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕೃತಿ ಕುರಿತು ಮಾತನಾಡುವವರು: ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಪಿ. ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣನವರ್, ಕಾಲೇಜು ಪ್ರಾಚಾರ್ಯ ಡಾ.ಎಂ.ಶಿವಲಿಂಗೇಗೌಡ, ಸ್ಥಳ: ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆವರಣ, ಬೆಳಗ್ಗೆ 10.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ–ಎಸ್.ಸಂಗೀತಾ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಸುನಿಲ್ ಎಂ.ಎಸ್.–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ರೋಹಿಣಿ ಸುಧಾಮ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ– ಸಖೀ ಸಂವಾದ, ವಿಷಯ– ಬೇಸಿಗೆಯಲ್ಲಿ ತಂಪಾಗಿರುವುದೆ ಹೇಗೆ?, ಪ್ರಸ್ತುತಿ– ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಕಿಸಾನ್‌ವಾಣಿ–ಕೋವಿಡ್ ಸಂಕಷ್ಟದಲ್ಲಿ ಹಾಗೂ ನಂತರದ ದಿನಗಳಲ್ಲಿ ಕೈ ಹಿಡಿದ ಹೈನುಗಾರಿಕೆ ಕುರಿತು ಪಿ. ಹರೀಶ್ ಕುಮಾರ್ ಅವರೊಂದಿಗೆ ಸಂದರ್ಶನ, 9.15 ಜನಪದ ಸಂಗೀತ–ಸಿ.ಎಂ.ನರಸಿಂಹಮೂರ್ತಿ, 10.00 ವಾದ್ಯವೃಂದ, 10.30 ಸವಿನೆನಪು

■ **ಡಿ. ಬನುಮಯ್ಯ ಬಾಲಿಕಾ ಪ್ರೌಢಶಾಲೆ :** ಶಾರದಾ ಪೂಜಾ ಮತ್ತು 10ನೇ ತರಗತಿ ಬೀಳ್ಕೊಡುಗೆ ಸಮಾರಂಭ, ಅಧ್ಯಕ್ಷತೆ : ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಹೆಚ್.ಎಸ್. ತಿಪ್ಪೇಸ್ವಾಮಿ, ಮುಖ್ಯ ಅತಿಥಿಗಳು : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಬನ್ನೂರು ಕೆ. ರಾಜು, ಸ್ಥಳ: ಡಿ. ಬನುಮಯ್ಯ ಬಾಲಿಕಾ ಪ್ರೌಢಶಾಲೆ ಆವರಣ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಸಂವಹನ : ಪ್ರಕಾಶಕರು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ:** ರವಿ ಹಂಜ್, ಶಿಕಾಗೋ ಅವರ ಅರಿದಡೆ ಆರದು ಮರೆದೊಡೆ ಮೂರದು ಕೃತಿ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಹಿರಿಯ ವಿದ್ವಾಂಸ, ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕೃತಿ ಲೋಕಾರ್ಪಣೆ: ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್, ಕೃತಿ ಕುರಿತು ಮಾತನಾಡುವವರು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉಪಸ್ಥಿತರು: ರವಿ ಹಂಜ್, ಡಿ.ಎನ್. ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** ಮಂಜಿರ ಮಹೋತ್ಸವ–2023, ಉದ್ಘಾಟನೆ: ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಡಾ. ನಾಗೇಶ್ ವಿ.ಬೆಟ್ಟಕೋಟೆ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಅಧ್ಯಕ್ಷತೆ: ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಅಧ್ಯಕ್ಷ ಎಂ.ಕೆ.ಬಾಲರಾಜು, ಉಪಸ್ಥಿತರು: ಡಾ.ಕೃಪಾ ಫಡ್ಕೆ, ವಿದ್ವಾನ್ ಎಸ್. ವಿಜಯ್‌ಕುಮಾರ್, ಸ್ಥಳ: ಗಾನ ಭಾರತೀ, ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.45ರಿಂದ.

ಸಜ್ಜೇಹುಂಡಿಯಲ್ಲಿಂದು, ಮೈಸೂರು ತಾ.

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ :** ಶ್ರೀ ಶನೇಶ್ವರಸ್ವಾಮಿ ಆರಾಧನಾ ಹಾಗೂ ಮಂಟಪೋತ್ಸವ ಸಮಾರಂಭ, ನೂತನ ಕಳಸ ಸ್ಥಾಪನಾದಿ ಕುಂಭಾಭಿಷೇಕ, ಬೆಳಗ್ಗೆ 7.30 ರಿಂದ ಗಣಪತಿ ಪೂಜೆ, ಪುಣ್ಯಾಹ, ದೇವತಾನಾಂದಿಯಾಗಿ, ಪ್ರಾಕಾರ ದೇವತಾಮೂರ್ತಿ, ಕಳಸ ಸ್ಥಾಪನೆಯಾಗಿ ಶ್ರೀ ಗಣಪತಿ ಹೋಮ.

ಚಾಮರಾಜ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಬೂತ್ ಸಮಿತಿ ಅಧ್ಯಕ್ಷರ ನೇಮಕ

19 ವಾರ್ಡ್‌ಗಳಿಗೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳಿಗೆ ನೇಮಕಾತಿ ಪತ್ರ ವಿತರಣೆ



ಮೈಸೂರು, ಮಾ.9(ಎಂಕೆ)– ನಗರದ ಪಡುವಾರಹಳ್ಳಿಯ ಖಾಸಗಿ ಸಮುದಾಯ ಭವನದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಮಹಾಶಕ್ತಿ ಕೇಂದ್ರ ಸಮಿತಿ (ವಾರ್ಡ್) ಹಾಗೂ ಬೂತ್ ಸಮಿತಿ ಅಧ್ಯಕ್ಷರ ನೇಮಕಾತಿ ಸಭೆ ನಡೆಯಿತು.

ಈ ವೇಳೆ ಕ್ಷೇತ್ರದ 19 ವಾರ್ಡ್‌ಗಳಿಗೆ ಮಹಿಳಾ ಅಧ್ಯಕ್ಷರು, ಐವರು ಉಪಾಧ್ಯಕ್ಷರು, ಇಬ್ಬರು ಕಾರ್ಯದರ್ಶಿಗಳು ಹಾಗೂ 244 ಬೂತ್‌ಗಳ ಅಧ್ಯಕ್ಷರನ್ನು ಆಯ್ಕೆ ಮಾಡಿ, ನೇಮಕಾತಿ ಪತ್ರ ವಿತರಿಸಲಾಯಿತು. ನೂತನ ಮಹಿಳಾ ಪದಾಧಿಕಾರಿಗಳಿಗೆ ಶಾಸಕ ಎಲ್.ನಾಗೇಂದ್ರ ನೇಮಕಾತಿ ಪತ್ರ ನೀಡಿ, ಶುಭ ಕೋರಿದರಲ್ಲದೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಅವರು, ಕ್ಷೇತ್ರದ ಪ್ರತಿಯೊಂದು ವಾರ್ಡ್‌ನಲ್ಲಿಯೂ ಬಿಜೆಪಿ ಪಕ್ಷ ಸಂಘಟನೆಯಾಗಬೇಕು. 2023ರ ವಿಧಾನಸಭಾ ಚುನಾವಣೆಯ ನೇತೃತ್ವವನ್ನು ಮಹಿಳೆಯರು ವಹಿಸಿಕೊಳ್ಳಬೇಕು. ವಿಧಾನ ಸಭಾ ಚುನಾವಣೆ ನಂತರ ಮೈಸೂರು ನಗರಪಾಲಿಕೆ ಹಾಗೂ ಲೋಕಸಭೆ ಚುನಾವಣೆ ಬರಲಿದ್ದು, ಮಹಿಳಾ ಪದಾಧಿಕಾರಿಗಳು, ಕಾರ್ಯಕರ್ತರು ಮನೆ ಮನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳನ್ನು ತಿಳಿಸುವ ಮೂಲಕ ಮತ ನೀಡುವಂತೆ ಮನವೊಲಿಸಬೇಕು ಎಂದು ತಿಳಿಸಿದರು.

ದೇಶದಲ್ಲಿ ಜನರು ಆರೋಗ್ಯ, ನೆಮ್ಮದಿಯಿಂದ ಜೀವನ ಸಾಗಿಸಲು ಪ್ರಧಾನಿ ನರೇಂದ್ರ ಮೋದಿಯವರು ಕಾರಣ. ಕೊರೊನಾ ಸಂಕಷ್ಟ ಪರಿಸ್ಥಿತಿಯಲ್ಲಿ ದೇಶದ 135 ಕೋಟಿ ಜನರಿಗೆ ಉಚಿತ ಲಸಿಕೆ ವಿತರಿಸುವ ಮೂಲಕ ಜೀವ ಉಳಿಸಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಇನ್ನು ಮಾಸ್ಕ್ ಹಾಕಿಕೊಂಡಿರಬೇಕಾದ ಪರಿಸ್ಥಿತಿಯಿದೆ. ಆದರೆ ನಮ್ಮ ದೇಶದಲ್ಲಿ ಕೊರೊನಾ ಭಯ ಮರೆತು ಜೀವನ ನಡೆಸುತ್ತಿದ್ದೇವೆ. ಆದ್ದರಿಂದ ನಾವೆಲ್ಲರೂ ಪ್ರಧಾನಿಗಳಿಗೆ ಅಭಿನಂದನೆ ಸಲ್ಲಿಸಬೇಕು. ಮತ್ತೊಮ್ಮೆ ಅವರನ್ನೇ ಪ್ರಧಾನಿಯನ್ನಾಗಿ ಮಾಡಬೇಕು ಎಂದು ಹೇಳಿದರು.

ಮಹಿಳೆಯರಿಗೆ ಆದ್ಯತೆ: ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಿರುವುದು ಬಿಜೆಪಿಯಲ್ಲಿ ಮಾತ್ರ. ಬುಡಕಟ್ಟು ಸಮಾಜದ ಪ್ರಾಮಾಣಿಕ ಮಹಿಳಾ ರಾಜಕಾರಣಿಯಾದ ದ್ರೌಪದಿ ಮುರ್ಮು ಅವರನ್ನು ಅತ್ಯುನ್ನತ ಸ್ಥಾನ ದೇಶದ ರಾಷ್ಟ್ರಪತಿ ಹುದ್ದೆ ನೀಡಿ ಗೌರವಿಸಿದೆ. ಇದು ಬಿಜೆಪಿಯಲ್ಲಿ ಮಾತ್ರ ಸಾಧ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳೆಯರಿಗೆ ಪೂಜ್ಯ ಸ್ಥಾನ: ಸಭಾ ಕಾರ್ಯಕ್ರಮ ಉದ್ಘಾಟಿಸಿದ ಮೇಯರ್ ಶಿವಕುಮಾರ್ ಮಾತನಾಡಿ, ಭಾರತದ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಪೂಜ್ಯ ಸ್ಥಾನ ನೀಡಲಾಗಿದೆ. ಭೂಮಿ, ನದಿ, ಪ್ರಕೃತಿಯನ್ನು ಮಾತೃ ಸ್ವರೂಪದಂತೆ ಕಾಣುತ್ತಿದ್ದೇವೆ ಎಂದು ಹೇಳಿ ನೆರೆದಿದ್ದ ಮಹಿಳೆಯರಿಗೆ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಶುಭಾಷಯ ತಿಳಿಸಿದರಲ್ಲದೆ ದೇಶದಲ್ಲಿ ಶೇ.50ಕ್ಕಿಂತ ಹೆಚ್ಚಾಗಿರುವ ಮಹಿಳಾ ಮತದಾರರು ಮನಸ್ಸು ಮಾಡಿದರೆ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗುತ್ತವೆ. ಮನೆಯ ಯಜಮಾನಿಯ ಮನವೊಲಿಸಿದರೆ, ಇಡೀ ಕುಟುಂಬವೇ ಅವರ ಹಿಂದೆ ಇರಲಿದೆ ಎಂದರು.

ಮೈಸೂರು ನಗರ ಭಾಜಪ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮ ನಂದೀಶ್, ಮಹಿಳಾ ಮೋರ್ಚಾ ಉಸ್ತುವಾರಿ ಗೋಪಾಲ ರಾಜೆ ಅರಸ್, ಪಾಲಿಕೆ ಸದಸ್ಯರುಗಳಾದ ಸಿ.ವೇದಾವತಿ, ಪ್ರಮೀಳಾ ಭರತ್, ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ, ನಾಗರತ್ನಗೌಡ, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಲಲನಾ ಧನರಾಜ್, ಬಿ.ಎಲ್.ಎ–1 ದಿನೇಶ್ ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್, ವಾರ್ಡ್–4ರ ಅಧ್ಯಕ್ಷೆ ರಾಜೇಶ್ವರಿ ಮತ್ತಿತರರಿದ್ದರು.

ಸುಯೋಗ್ ಆಸ್ಪತ್ರೆಯಲ್ಲಿ ಕಿಡ್ನಿ ದಿನಾಚರಣೆ

ಮೂತ್ರಪಿಂಡ ಆರೋಗ್ಯ ಕಾಯ್ದುಕೊಳ್ಳುವ ಬಗ್ಗೆ ತಜ್ಞ ವೈದ್ಯರಿಂದ ಟಿಪ್ಸ್



ಮೈಸೂರು, ಮಾ.9– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ 'ವಿಶ್ವ ಕಿಡ್ನಿ ದಿನಾಚರಣೆ' ಅಂಗವಾಗಿ ಡಯಾಲಿಸಿಸ್ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಿಡ್ನಿಗೆ ಸಂಬಂಧಪಟ್ಟ ಕಾಯಿಲೆಗಳನ್ನು ತಡೆಗಟ್ಟುವ ಕುರಿತು ಮಾತನಾಡಿದ ಮೂತ್ರ ಜನಕಾಂಗ ತಜ್ಞ ಡಾ.ಕೆ.ಜಿ.ಅರುಣ್, ಪ್ರಪಂಚದಲ್ಲಿ ಕಂಡು ಬರುತ್ತಿರುವ ಶೇ 70 ಕ್ಕೂ ಹೆಚ್ಚು ಮೂತ್ರ ಜನಕಾಂಗದ ಕಾಯಿಲೆಗಳಿಗೆ ಸಕ್ಕರೆ ಕಾಯಿಲೆ ಹಾಗೂ ರಕ್ತದೊತ್ತಡ ಮುಖ್ಯ ಕಾರಣವಾಗಿದ್ದು, ಆರಂಭದಲ್ಲೇ ನಿಯಂತ್ರಿಸಿದರೆ ಕಿಡ್ನಿ ವಿಫಲತೆಯನ್ನು ತಡೆಯಬಹುದಾಗಿದೆ. ಮೂತ್ರ ಜನಕಾಂಗದ ವಿಫಲತೆಯನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ. ಈ ಹಂತದ ಕಾಯಿಲೆಗೆ ಡಯಾಲಿಸಿಸ್ ಅಥವಾ ಮೂತ್ರಜನಕಾಂಗ ನಾಟಿ ಅತ್ಯವಶ್ಯಕವಾದುದರಿಂದ ಜಾಗ್ರತೆ ವಹಿಸುವುದೇ ಸೂಕ್ತ ಎಂದು ಜಾಗೃತಿ ಮೂಡಿಸಿದರು.

ಶೇ15 ರಷ್ಟು ಮೂತ್ರಜನಕಾಂಗದ ವಿಫಲತೆ ಇರುವವರಿಗೆ ಮಾತ್ರ ನಾಟಿಗಾಗಿ ಕಿಡ್ನಿ ಲಭ್ಯವಿದ್ದು, ಇನ್ನಿತರರೆಲ್ಲರಿಗೂ ಡಯಾಲಿಸಿಸ್ ಚಿಕಿತ್ಸೆ ಅನಿವಾರ್ಯವಾಗಿದೆ. ಡಯಾಲಿಸಿಸ್ ಅವಶ್ಯಕತೆ ಇರುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದ್ದು, ಗುಣಮಟ್ಟದ ಡಯಾಲಿಸಿಸ್ ಚಿಕಿತ್ಸೆಯನ್ನು ನುರಿತ ತಜ್ಞರ ಮಾರ್ಗದರ್ಶನದಂತೆ ಪಡೆಯುವುದು ಅತ್ಯಾವಶ್ಯಕ ಎಂದು ತಿಳಿಸಿದರಲ್ಲದೆ ಗುಣಮಟ್ಟದ ಡಯಾಲಿಸಿಸ್ ಲಭ್ಯವಿದ್ದಲ್ಲಿ ರೋಗಿಯು ಸುಮಾರು 5 ರಿಂದ 40 ವರ್ಷಗಳ ಕಾಲ ನೆಮ್ಮದಿಯಿಂದ ಬದುಕುವ ಸಾಧ್ಯತೆ ಇದೆ ಎಂದರು.

ಯೂರಾಲಜಿಸ್ಟ್ ಡಾ.ಮಂಜುನಾಥ್ ಮಾತನಾಡಿ, ಮೂತ್ರಾಂಗದ ಕಾಯಿಲೆಗಳಿಗೆ ಅಸಮತೋಲನ ಆಹಾರಸೇವನೆ, ಮೂತ್ರ ಜನಕಾಂಗದ ಸೋಂಕುಗಳು, ಅವಶ್ಯಕ ಪ್ರಮಾಣದಲ್ಲಿ ನೀರು ಸೇವಿಸದಿರುವಿಕೆ ಕಾರಣವಾಗಿದೆ. ಈ ಕಾಯಿಲೆಗಳ ಪತ್ತೆಗಾಗಿ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಮೂತ್ರ, ರಕ್ತ ಮತ್ತು ಉದರದ ಸ್ಕ್ಯಾನಿಂಗ್ ಮಾಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಗುಣಮಟ್ಟದ ಚಿಕಿತ್ಸೆ: ಸುಯೋಗ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿರುವ ಮರಳೀಧರ್ ಮಾತನಾಡಿ, ಕಳೆದ 5 ವರ್ಷದಿಂದ ಸುಯೋಗ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. ಗುಣಮಟ್ಟ ಚಿಕಿತ್ಸೆ ದೊರೆಯುತ್ತಿದ್ದು, ಆರೋಗ್ಯದಿಂದ ಇದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ಡಯಾಲಿಸಿಸ್ ತಜ್ಞೆ ನೇತ್ರಾ ಅವರನ್ನು ಸನ್ಮಾನಿಸಲಾಯಿತು. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸುಯೋಗ್ ಆಸ್ಪತ್ರೆ ಸಿಇಓ ಡಾ.ಮಂಜುನಾಥ್, ಸುಯೋಗ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ ಉಪಸ್ಥಿತರಿದ್ದರು.

ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿ ಅವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ



ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಗುರುವಾರ ದಿವಂಗತ ಪ್ರೊ.ಮಲೆಯೂರು ಗುರುಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಮಾ.9(ಎಸ್‌ಬಿಡಿ)– ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿ ಅವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಪ್ರೊ.ಮಲೆಯೂರು ಗುರುಸ್ವಾಮಿ ಅವರ ನಿಧನದ ಸುದ್ದಿಯನ್ನು ಅರಗಿಸಿಕೊಳ್ಳುವುದು ಕಷ್ಟ, ಅವರು ಅಗಲಿದ್ದಾರೆ ಎಂದು ಈಗಲೂ ನಂಬಲಾಗುತ್ತಿಲ್ಲ. ಅವರು ಬೇರೆ ಬೇರೆ ಕಾರಣಗಳಿಗಾಗಿ ನಮ್ಮ ಮೇಲೆ ಪ್ರಭಾವ ಬೀರಿದವರು. ನಮ್ಮೆಲ್ಲರಿಗೆ ಗುರು ಹಾಗೂ ಮಾರ್ಗದರ್ಶಿಯಾಗಿದ್ದರು ಎಂದು ಸ್ಮರಿಸಿಕೊಂಡರು.

ಎಲ್ಲಾ ಸಿಬ್ಬಂದಿ ವರ್ಗದವರನ್ನು ಮಲೆಯೂರು ಗುರುಸ್ವಾಮಿ ಅವರು ಸಮಾನ ಪ್ರೀತಿಯಿಂದ ಕಾಣುತ್ತಿದ್ದರು. ಅದರಲ್ಲೂ ಸಹಾಯಕ ಹುದ್ದೆಯಲ್ಲಿದ್ದವರನ್ನು ಅತ್ಯಂತ ಆತ್ಮೀಯವಾಗಿ ಕಾಣುವ ಮೂಲಕ ವೃತ್ತಿ ಸಮಾನತೆ ಮೆರೆಯುತ್ತಿದ್ದರು. ಶ್ರೀ ಸುತ್ತೂರು ಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಎಂದು ತಿಳಿಸಿದರು.

ಸಾಹಿತ್ಯದಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದ ಪ್ರತಿಭಾನ್ವಿತ ಸಾಹಿತಿ ಗುರುಸ್ವಾಮಿ ಅವರ ಹಲವು ಕೃತಿಗಳು ತಮಿಳು, ತೆಲುಗು, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಿಗೆ ಭಾಷಾಂತರವಾಗಿವೆ. ಮೈಸೂರಿಗೆ ಸಂಬಂಧಿಸಿದ ತುಂಬಾ ಅಪರೂಪ ಹಾಗೂ ಮಹತ್ವದ ಮಾಹಿತಿಗಳು ಅವರ ಬಳಿ ಇದ್ದವು. ಚಂದ್ರಸದೃಶ, ಆಕರ್ಷಕ, ಸ್ಫುರದ್ರೂಪಿ ವ್ಯಕ್ತಿತ್ವದ ವ್ಯಕ್ತಿ ಇಂದು ನಮ್ಮ ಜೊತೆ ಇಲ್ಲ ಎನ್ನುವುದು ಬಹಳ ದುಃಖದ ಸಂಗತಿ ಎಂದು ನುಡಿದರು.

ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಗೌರವ ಸಂಪಾದಕ ಆರ್.ಎಸ್.ಪೂರ್ಣಾನಂದ, ನಗರ್ಲೆ ಶಿವಕುಮಾರ ಅವರು ದಿವಂಗತ ಪ್ರೊ.ಮಲೆಯೂರು ಗುರುಸ್ವಾಮಿಯವರಿಗೆ ನುಡಿನಮನ ಸಲ್ಲಿಸಿದರು.

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಮುಖಂಡ ಕವೀಶ್‌ಗೌಡ ರೌಂಡ್ಸ್

ಗ್ರಾಮಸ್ಥರೊಂದಿಗೆ ಸಮಾಲೋಚನೆ; ಕಾರ್ಯಕರ್ತರೊಂದಿಗೆ ಚರ್ಚೆ



ಜಯಪುರ ಮಾ.9– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜಯಪುರ ಹೋಬಳಿಯ ಅರಸಿನಕೆರೆ ಗ್ರಾಮಕ್ಕೆ ಭೇಟಿ ನೀಡಿದ ಬಿಜೆಪಿ ಮುಖಂಡ ವಿ.ಕವೀಶ್‌ಗೌಡ, ಮನೆ–ಮನೆಗೆ ತೆರಳಿ ಗ್ರಾಮಸ್ಥರ ಕುಶಲೋಪರಿ ವಿಚಾರಿಸಿ ಬಿಜೆಪಿ ಬೆಂಬಲಿಸುವಂತೆ ಮನವಿ ಮಾಡಿದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಉದ್ಘಾಟನೆಗೆ ಮಾ.12 ರಂದು ಪ್ರಧಾನಿ ನರೇಂದ್ರ ಮೋದಿಯವರು ಆಗಮಿಸುತ್ತಿದ್ದು, ಚಾಮುಂಡೇಶ್ವರಿ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಿದರು. ಇದೇ ವೇಳೆ ಅರಸಿನಕೆರೆ ಗ್ರಾಮದ ಬಸವೇಶ್ವರ ಯುವ ಬಳಗದ ಸದಸ್ಯರು ಕವೀಶ್ ಗೌಡರನ್ನು ಅಭಿನಂದಿಸಿದರು.

ಮುಂದಿನ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸಾಂಪ್ರದಾಯಿಕ ಮತಗಳ ಕ್ರೋಢೀಕರಣ ಮಾಡಬೇಕಾಗಿದೆ. ತಳಮಟ್ಟದಿಂದ ಪಕ್ಷವನ್ನು ಸಂಘಟಿಸುವ ಜವಾಬ್ದಾರಿ ನಮ್ಮದಾಗಿದೆ. ಬೂತ್ ಮಟ್ಟದಲ್ಲಿ ಬಿಜೆಪಿ ಪ್ರಬಲವಾಗಿ ಬೆಳೆಯಲು ಕಾರ್ಯಕರ್ತರ ಪಡೆಯನ್ನು ಕಟ್ಟಲಾಗುವುದು. ದೇಶದಲ್ಲಿ ನರೇಂದ್ರ ಮೋದಿಯವರು ಉತ್ತಮ ಆಡಳಿತ ನೀಡುತ್ತಿದ್ದು, ಹಲವು ಜನಪರ ಕಾರ್ಯಕ್ರಮಗಳನ್ನು ನೀಡಿದ್ದಾರೆ ಎಂದು ಕಾರ್ಯಕರ್ತರಿಗೆ ಮನವರಿಕೆ ಮಾಡಿ ಕೊಟ್ಟರಲ್ಲದೆ ಈಗಾಗಲೇ ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಹಳ್ಳಿಗಳಿಗೆ ತೆರಳಿ ಜನ ಸಾಮಾನ್ಯರನ್ನು ಸಂಪರ್ಕಿಸುತ್ತಿದ್ದು, ಉತ್ತಮ ಪ್ರತಿ ಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಟೀಕೆಗೆ ಖಂಡನೆ

ಮೈಸೂರು, ಮಾ.9– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯನವರು ಹೇಳಿಕೆ ನೀಡುವಾಗ ಸಂಸದ ಪ್ರತಾಪ್ ಸಿಂಹ ಅವರನ್ನು ಏಕವಚನದಲ್ಲಿ ಟೀಕಿಸಿರುವುದು ಖಂಡನೀಯ ಎಂದು ಬಿಜೆಪಿ ಯುವ ಮೋರ್ಚಾ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ಸಂತೋಷ್ ಕುಮಾರ್ ಹೇಳಿದ್ದಾರೆ.

ಮೈಸೂರು–ಕೊಡಗು ಸಂಸದರಾದ ಪ್ರತಾಪ್ ಸಿಂಹ ಅವರು ಸಾಕಷ್ಟು ಅಭಿವೃದ್ಧಿ ಯೋಜನೆಗಳಿಗೆ ಕಾರಣಕರ್ತರಾಗಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿ, ಪಟ್ಟು ಹಿಡಿದು ಕಾಮಗಾರಿಗಳಿಗೆ ಹಣ ತಂದಿದ್ದಾರೆ. ಯಾವುದೇ ಸಬೂಬು ಹೇಳದೆ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬಲ್ಲ ಜನಪ್ರತಿನಿಧಿಯಾಗಿ ಜನರ ಮನಸ್ಸಿನಲ್ಲಿ ಸ್ಥಾನ ಪಡೆದಿದ್ದಾರೆ. ಆದರೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಹಿರಿಯರಾದ ಸಿದ್ದರಾಮಯ್ಯನವರು ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಗ್ಗೆ ಪ್ರತಿಕ್ರಿಯಿಸುವಾಗ ಪ್ರತಾಪ್ ಸಿಂಹ ಅವರನ್ನು ಏಕವಚನದಲ್ಲಿ ಟೀಕಿಸಿದ್ದು ಖಂಡನೀಯ ಎಂದಿದ್ದಾರೆ. ಜನಪ್ರತಿನಿಧಿಯಾದವರು ಜನರಿಗಾಗಿ ತಮ್ಮ ಕಾರ್ಯವ್ಯಾಪ್ತಿ ಮೀರಿ ಕೆಲಸ ಮಾಡುವುದು ತಪ್ಪು ಎನ್ನುವಂತೆ ಸಿದ್ದರಾಮಯ್ಯ ನವರು ಮಾತನಾಡಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಕ್ರೆಡಿಟ್ ಸಂಪೂರ್ಣ ಬಿಜೆಪಿ ಸರ್ಕಾರಕ್ಕೆ ಸಲ್ಲಬೇಕು, ಪ್ರತಾಪ್ ಸಿಂಹ ಅವರೇ ಇದರ ರೂವಾರಿ ಎನ್ನುವುದು ಜನರಿಗೂ ಗೊತ್ತಿದೆ ಎಂದಿದ್ದಾರೆ.

ಅಪೌಷ್ಟಿಕತೆ ನಿವಾರಿಸುವಲ್ಲಿ ಸಿರಿಧಾನ್ಯಗಳ ಮಹತ್ವ ವಿಚಾರ ಸಂಕಿರಣ



ಕೆ.ಆರ್.ನಗರ, ಮಾ.9– ಇಲ್ಲಿನ ಶಿಕ್ಷಕರ ಭವನದಲ್ಲಿ ಮೈಸೂರಿನ ನಾಗನಹಳ್ಳಿಯಲ್ಲಿರುವ ಕೃಷಿ ವಿವಿ ವಿಸ್ತರಣಾ ಶಿಕ್ಷಣ ಘಟಕ, ಯುವ ರೈತ ವೇದಿಕೆ, ಕೃಷಿ ಇಲಾಖೆ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳ ಸಹಯೋಗದೊಂದಿಗೆ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಹಾಗೂ 'ಅಪೌಷ್ಟಿಕತೆ ನಿವಾರಿಸುವಲ್ಲಿ ಸಿರಿಧಾನ್ಯಗಳ ಮಹತ್ವ' ಕುರಿತು ವಿಚಾರ ಸಂಕಿರಣ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಸಾ.ರಾ.ಮಹೇಶ್, ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದ್ದು, ಮಹಿಳೆಯರು ನಿರಂತರವಾಗಿ ವೈಯಕ್ತಿಕ ಮತ್ತು ವೃತ್ತಿಪರವಾಗಿ ಅಭಿವೃದ್ಧಿಗೆ ಹಲವು ಕೊಡುಗೆಗಳನ್ನು ನೀಡುತ್ತಿದ್ದಾರೆ. ಎಲ್ಲಾ ಮಹಿಳೆಯರು ತಮ್ಮ ಕಠಿಣ ಪರಿಶ್ರಮದ ಮೂಲಕ ಮೆಚ್ಚುಗೆ ಪಡೆದಿದ್ದಾರೆ. ಅದೇ ರೀತಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ನ್ಯಾಯಾಧೀಶರು, ಪೋಲೀಸ್ ಇನ್ಸ್‌ಪೆಕ್ಟರ್ ಸೇರಿದಂತೆ ಅನೇಕ ಇಲಾಖೆಗಳಲ್ಲಿ ಮಹಿಳಾ ಅಧಿಕಾರಿಗಳೇ ಇರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಕೃಷಿ ವಿವಿ ವಿಸ್ತರಣಾ ಶಿಕ್ಷಣ ಘಟಕದ ಮುಖ್ಯಸ್ಥ ಡಾ.ಸಿ.ರಾಮಚಂದ್ರ, ಸಿರಿಧಾನ್ಯಗಳ ಪ್ರಾಮುಖ್ಯತೆ ಸಿರಿಧಾನ್ಯಗಳ ಪ್ರಾಮುಖ್ಯತೆ ಮತ್ತು ಅದರಲ್ಲಿರುವ ಪೌಷ್ಟಿಕಾಂಶಗಳ ಮಹತ್ವವನ್ನು ಅರಿತುಕೊಂಡು ತಮ್ಮ ದಿನನಿತ್ಯದ ಜೀವನದಲ್ಲಿ ದಿನಕ್ಕೆ ಒಂದು ಸಿರಧಾನ್ಯ ಉತ್ಪನ್ನವನ್ನಾದರೂ ಬಳಕೆ ಮಾಡಿ ಆರೋಗ್ಯವನ್ನು ವೃದ್ಧಿಸಿಕೊಳ್ಳುವಂತೆ ಸಲಹೆ ನೀಡಿದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯನ್ನು ಸನ್ಮಾನಿಸಲಾಯಿತು. ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕರಾದ ಡಾ.ಎ.ನಾಗಮಣಿ, ಡಾ. ಆರ್.ಎನ್.ಪುಷ್ಪ ಮತ್ತು ರಾಹುಲ್ ದಾಸ್ ಮತ್ತಿತರರಿದ್ದರು.

ಮೈಸೂರಲ್ಲಿ ಟಿಬೆಟಿಯನ್ನರ ಪ್ರತಿಭಟನೆ



ಮೈಸೂರು, ಮಾ.9(ಜಿಎ)– ಚೀನಾದ ಆಡಳಿತ ನೀತಿಯನ್ನು ವಿರೋಧಿಸಿ ಮೈಸೂರಿನಲ್ಲಿ ಟಿಬೆಟಿಯನ್ ನಾಗರಿಕರು ಧರಣಿ ನಡೆಸಿದರು. ಮಾ.10 ಟಿಬೆಟಿಯನ್ನರ 64ನೇ ರಾಷ್ಟ್ರೀಯ ಬಂಡಾಯ ದಿನವಾದ ಹಿನ್ನೆಲೆಯಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಮೈಸೂರು, ಹುಣಸೂರು, ಬೈಲ್ ಕುಪ್ಪೆ ಮತ್ತು ಕೊಳ್ಳೆಗಾಲದ ಟಿಬೆಟಿಯನ್ ನಾಗರೀಕರು ಧರಣಿ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಕಾರರು, 1959ರ ಮಾ.10ರಂದು ಲಕ್ಷಾಂತರ ಟಿಬೆಟ್ ನಾಗರಿಕರು ಚೀನಿಯರ ದಬ್ಬಾಳಿಕೆಯ ವಿರುದ್ಧ ತಮ್ಮ ರಾಜಧಾನಿ ಲಾಸದಲ್ಲಿ ಪ್ರತಿಭಟಿಸಿದ್ದರು. ಆದರೆ, ಚೀನಾ ಸೈನ್ಯವು ಪ್ರತಿಭಟನೆಯನ್ನು ಹತ್ತಿಕ್ಕಿ ಟಿಬಿಟಿಯನ್ನರ ಕ್ರೂರವಾಗಿಯೇ ಕೊಂದರು. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಮಾ.10ರಂದು ವಿಶ್ವದಾದ್ಯಂತ ಬಂಡಾಯ ದಿನ ಎಂದು ವಿಶ್ವದಾದ್ಯಂತ ಚೀನಾ ವಿರುದ್ಧ ಪ್ರತಿಭಟನೆ ಮಾಡುತ್ತೇವೆ ಅದರ ಸಾಂಕೇತಿಕವಾಗಿ ಇಂದು ಧರಣಿ ಮಾಡಿದ್ದೇವೆ ಎಂದರು.

ನಾಳೆ(ಮಾ.10) ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಮೈಸೂರು, ಹುಣಸೂರು, ಬೈಲ್ ಕುಪ್ಪೆ ಮತ್ತು ಕೊಳ್ಳೆಗಾಲದ ಟಿಬೆಟ್‌ನ ನಾಗರೀಕರು ಜಮಾವಣೆಗೊಂಡು ರಾಷ್ಟ್ರೀಯ ಬಂಡಾಯ ದಿನದ ಆಚರಿಸುತ್ತೇವೆ ಎಂದು ತಿಳಿಸಿದರು.

ರೈತರ ಮಕ್ಕಳಿಗೆ ತರಬೇತಿ : ಅರ್ಜಿ ಆಹ್ವಾನ

ಮೈಸೂರು, ಮಾ.9– ರಂಗಸಮುದ್ರ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2023ರ ಮೇ 5 ರಿಂದ 2024 ರ ಫೆ.29 ರವರೆಗೆ ಪಹಣಿ ಹೊಂದಿರುವ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ರೈತರ ಮಕ್ಕಳ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

S.S.L.C ಯಲ್ಲಿ ಉತ್ತೀರ್ಣರಾದ ಸಾಮಾನ್ಯ ವರ್ಗದ 18–30 ವರ್ಷದೊಳಗಿನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 18–33 ವರ್ಷದೊಳಗಿನ ಹಾಗೂ 33–65 ವರ್ಷ ವಯಸ್ಸಿನ ಒಳಗಿನ ಮಾಜಿ ಸೈನಿಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಮಾ.11 ರಿಂದ ಏ.12 ರವರೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಫಾರಂಗಳನ್ನು ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪನಿರ್ದೇಶಕರು, ಮೈಸೂರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಲ್ಲಿ ಅಥವಾ ಇಲಾಖೆ ವೆಬ್‌ಸೈಟ್ https://horticulturedir.karnataka.gov.in ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಅಥವಾ ದೂ.ಸಂ: 0821–2977572 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.13ರಂದು ಮುಡಾ ಬಜೆಟ್

• ಕಳೆದ ಸಾಲಿನ ಪ್ರಸ್ತಾಪಗಳು ಆಯ–ವ್ಯಯ ಪತ್ರಕ್ಕಷ್ಟೇ ಸೀಮಿತವಾದವು! • ಇದೇ ವೇಳೆ ಸಿಎ ನಿವೇಶನ, ಸಾಧಕರಿಗೆ ವಿವಿಧ ವರ್ಗಗಳ ನಿವೇಶನ ಹಂಚಿಕೆಯೂ ನಿಷ್ಕರ್ಷೆ ಸಾಧ್ಯತೆ

ಮೈಸೂರು, ಮಾ.9(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮಾರ್ಚ್ 13ರಂದು 2023–24ನೇ ಸಾಲಿನ ಆಯ–ವ್ಯಯ ಮಂಡನೆಯಾಗಲಿದೆ.

ಪ್ರಾಧಿಕಾರದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಸೋಮವಾರ ಬೆಳಗ್ಗೆ 11 ಗಂಟೆಗೆ ಮುಡಾ ಕಚೇರಿ ಸಭಾಂಗಣದಲ್ಲಿ ನಡೆಯಲಿರುವ ಸಭೆಯಲ್ಲಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಪ್ರಸಕ್ತ ಸಾಲಿನ ಬಜೆಟ್ ಮಂಡಿಸುವರು. ಸದಸ್ಯರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ತನ್ವೀರ್ ಸೇಠ್, ರವೀಂದ್ರ ಶ್ರೀಕಂಠಯ್ಯ, ಬಿ.ಹರ್ಷವರ್ಧನ್, ಡಾ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12.30 ಗಂಟೆ ನಂತರ ಮುಂದುವರೆದ ಸಭೆಯಲ್ಲಿ ನಾಗರಿಕ ಸೌಲಭ್ಯ (ಸಿಎ) ನಿವೇಶನ, ಸಾಧಕರಿಗೆ ವಿವಿಧ ವರ್ಗಗಳ ನಿವೇಶನ ಹಂಚಿಕೆ ಸಂಬಂಧ ಚರ್ಚಿಸಿ ಅಂದೇ ಅನುಮೋದನೆ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಮಂಡಿಸಿದ ಆಯ–ವ್ಯಯದಲ್ಲಿ 2022–23ನೇ ಸಾಲಿಗೆ 1,82,142.75 ಲಕ್ಷ ರೂ. ಸಂಪನ್ಮೂಲ ಕ್ರೋಢೀಕರಿಸಲು ಉದ್ದೇಶಿಸಿ ಪ್ರಾಧಿಕಾರದಿಂದ ಮೈಸೂರು ನಗರದ ಅಭಿವೃದ್ಧಿಗೆ 1,69,967.09 ಲಕ್ಷ ರೂ. ವೆಚ್ಚ ಮಾಡಲು ನಿರ್ಧರಿಸಲಾಗಿತ್ತು. ಅದರಂತೆ ಕಳೆದ ಸಾಲಿನಲ್ಲಿ 12,975.66 ಲಕ್ಷ ರೂ.ಗಳ ಉಳಿತಾಯ ಬಜೆಟ್ ಅನ್ನು ಮಂಡಿಸಲಾಗಿತ್ತು.



ಅನುಷ್ಠಾನವಾಗದ ಯೋಜನೆಗಳು: ಕಳೆದ ಬಾರಿ ಮಂಡಿಸಿದ ಬಜೆಟ್‌ನಲ್ಲಿ ಮಾಡಲಾಗಿದ್ದ ಪ್ರಸ್ತಾಪಗಳಲ್ಲಿ ಬಹುತೇಕ ಯೋಜನೆಗಳು ಅನುಷ್ಠಾನವಾಗದೇ ಕೇವಲ ಬಜೆಟ್ ಪುಸ್ತಕದಲ್ಲಿ ಮುದ್ರಣವಾಗಿದ್ದಷ್ಟಕ್ಕೇ ಸೀಮಿತವಾದವು. ಮೈಸೂರಿನ ವಿಜಯನಗರ ಮತ್ತು ದಟ್ಟಗಳ್ಳಿ ಬಡಾವಣೆಗಳಲ್ಲಿ ಕೈಗೆಟುಕುವ ಬೆಲೆಯಲ್ಲಿ ಗುಂಪು ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲು 8550 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿತ್ತಾದರೂ, ಈ ಯೋಜನೆಗೆ ಸರ್ಕಾರದಿಂದ ಇನ್ನೂ ಅನುಮೋದನೆಯೇ ಸಿಕ್ಕಿಲ್ಲ.

ಪ್ರಾಧಿಕಾರದಿಂದ ವಿಜಯಶ್ರೀಪುರ ಮತ್ತು ಲಲಿತಾದ್ರಿಪುರದಲ್ಲಿ ಜಾಗತಿಕ ಮಟ್ಟದ ವಿಶೇಷ ವಾಣಿಜ್ಯ ಸಂಕೀರ್ಣ ನಿರ್ಮಿಸುವ ಯೋಜನೆ, ಮೈಸೂರಿಗೆ ಸಂಪರ್ಕ ಕಲ್ಪಿಸುವ ಮೈಸೂರು–ಬೆಂಗಳೂರು ಹೆದ್ದಾರಿ, ಹುಣಸೂರು ರಸ್ತೆ, ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಗದ್ದಿಗೆ ರಸ್ತೆ ಮತ್ತು ಬನ್ನೂರು ರಸ್ತೆಗಳಲ್ಲಿ ಮಹಾದ್ವಾರ ನಿರ್ಮಾಣ, ಮೆಟ್ರೋ ರೈಲು, ಸೆಲ್ಫೀ ಪಾಯಿಂಟ್, ಕ್ಲಾಕ್ ಟವರ್, ಕುಪ್ಪಣ್ಣ ಪಾರ್ಕ್ ಅಭಿವೃದ್ಧಿ, ಪ್ರಾಧಿಕಾರದ ಆಸ್ತಿ ರಕ್ಷಣೆಗೆ ಟಾಸ್ಕ್ ಫೋರ್ಸ್ ರಚನೆ, ಕ್ರೀಡಾಂಗಣ, ವಿಲ್ಲಾ ನಿರ್ಮಾಣ, ಉಪ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆ ಸೇರಿದಂತೆ ಬಜೆಟ್‌ನಲ್ಲಿ ಮಂಡಿಸಲಾದ ಹಲವು ಮಹತ್ತರ ಯೋಜನೆಗಳನ್ನು ಮುಡಾ ಕಾರ್ಯಗತ ಮಾಡಲಿಲ್ಲ.

ಆದಾಯ ನಿರೀಕ್ಷೆಗೂ, ವೆಚ್ಚದ ಉದ್ದೇಶಕ್ಕೂ ಅಜಗಜಾಂತರ ವ್ಯತ್ಯಾಸ ಇದ್ದುದರಿಂದ ಹಣಕಾಸಿನ ಕ್ರೋಢೀಕರಣವಾಗದ ಕಾರಣ ಕಳೆದ ಬಾರಿಯ ಬಜೆಟ್‌ನಲ್ಲಿ ಮಂಡಿಸಿದ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ ಎಂದು ಮುಡಾ ಮೂಲಗಳು ತಿಳಿಸಿವೆ. ಇದೀಗ ಮತ್ತೊಂದು ಬಜೆಟ್ ಮಂಡಿಸಲಾಗುತ್ತಿದೆ. ಹಣಕಾಸಿನ ಲಭ್ಯತೆ ಆಧರಿಸಿ ಜಾರಿಗೊಳಿಸಬಹುದಾದ ಯೋಜನೆಗಳನ್ನು ಈ ಸಾಲಿನಲ್ಲಿ ಪ್ರಸ್ತಾಪಿಸುವುದು ಸೂಕ್ತ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ನಕ್ಕರೆ ಅದೇ ಸ್ವರ್ಗ

ಬ್ಯಾಂಕಿನಿಂದ ಮಂಜಪ್ಪನಿಗೆ ಬಂದ ಪತ್ರ :
ನಿಮ್ಮ ಪಿಎಎನ್ ವಿವರ ತಿಳಿಸಿ.
ಮಂಜಪ್ಪನ ಉತ್ತರ : ಎರಡ ಕೊಲ್ಕತ್ತಾ ಎಲೆ, ಮೂರು ಹಾಲಡಿಕೆ,
ಚಮನ್, ಯಾಲಕ್ಕಿ, ಲವಂಗ, ಸ್ವಲ್ಪ ಜಾಸ್ತಿ ಗುಲ್ಕಂದ,
ಮತ್ತೆ... ಸುಣ್ಣ ಕಡಿಮೆ....ಇಷ್ಟು...!

ಮೈಸೂರು ಮಿತ್ರ

ಶುಕ್ರವಾರ, 10 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸದ್ಗುಣಕ್ಕೆ ಅಪಾರ ಧೈರ್ಯವಿದೆ. ಅದಕ್ಕೆ ಭಯವೆಂಬುದೇ ಇಲ್ಲ.
–ವಿಲಿಯಮ್ ಶೇಕ್ಸ್‌ಪಿಯರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಾತುರ್ಯ ಬಲ್ಲವನಿಗೆ ಚಾಚೂ ಚಿಂತಿಲ್ಲ

ನಿಮ್ಮ ಪತ್ರಗಳು

ಚುನಾವಣೆ ಎಂಬ ಉದ್ಯೋಗ ಖಾತ್ರಿ ಯೋಜನೆ

ಮಾನ್ಯರೆ,

ಚುನಾವಣೆಯು ಸಮೀಪಿಸುತ್ತಿದ್ದಂತೆ ಕಳೆದ ಚುನಾವಣೆಯಲ್ಲಿ ಮತದಾನ ಮಾಡಿಯೋ ಇಲ್ಲ ಮತ ಮಾರಿಕೊಂಡೋ ಮಲಗಿರುವ ಮತದಾರರನ್ನು ಎಬ್ಬಿಸಲು ರಾಜಕೀಯ ಪಕ್ಷಗಳು ಪೈಪೋಟಿಯಲ್ಲಿ ಮನೆ ಮನೆ ಬಾಗಿಲುಗಳನ್ನು ಬಡಿದು ಎಬ್ಬಿಸುತ್ತಿವೆ. ಎಬ್ಬಿಸಿದ ನಂತರ ಹಾಗೇ ಬರಿಗೈಯಲ್ಲಿ ಬರುವುದು ನಮ್ಮ ಸಂಸ್ಕೃತಿಯೇ? ತಮ್ಮ ಶಕ್ತಿಯನುಸಾರ ಸೀರೆ, ಪಂಚೆ, ಕುಕ್ಕರ್, ದೇವರ ಚಿತ್ರಗಳು, ಹಣ, ಹೆಂಡ ಇತ್ಯಾದಿಗಳನ್ನು ನೀಡಿ, ಬಾಡೂಟದ ಸಾಮೂಹಿಕ ಭೋಜನ ಏರ್ಪಡಿಸಿ ನಮ್ಮ ಪಕ್ಷಕ್ಕೇ ಮತ ನೀಡಬೇಕೆಂದು ತಾಕೀತು ಮಾಡುವುದು ಪ್ರಜಾಪ್ರಭುತ್ವದ ಮುಖ್ಯ ಅನುಸೂಚಿಯಾಗಿದೆ. ಇಷ್ಟಕ್ಕೆ ಸುಮ್ಮನಾಗುವುದುಂಟೆ? ರಸ್ತೆ ಉದ್ದಕ್ಕೂ ಜನರನ್ನು ಸೇರಿಸಿ ವಾಹನದಲ್ಲಿ ನಿಂತು ಅದ್ಧೂರಿ ಮೆರವಣಿಗೆಯಲ್ಲಿ ಸಾಗಿ ಜನರಿಗೆ ಕೈ ಮುಗಿಯುವುದು. ತಾವೇ ತರಸಿದ ಕ್ವಿಂಟಾಲ್ ತೂಕದ ಸೇಬಿನ ಹಾರವನ್ನು ಹಿಟಾಚಿಗಳಿಂದ ಹಾಕಿಸಿಕೊಳ್ಳುವುದು ಅಲ್ಲಿಗೆ ಒಂದು ಹಂತದ ವಿಜಯ ಪತಾಕೆ ಹಾರಿಸಿದಂತೆ ನಗೆ ಬೀರುವರು!.

ಚುನಾವಣೆ ಪ್ರಕ್ರಿಯೆ ಮುಗಿದು ಫಲಿತಾಂಶ ಬಂದು ಸರ್ಕಾರ ರಚಿಸುವವರೆಗೂ ಒಂದು ರೀತಿಯ ಉದ್ಯೋಗ ಖಾತ್ರಿ ಯೋಜನೆ ಇದ್ದಂತೆ, ಲಕ್ಷಾಂತರ ದುಡಿಯುವ ಮಂದಿಗೆ ಶ್ರಮವಿಲ್ಲದ ಕೆಲಸ. ಪ್ರಚಾರದ ಕಾರ್ಯಕ್ರಮಕ್ಕೆ ಜನ ಸೇರಿಸುವುದಕ್ಕಾಗಿಯೇ ಪುಡಿ ನಾಯಕರಿರುತ್ತಾರೆ. ಬಂದವರಿಗೆ ತಲೆಗಿಷ್ಟು ಹಣ, ತಿಂಡಿ ತೀರ್ಥ, ಬಿರಿಯಾನಿ, ಭೋಜನ. ಕಾರ್ಯಕರ್ತರಿಗೆ ಫ್ಲೆಕ್ಸ್ ಹಾಕುವುದು, ಶಾಮಿಯಾನ, ಮೈಕ್, ಮನೆ ಮನೆಗೆ ಕರಪತ್ರ ಹಂಚುವುದು... ಹೀಗೆ ಹತ್ತು ಹಲವಾರು ಕೆಲಸಗಳು. ಈ ಅವಧಿಯಲ್ಲಿ ಮಾಂಸಾಹಾರಿ ಹೊಟೇಲ್‌ಗಳು ಹಾಗೂ ಬಾರ್‌ಗಳಲ್ಲಿನ ವ್ಯಾಪಾರ ದಲ್ಲಿ ಹೆಚ್ಚಳ, ನಾಮಕಾವಸ್ಥೆಗೆ ನಿಂತವರ ನಾಮಪತ್ರ ಹಿಂಪಡೆಯಲು ಹಣ ಕೊಡುವುದು. ಅದರಲ್ಲೂ ತನ್ನದೇ ಹೆಸರಿನ ಅಭ್ಯರ್ಥಿಯಾಗಿದ್ದರೆ ಬೇಡಿಕೆ ಹೆಚ್ಚು. ಊರಿನ ಬಡಾವಣೆಗಳ ಮುಖ್ಯಸ್ಥರಿಗೆ ಮತದಾನ ಮಾಡಿಸುವ ಉದ್ದೇಶಕ್ಕಾಗಿ ಹಣ, ಇದರಿಂದಾಗಿ ಖಾಸಗಿ ಖಜಾನೆಯಲ್ಲಿ ಅಡಗಿಸಿಟ್ಟಿದ್ದ ಕಪ್ಪು ಹಣ ಚಲಾವಣೆಗೆ ಹೊರಬರುವುದು. ಒಟ್ಟಿನಲ್ಲಿ ಚುನಾವಣೆ ಎಂದರೆ ಚಟುವಟಿಕೆಯ ಸುವರ್ಣಕಾಲ.

ಕೈಗೆಟಕುವ ಬೆಲೆಯಲ್ಲಿ ಏನೂ ಸಿಗದು, ರೈತರಿಗೆ ಬರ ಅಥವಾ ಅತಿವೃಷ್ಟಿಯಿಂದ ಬೆಳೆ ಹಾನಿ, ಅಕಸ್ಮಾತ್ ಬಂಪರ್ ಬೆಳೆ ಬಂದರೆ ಬೆಲೆ ಕುಸಿತ, ಬೆಳೆದಿದ್ದನ್ನು ಬೀದಿಗೆ ಸುರಿದು ಗೋಳಾಟ. ನೀವೇ ಹೇಳಿ ಯಾರು ಸುಖವಾಗಿದ್ದಾರೆಂದು? ಸರ್ಕಾರಿ ನೌಕರರಿಗೆ ಚಿಂತೆ ಇಲ್ಲ. ಕಾಲಕಾಲಕ್ಕೆ ವೇತನ ಹಾಗೂ ತುಟ್ಟಿಭತ್ಯೆಗಳ ಏರಿಕೆ, ಇಲ್ಲದಿದ್ದರೆ ಮುಷ್ಕರ. ಯಾವತ್ತಿದ್ದರೂ ಸಂಕಷ್ಟದಿಂದ ಹೊರಬರದ ನತದೃಷ್ಟ ವರ್ಗವೆಂದರೆ; ಅನ್ನ ನೀಡುವ ರೈತರು, ಕೂಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು ಹಾಗೂ ಆಟೋಡ್ರೈವರ್‌ಗಳು. ಕಾನೂನುಬಾಹಿರ ಕೆಲಸಗಳನ್ನು ಮಾಡುವಾಗ ರೆಡ್ ಹ್ಯಾಂಡ್ ಆಗಿ ಸಿಗಲಿ ಮತದಾರ ಪ್ರಭುಗಳು ಸಂಭ್ರಮಿಸಿ ಹಾರತುರಾಯಿ ಹಾಕಿ ಜೈಕಾರ ಹಾಕುತ್ತಾ ಮೆರವಣಿಗೆ ಮಾಡುವರು, ಅಷ್ಟು ಪ್ರಬುದ್ಧರು ನಾವುಗಳು, ಮಾಡದೆ ಇರುವುದಿಲ್ಲ ಮತ್'ದಾನ್' ಮಾರಿಕೊಳ್ಳದೆ!.

– ಮಿರ್ಲೆ ಚಂದ್ರಶೇಖರ್, ಮೈಸೂರು.

ರಾಜಕೀಯ ಕ್ಷೇತ್ರಗಳಿಗಾಗಿ ಪ್ರಬಲ ಪೈಪೋಟಿ

ಮಾನ್ಯರೆ,

ಇಂದು ಎಲ್ಲಾ ರಾಜಕೀಯ ಪಕ್ಷಗಳು ಸೂಕ್ತ ರಾಜಕೀಯ ವ್ಯಕ್ತಿಯ ಆಯ್ಕೆಯಲ್ಲಿ ದ್ದಾರೆ. ಆದರೆ ಹಾಲಿ ಶಾಸಕರೇ ಆಯ್ಕೆಯಾಗಿದ್ದು, ಎಲ್ಲಾ ಸ್ಥಾನಮಾನಗಳನ್ನು ಅನುಭವಿಸಿದ್ದರೂ ಸ್ವ–ಪ್ರೇರಣೆಯಿಂದ ತಮ್ಮ ಕ್ಷೇತ್ರವನ್ನು ಬಿಟ್ಟುಕೊಡಲು ಸಹಕರಿಸುತ್ತಿಲ್ಲ. ಸಕ್ರಿಯ ರಾಜಕೀಯದಲ್ಲಿರುವ ಪ್ರತಿಯೊಬ್ಬರ ಮನಸ್ಸಲ್ಲಿಯೂ ತಾನು ಕೂಡ ಶಾಸಕ, ಇತ್ಯಾದಿಯಾಗಿ ಜನರ ಸೇವೆ ಮಾಡಲು ಇಚ್ಛಿಸುತ್ತಾನೆ. ಇದಕ್ಕಾಗಿ ರಾಜಕೀಯ ಕಿತ್ತಾಟ, ಕಡೆಗೆ ಪಕ್ಷ ತೊರೆಯಲು ಮುಂದುವರಿಯುತ್ತಾರೆ. ಈ ಕಾರಣಕ್ಕಾಗಿ ಪಕ್ಷದ ಇಕ್ಕಟ್ಟಿಗೆ ಸಿಕ್ಕುವ ಪ್ರಮೇಯ ಹೆಚ್ಚು. ನೀವು ಸಹಕರಿಸಿದರೆ ನಿಮ್ಮ ವ್ಯಕ್ತಿತ್ವ ಇನ್ನು ಹೆಚ್ಚಾಗುತ್ತದೆ. ಆದುದರಿಂದ ಎಲ್ಲಾ ಪಕ್ಷದವರು ಪಕ್ಷಕ್ಕೆ ಧಕ್ಕೆಯಾಗದಂತೆ ನಿಮ್ಮ ತೀರ್ಮಾನ ಎಲ್ಲಾ ರೀತಿ–ನೀತಿಯಲ್ಲಿ ಉಪಯುಕ್ತವಾಗಿರಲಿ– ದೇಶದ ಅಭ್ಯುದಯಕ್ಕೆ ಪ್ರೇರಣೆಯಾಗಲಿ!

–ಬೆಸಗರಹಳ್ಳಿ ವೆಂಕಟರಾಮು, ವಿವೇಕಾನಂದನಗರ, ಮೈಸೂರು

ಕಣ್ಣಾ–ಮುಚ್ಚಾಲೆ!

ಮಾನ್ಯರೆ,

ತಾನು ತಲೆ ಮರೆಸಿಕೊಂಡಿರಲಿಲ್ಲ, ಮನೆಯಲ್ಲಿಯೇ ಇದ್ದೆ ಎಂದಿದ್ದಾರೆ ಮಾಡಾಳರು! ಕಣ್ಣಾಮುಚ್ಚಾಲೆ ಆಟವಾಡುತ್ತಾ ಮನೆಯಲ್ಲಿಯೇ ಅವಿತಿದ್ದ ಮಾಡಾಳರನ್ನು ಹಿಡಿಯುವಲ್ಲಿ ಲೋಕಾಯುಕ್ತರು ವಿಫಲರಾಗಿದ್ದಾರೆ. ಲೋಕಾಯುಕ್ತರ ಕಣ್ಣು ತಪ್ಪಿಸಿ ಹೈಕೋರ್ಟ್ ಕದ ತಟ್ಟಿ ನಿರೀಕ್ಷಣಾ ಜಾಮೀನು ಪಡೆದು ವಿಜಯ ಪತಾಕೆ ಹಾರಿಸಿದ್ದಾರೆ ಮಾಡಾಳರು. ಕಣ್ಣಾಮುಚ್ಚಾಲೆ ಆಟದಲ್ಲಿ ಮಾಡಾಳರು ವಿನ್ ಆಗಿದ್ದಾರೆ. ಲೋಕಾಯುಕ್ತರು ಔಟ್ ಆಗಿದ್ದಾರೆ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು.


ಮೈಸೂರಿಗೆ ಅಂಗಾಂಗ ಕಸಿ ಸಂಸ್ಥೆ ಸ್ವಾಗತಾರ್ಹ

ಮಾನ್ಯರೆ,

ಮೈಸೂರು, ಹಾಸನ, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಒಟ್ಟುಗೂಡಿಸಿ ಮೈಸೂರನ್ನು ಕೇಂದ್ರವಾಗಿರಿಸಿ ಇನ್ನು ಮುಂದೆ ಜೀವ ಸಾರ್ಥಕತೆಯ ಅಡಿಯಲ್ಲಿ ಅಂಗಾಂಗ ಕಸಿಗೆ ಉತ್ತೇಜನ ನೀಡಲು ಅಂಗಾಂಗ ಕಸಿಯ 5ನೇ ವಲಯವನ್ನಾಗಿ ಮಾಡಿರುವುದು ಸ್ವಾಗತಾರ್ಹ. ಮೇಲಿನ ಎಲ್ಲಾ ಜಿಲ್ಲೆಗಳ ರೋಗಿಗಳಿಗೆ ಡಿಎಸ್ಎ ಕ್ರಾಸ್ ಮ್ಯಾಚ್‌ಗಾಗಿ ಬೆಂಗಳೂರಿಗೆ ಹೋಗುವ ಅನಿವಾರ್ಯತೆ ಇತ್ತು. ಮೈಸೂರಿನ ಈ ವಲಯದಿಂದ ರೋಗಿಗಳ ಸಮಯ ಉಳಿತಾಯವಾಗುತ್ತದೆ. ಅಂಗಾಂಗ ದಾನದ ಬಗ್ಗೆ ತಿಳುವಳಿಕೆ ಇಲ್ಲದೆ ಮತ್ತು ಮೌಢ್ಯದಿಂದ ಮರಣದ ನಂತರ ನಮ್ಮ ದೇಹವು ಯಾವುದೇ ಪ್ರಯೋಜನಕ್ಕೆ ಬಾರದೆ ಮಣ್ಣು ಮತ್ತು ಬೆಂಕಿಯಲ್ಲಿ ಲೀನವಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಆರೋಗ್ಯವಂತ ಜನರ ಮೂತ್ರಪಿಂಡ, ಪಿತ್ತಜನಕಾಂಗ, ಹೃದಯ, ಕಣ್ಣು, ಶ್ವಾಸಕೋಶದಂತಹ ಹಲವು ಅಂಗಗಳನ್ನು ಕಸಿ ಮಾಡುವ ವ್ಯವಸ್ಥೆ ದೇಶದಲ್ಲಿ ಇರುವುದರ ಬಗ್ಗೆ ಹಾಗೂ ಒಬ್ಬ ವ್ಯಕ್ತಿ ಅಂಗಾಂಗ ದಾನಕ್ಕೆ ಒಳಗಾದರೆ ಕನಿಷ್ಠ ಐದು ಜೀವಗಳನ್ನು ಉಳಿಸಬಹುದು ಎಂದು ಅರಿವಿಲ್ಲದ, ಜನಸಾಮಾನ್ಯರಿಗೆ ಮೈಸೂರಿನಲ್ಲಿ ಪ್ರಾರಂಭವಾಗುತ್ತಿರುವ ಅಂಗಾಂಗ ಕಸಿ ಸಂಸ್ಥೆಯು ಅಂಗಾಂಗ ದಾನದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಹೆಚ್ಚು ಹೆಚ್ಚಾಗಿ ಮಾಡುವ ಮೂಲಕ ಅಂಗಾಂಗ ಬೇಕಿರುವ ಜೀವಗಳಿಗೆ ನೆರವಾಗಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.

ಜಿ.ಪಿ. ರಾಜರತ್ನಂರ 'ನಲ್ಲೀ ತಾವ್ ನಂ ಮಲ್ಲೀ'



ಜಿ.ಪಿ.ರಾಜರತ್ನಂ (ಗುಂಡ್ಲುಪಂಡಿತ ರಾಜರತ್ನಂ) ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದ ಕವಿಗಳಲ್ಲೊಬ್ಬರು. ತಮ್ಮ ವಿಶಿಷ್ಟವಾದ ಪದ ಬಳಕೆಗಳಿಂದ ಪ್ರಸಿದ್ಧರಾದವರು. ಮಕ್ಕಳ ಸಾಹಿತ್ಯಕ್ಕೆ ಇವರ ಕೊಡುಗೆ ಅನನ್ಯವಾದುದು. ರಾಜರತ್ನಂ ಅವರ ಪದ್ಯಗಳನ್ನು ಹಾಡದ ಮಕ್ಕಳಿಲ್ಲ ಎಂಬ ಕಾಲವೊಂದಿತ್ತು. ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ, ಬಣ್ಣದ ತಗಡಿನ ತುತ್ತೂರಿ ರಾಜರತ್ನಂರ ಸುಪ್ರಸಿದ್ಧ ಪದ್ಯಗಳು. ಅದರಲ್ಲೂ ನಾಯಿ ಮರಿ ಪದ್ಯ ಹೊರ ಬಂದ ಮೇಲಂತೂ ಅವರು ರಸ್ತೆಯಲ್ಲಿ ಹೋಗುತ್ತಿದ್ದರೆ ಮಕ್ಕಳೆಲ್ಲಾ ಅಲ್ಲಿ ನೋಡ್ರೊ ನಾಯಿ ಮರಿ ರಾಜರತ್ನಂ ಎಂದು ಕೂಗಿ ಸಂತೋಷ ಪಡುತ್ತಿದ್ದರಂತೆ, ಅಷ್ಟರ ಮಟ್ಟಿಗೆ ರಾಜರತ್ನಂ ಮಕ್ಕಳಿಗೆ ಆಪ್ತವಾಗಿದ್ದರು. ಇಂತಹ ಪ್ರಸಿದ್ಧ ಕವಿ ನಮ್ಮ ಜಿಲ್ಲೆಯವರು ಎಂಬುದೇ (ಚಾಮರಾಜ ನಗರದ ಗುಂಡ್ಲುಪೇಟೆಯವರು) ನಮಗೆ ಹೆಮ್ಮೆ ತರುವ ಸಂಗತಿ.

1934ರಲ್ಲಿ ಅವರು ಬರೆದು ಪ್ರಕಟಿಸಿದ ಕವನ ಸಂಕಲನ ರತ್ನನ ಪದಗಳು. ಅದುವರೆಗೂ ಕವಿತೆ ಎಂದರೆ ಹೀಗೆಯೇ ಇರಬೇಕೆಂದು ಇದ್ದ ಎಲ್ಲಾ ಕಟ್ಟುಪಾಡುಗಳನ್ನು ಬದಿಗೊತ್ತಿ ಕುಡುಕನೊಬ್ಬನ ಮಾತುಗಳಲ್ಲಿ ಕವನಗಳನ್ನು ಹೇಳುವ ರೀತಿಯಲ್ಲಿ ಇದ್ದ ರತ್ನನ ಪದಗಳು ಜಿ.ಪಿ. ರಾಜರತ್ನಂಗೆ ಅಪಾರವಾದ ಪ್ರಖ್ಯಾತಿಯನ್ನು ತಂದುಕೊಟ್ಟಿತು. **ಯೆಂಡ, ಯೆಡ್ತಿ, ಕನ್ನಡ ಪದಗೋಳ್ ಅಂದ್ರೆ ರತ್ನಂಗ ಪ್ರಾಣ, ಯೇಳ್ಕೊಳ್ಳಾಕ್ ಒಂದ್ ಊರು ತಲೇ ಮ್ಯಾಗ್ ಒಂದ್ ಸೂರು ಮಲಗಾಕೆ ಬೂಮ್ತಾಯಿ ಮಂಚ, ಬ್ರಮ್ಮ ನಿಂಗೆ ಜೋಡಿಸ್ತೀನಿ ಯೆಂಡ ಮುಟ್ಟಿದ್ ಕೈನ ಬೂಮೀ ಉದ್ಕ ಬೊಗ್ಸೀನಿ ಯೆಂಡ ತುಂಬ್ಕೊಂಡ ಮೈನ...** ಕವನಗಳು ಆಗಿನ ಕಾಲಕ್ಕಷ್ಟೇ ಅಲ್ಲ ಇಂದಿಗೂ ಕೂಡ ಅಪಾರವಾದ ಜನಮನ್ನಣೆಯನ್ನು ಪಡೆದ ಕವನಗಳಾಗಿವೆ.

ರತ್ನಂ ಪದಗಳು ಅಪಾರ ಜನಪ್ರಿಯತೆಯನ್ನು ತಂದುಕೊಟ್ಟ ನಂತರ ಅದೇ ಮಾದರಿಯಲ್ಲಿ ಬರೆದ ಮತ್ತೊಂದು ಕವನ ಸಂಕಲನ ನಾಗನ ಪದಗಳು. 1952ರಲ್ಲಿ ಪ್ರಕಟವಾದ ಈ ಕವನಸಂಕಲನವು ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿತು. ನಾಗನ ಪದಗಳು ಕವನ ಸಂಕಲನದಲ್ಲಿ ಇರುವ ಒಂದು ಕವನವೇ **ನಲ್ಲೀ ತಾವ್ ನಂ ಮಲ್ಲೀ.**

ವಿಶೇಷವಾದ ಭಾಷಾ ಶೈಲಿಯಿಂದ ಕೂಡಿರುವ ಈ ಕವನದಲ್ಲಿ ಗಂಡನಾದವನಿಗೆ ತನ್ನ ಮಡದಿಯ ಮೇಲಿರುವ ಪ್ರೀತಿ ಸದಾ ಕಾಲದಲ್ಲೂ ಹೇಗೆ ಅಚ್ಚಹಸಿರಾಗಿರಬಲ್ಲದು ಎಂಬುದನ್ನು ತಿಳಿಸುತ್ತದೆ.

ಬೇಲೂರ್ ಗುಡಿಯಾಗ್ ಕನಡಿ ಕೈಯಿನ್
ಯಿಗ್ರಾ ಯಿಲ್ವಾ ಅಲ್ಲಿ
ಅಂಗೇ ಕೈನಾಗ್ ಚೌರ್ಗೆ ಯಿಡಕಂಡ್
ನಲ್ಲೀ ತಾವ್ ನಂ ಮಲ್ಲೀ !

ಆಗಿನ ಕಾಲದಲ್ಲಿ ನಲ್ಲಿಯ ಹತ್ತಿರ ಬಿಂದಿಗೆ ಹಿಡಿದುಕೊಂಡು ನೀರು ತರುವ ಕೆಲಸವನ್ನು ಮನೆಯ ಹೆಂಗಸರು ಮಾಡುತ್ತಿದ್ದರು. ಈ ಕವನದಲ್ಲಿ ಬರುವ ನಾಯಕಿ ಕುಡಿಯುವ ನೀರು ತರಲು ನಲ್ಲಿ ಹತ್ತಿರ ನಿಂತಿದ್ದಾಳೆ. ರಸ್ತೆಯ ಹತ್ತಿರ ನಲ್ಲಿಯ ಮುಂದೆ ನಿಂತಿರುವ ಮಡದಿಯನ್ನು ನೋಡಿದರೆ ಬೇಲೂರಿನ ದೇವಾಲಯದಲ್ಲಿ ಕನ್ನಡಿಯನ್ನು ಹಿಡಿದುಕೊಂಡು ಇರುವ ವಿಗ್ರಹ ಇದೆಯಲ್ಲ ಹಾಗೆ ಅಂದರೆ ಶಿಲಾಬಾಲಿಕೆಯ ಹಾಗೆ ನನ್ನ ಮಲ್ಲಿ ನಲ್ಲಿ ಹತ್ತಿರ ಬಿಂದಿಗೆ ಹಿಡಿದುಕೊಂಡು ನಿಂತಿದ್ದಾಳೆ ಎಂದು ನಾಯಕ ತನ್ನ ಮಡದಿಯ ಸೌಂದರ್ಯವನ್ನು ಮೆಚ್ಚಿಕೊಳ್ಳುತ್ತಾನೆ.

ಬಣ್ಣಾನು ಒಸಿ ಅಂಗೇನೇವಾ !
ಅಂಗೇನೆ ಎದೆಬಾವ !
ಮಲ್ಲಿ ಯಾರಾ? ಯಾಕ್ – ಅವರಪ್ಪ
ಯೆಣ್ ಕೊಟ್ ನಂಗೆ, ಮಾವ

ಬೇಲೂರು ಶಿಲಾಬಾಲಿಕೆಯ ಬಣ್ಣದ ಹಾಗೆ ಇರುವಳು ನಮ್ಮ ಮಲ್ಲಿ, ಅವಳ ಎದೆ ಭಾವ (ಮಾಟ)ವು ಅಷ್ಟೇ ಮನ ಸೆಳೆಯುವಂತಹದ್ದು ಎಂದು ಹೇಳುವ ನಾಯಕ ನೀನು ಹೊಗಳುತ್ತಿರುವ ಆ ಮಲ್ಲಿ ಯಾರು ಎಂಬ ಪ್ರಶ್ನೆಗೆ ಯಾಕೆ ಎಂದು ಮರುಪ್ರಶ್ನೆ ಕೇಳಿ ತಕ್ಷಣವೇ ಅವರಪ್ಪ ನನಗೆ ಹೆಣ್ಣು ಕೊಟ್ಟ ಮಾವ ಎಂದು ತಿಳಿಸುತ್ತಾನೆ.

ಅವರ ಅಪ್ಪಂಗ್ ಅವಳ್ ಜೀವದ್ ಜೀವ
ಅವರ ಅಮ್ಮಂಗ್ ಅವಳ್ ಕಣ್ಣು !
ನಂಗನಕಾ – ಓ ! ಏನ್ ಎಂಗ್ ಯೇಳ್ಲಿ !
ಬಾದಾಂ ಮಾವೀನಣ್ಣು !

ಮಲ್ಲಿ ಅಂದರೆ ಅವರ ಅಪ್ಪನಿಗೆ ಜೀವಕ್ಕೆ ಜೀವ ಇದ್ದ ಹಾಗೆ ನಿಜ ಅಲ್ವ ! ಇಲ್ಲಿಯೂ ಮಲ್ಲಿಯ ತಂದೆಗೆ ಮಲ್ಲಿ ಜೀವಕ್ಕೆ ಜೀವ ಇದ್ದ ಹಾಗೆ ಎಂದು ಮಲ್ಲಿಯ ತಾಯಿಗೆ ಮಲ್ಲಿ ಕಣ್ಣು ಇದ್ದ ಹಾಗೆ ಎಂದು ಕಣ್ಣಿಲ್ಲದೆ ಏನನ್ನು ನೋಡಲು ಸಾಧ್ಯವಿಲ್ಲ ಹಾಗೆಯೇ ಮಲ್ಲಿಯೇ ತಾಯಿಯ ಪಾಲಿಗೆ ಕಣ್ಣು ಎಂದು ಹೇಳುವ ನಾಯಕ ಸರಿ ಮಲ್ಲಿ ನಿನಗೆ ಏನಾಗಬೇಕೆಂದು ಪ್ರಶ್ನಿಸಿದರೆ ಏನು, ಹೇಗೆ ಹೇಳಲಿ ಅವಳು ನನ್ನ ಪಾಲಿಗೆ ಬಾದಾಂ ಮಾವಿನಹಣ್ಣಿನಂತೆ ಎನ್ನುವ ಮೂಲಕ ತನ್ನ ಬದುಕಿಗೆ ಅವಳೇ ಸರ್ವಸ್ವ ಎಂದು ತಿಳಿಸಿದ್ದಾನೆ.

ಮಿಕ್ಕೋರ್ ಯಾರಾರ್ 'ಮಲ್ಲೀಂ' ತಂದ್ರೆ
ಅಲ್ ಉದುರಿಸ್ ಬುಟ್ಟಾಳು
ನಾನ್ ಅನಬೈದು – ನಂಗ್ ಅವಳ್ ಯೆಂಡ್ರು !
ಸಲ್ಗೆ – ನಂಗೆ ಏನ್ ಯೇಳು !

ಯಾರಾದರೂ ಅವಳನ್ನು ಮಲ್ಲಿ ಅಂದರೆ ಹಲ್ಲು ಉದುರಿಸಿಬಿಡ್ತಾಳೆ, ನಾನು ಮಾತ್ರ ಆ ರೀತಿ ಕರೆಯ ಬಹುದು. ಯಾಕೆಂದರೆ ನನಗೆ ಅವಳು ಹೆಂಡ್ತಿ, ಆ ಸಲಿಗೆಯಿಂದ ನಾನು ಮಲ್ಲಿ ಅಂತ ಕರೆದರೆ ಏನು ಹೇಳಿ ಅಂತಾಳೆ ಎಂದು ನಾಯಕ ತನ್ನ ಮತ್ತು ಮಲ್ಲಿಯ ನಡುವಿನ ಆತ್ಮೀಯತೆಯನ್ನು ಹಾಗೂ ಮಲ್ಲಿಯ ಸ್ವಭಾವವನ್ನು ಚಿತ್ರಿಸುತ್ತಾನೆ.

ಮಲ್ಲವ್ವನ್ ನಾನ್ ಮೊದಲ್ ನೋಡಿದ್ ನಂ
ಪ್ಯಾಟೆ ನಲ್ಲೀ ತಾವ;
ಅವಳ್ಗೂನು ಯಿಂಗ್ ಅನ್ನೀಸ್ತಂತೆ:
"ಇವನ್ ಯಾರ್ ಯಿಂಗ್ ನೋಡಾವ?"

ತಾನು ಮಲ್ಲಿಯನ್ನು ಮೊದಲು ಪೇಟೆಯ ನಲ್ಲಿಯ ಹತ್ತಿರ ನಿಂತಿದ್ದು ನೋಡಿ ಮೊದಲ ನೋಟದಲ್ಲೇ ಅವನಿಗೆ ಪ್ರೇಮಾಂಕುರವಾಗುತ್ತದೆ.ಈ ಕಡೆ ಮಲ್ಲಿಗೂ ಕೂಡ ಹಾಗೆಯೇ ಅನಿಸಿರುತ್ತದೆ ಯಾರಿವನು, ಈ ರೀತಿ ನೋಡ್ತ ಇದಾನೆ ಎಂದು ಅನಿಸಿತಂತೆ ಎನ್ನುವ ಮೂಲಕ ಇಬ್ಬರ ನಡುವೆ ಮೊದಲ ನೋಟದಲ್ಲೇ ಪ್ರೇಮಾಂಕುರದ ಮೊಳಕೆ ಚಿಗುರೊಡೆದಿತ್ತೆಂಬ ವಿಚಾರವನ್ನು ಇಲ್ಲಿ ತಿಳಿಸಲಾಗಿದೆ.

ಮಲ್ಲಮ್ಮಂಗೂ ನನ್ ತಂಗೀಗೂ
ನಲ್ಲೀ ನ್ಯಾಸ್ತ ಬಾಳ.
ಮೀನ್ ಯಿಡಿದಂಗ್ ನನ್ ಯಿಡಿದಾಕ್ ಬುಡ್ತು
ಮಲ್ಲೀ ಎಸದಿದ್ ಗಾಳ!

ನನ್ನ ತಂಗಿಗೂ ಮಲ್ಲಮ್ಮನಿಗೂ (ಮಲ್ಲಿ)ನಲ್ಲಿ ಹತ್ತಿರ ನೀರು ಹಿಡಿಯಲು ಹೋದಾಗ ಮಾತುಕತೆ ನಡೆದು ಇಬ್ಬರಿಗೂ ಸ್ನೇಹವಾಗಿತ್ತು.ಆ ಸ್ನೇಹದಿಂದ ಮಲ್ಲಮ್ಮ ನೀರಿನಲ್ಲಿ ಮೀನನ್ನು ಹಿಡಿಯಲು ಗಾಳ ಎಸೆಯುವ ಹಾಗೆ ಪ್ರೀತಿ ಎಂಬ ಗಾಳವನ್ನು ಹಾಕಿ ನನ್ನನ್ನು ಮೀನು ಹಿಡಿದ ಹಾಗೆ ತನ್ನ ಪ್ರೇಮಪಾಶದಲ್ಲಿ ಬೀಳಿಸಿಕೊಂಡಳು ಎಂಬ ವಿಚಾರವನ್ನು ನಾಯಕ ಹೇಳುತ್ತಿದ್ದಾನೆ.

ಮೂರ್ ಆಗೋವೆ ಮಕ್ಕಳ್ ನಮ್ಗೆ
ಗಂಡ್ ಎಳ್ಡ್ ಒಂದೇ ಯೆಣ್ಣು
ಆದ್ರೂ ಮಲ್ಲಿ ನೀರ್ಗ್ ಒಂಟ್ಳೊಂದ್ರೆ
ಅತ್ತಾಗೇ ನನ್ ಕಣ್ಣು !

ಪ್ರೀತಿಸಿದ ಮಲ್ಲಿಯನ್ನು ಮದುವೆಯಾಗಿದ್ದಾನೆ. ಅವರಿಗೆ ಎರಡು ಗಂಡುಮಕ್ಕಳು, ಒಬ್ಬ ಹೆಣ್ಣು ಮಗಳಿದ್ದಾಳೆ. ಆದರೂ ಅವನಿಗೆ ತನ್ನ ಮಡದಿಯ ಮೇಲಿನ ಪ್ರೀತಿ ಕಡಿಮೆಯಾಗಿಲ್ಲ, ಈಗಲೂ ಮಲ್ಲಿ ನೀರಿಗೆಂದು ಬಿಂದಿಗೆ ಹಿಡಿದುಕೊಂಡು ಹೊರಟರೆ ಅವಳನ್ನೇ ನೋಡುವ ಆಸೆ ಅವನಿಗಿದೆ.

ನಿಂತ್ರೊಂಚಂದ ! ಕುಂತ್ರೊಂ ಚಂದ !
ನಡಿತಾನಿದ್ರ ಒಂಚಂದ !
ಮಲ್ಲಿ ಚೌರ್ಗೆ ಬೆಳಗೋದ್ ಚಂದ !
ನೀರ್ ತುಂಬೋದೂ ಚಂದ !

ನೀರು ಹಿಡಿಯಲು ಮಲ್ಲಿ ಹೋಗಿ ನಿಂತುಕೊಂಡರೆ ಅದನ್ನು ನೋಡುವುದೇ ಒಂದು ಚೆಂದ, ಕುಳಿತುಕೊಂಡರೆ ಅದು ಮತ್ತೊಂದು ರೀತಿಯಲ್ಲಿ ಚೆಂದವಾಗಿ ಕಾಣುತ್ತದೆ, ನೀರನ್ನು ತೆಗೆದುಕೊಂಡು ನಡೆದುಕೊಂಡು ಬರುತ್ತಿದ್ದರೆ ಅದನ್ನು ನೋಡುವುದು ಮತ್ತೊಂದು ರೀತಿಯಲ್ಲಿ ಚೆಂದ, ಮಲ್ಲಿ ಬಿಂದಿಗೆಯನ್ನು ತೊಳೆದು ಬೆಳಗುವುದು, ನೀರು ತುಂಬುವುದು ಎಲ್ಲಾವೂ ಚೆಂದವಾಗಿಯೇ ಕಾಣುತ್ತದೆ.

ತುಂಬಿದ ಚೌರ್ಗೇನ್ ವೂ ಎತ್ ದಂಗೆ
ಸೊಂಟ್ದಾಗ್ ಸಿಕ್ಸೋದ್ ಚಂದ !
ನಿರೀನ್ ಇಂಕ್ರ ನೆನಸದಂಗೇನೇ
ಚಿಮ್ತಾ ಬರೋದೆ ಚಂದ !

ನೀರು ತುಂಬಿದ ಬಳಿಕ ತುಂಬಿರುವ ಆ ಬಿಂದಿಗೆಯನ್ನು ಹೂವಿನಷ್ಟೇ ಸುಲಭವಾಗಿ ಎತ್ತಿಕೊಂಡು, ಆ ಬಿಂದಿಗೆಯನ್ನು ಸೊಂಟದಲ್ಲಿ ಸಿಗಿಸಿಕೊಂಡು ಒಂದು ಚೂರು ನೀರು ಚೆಲ್ಲದಾಗೆ, ಬಟ್ಟೆ ನೀರಾಗದ ಹಾಗೆ ತರುವ ಮಲ್ಲಿಯ ನಡಿಗೆಯನ್ನು ನೋಡುವುದೇ ನಾಯಕನಿಗೆ ತುಂಬಾ ಆನಂದವನ್ನುಂಟು ಮಾಡುತ್ತದೆ.

ನೀರ್ ಎಸ್ಟ್ ವೊತ್ರೂ – ಬಾಬಯ್ನಾಣೆ
ತೋಳ್ ತೊಡೆ ನಡಗಾಕಿಲ್ಲ
ಎಳ್ಡ್ ಅನಿ ಬೆವರು ಬಂದ್ರೇನ್ ಯೀಗ –
ಕುಂಕ್ಮ ಕದರಾಕಿಲ್ಲ

ಎಷ್ಟೇ ನೀರನ್ನು ಹೊತ್ತರೂ ಮಲ್ಲಿಯ ತೋಳಾಗಲಿ, ತೊಡೆಯಾಗಲಿ ನಡುಗುವುದಿಲ್ಲ, ಆಯಾಸವಾಗಿ ಬೆವರಿನ ಹನಿಗಳು ಬರಬಹುದು. ಆದರೂ ಆ ಬೆವರಿನ ಹನಿ ಅವಳು ಹಾಕಿರುವ ಕುಂಕುಮ್ಮವನ್ನು ಅಳಿಸಲಾರದು ಎನ್ನುವ ಮೂಲಕ ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವ ಶಕ್ತಿ ಮಲ್ಲಿಗಿದೆ ಎಂದಿದ್ದಾರೆ.

ನಲ್ಲೀ ತಾವ್ ಯಾರ್ ರಾಂಗ್ ಮಾತಿಲ್ಲ
ಮಲ್ಲೀ ಅಲ್ಲಿರೋಗಂಟ !
ಮರ್ವಾದೀಗ್ ಅವಳ್ ಮೇಲ್ ಪಂಕ್ತೀನೆ –
ಮಿಕ್ಕೋರ್ ತಪ್ಪಾಕ್ ಉಂಟಾ ?

ಮಲ್ಲವ್ವ ನಲ್ಲಿಯ ಹತ್ತಿರ ಇರುವ ತನಕ ಯಾರು ಕೂಡ ಜಗಳ ಮಾಡುವುದಿಲ್ಲ, ಮಲ್ಲವ್ವನ ಮೇಲಿನ ಮರ್ಯಾದೆಯಿಂದ ಅವಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ ಎನ್ನುವ ಮೂಲಕ ಮಲ್ಲವ್ವ ಎಲ್ಲಾರಿಗೂ ಬೇಕಾದವಳು, ಎಲ್ಲಾರ ಗೌರವಕ್ಕೆ ಪಾತ್ರವಾದವಳು ಎಂಬ ಅಂಶವನ್ನು ಇಲ್ಲಿ ತಿಳಿಸಲಾಗಿದೆ.

ಮಕ್ಕಳ್ ಬಂದ್ರೆ, ಅಸ ಕರ ಬಂದ್ರೆ
ಅವಕೇ ಮೊದಲಿನ್ ಪಂಕ್ತಿ ;
ಮತ್ ಬರಬೇಕು ಮುದುಕೀರ್ ಪಾಳಿ –
ಇದು ನಂ ಮಲ್ಲೀ ಸಂಗ್ತಿ.

ಮಲ್ಲವ್ವನಲ್ಲಿ ಹತ್ತಿರ ಇರುವವರಿಗೆ ಒಂದು ನಿಯಮ ಹೇಳಿದ್ದಾಳೆ. ಮಕ್ಕಳು, ಹಸು,ಕರು ಬಂದರೆ ಮೊದಲ ಆದ್ಯತೆ ನೀಡಬೇಕು, ನಂತರ ವಯಸ್ಸಾದ ಮುದುಕಿಯರಿಗೆ ನಂತರದ ಸರದಿ,ನಂತರ ಉಳಿದವರು ನೀರು ಹಿಡಿದುಕೊಂಡು ಹೋಗಬೇಕು ಎನ್ನುವ ಮಲ್ಲವ್ವ ಮಾನವೀಯತೆಯ ಸಾಕಾರಮೂರ್ತಿಯಂತೆ ಕಾಣುತ್ತಾಳೆ.

ನಲ್ಲಿ ನೀರ್ಗೆ ನೂಕ್ ನುಗ್ಲ್ ಉಂಟ?
ಬಾಯ್ ಜೋರ್ ಮಾಡಾಕ್ ಉಂಟ?
ಸಾಲಾಗ್ ನಿಲ್ಬೇಕ್ ಸಿಪಾಯ್ ನಿಂತಂಗೆ–
ಚೌರ್ಗೆ ತುಂಬೋಗಂಟ !

ಮಲ್ಲಮ್ಮ ನಲ್ಲಿಯಲ್ಲಿ ನೀರು ಹಿಡಿಯಲು ಬರುವವರಿಗೆ ನಿಯಮ ಮಾಡಲು ಕಾರಣವೂ ಉಂಟು. ಎಲ್ಲಾರೂ ನಮ್ಮವರೆ ಆಗಿರುವಾಗ ನಲ್ಲಿಯಿಂದ ಒಂದೇ ಸಮನೆ ಬರುವ ನೀರಿಗೆ ನೂಕಾಟವಾಗಲೀ, ಜಗಳವಾಗಲೀ ಯಾಕೆ ಬೇಕು, ಬಿಂದಿಗೆಯಲ್ಲಿ ನೀರು ತುಂಬುವವರೆಗೆ ಸಾಲಾಗಿ ಸಿಪಾಯಿಗಳ ಹಾಗೆ ನಿಂತು ನೀರನ್ನು ಹಿಡಿದುಕೊಂಡು ಹೋಗಿ ಎನ್ನುವುದು ಮಲ್ಲಮ್ಮನ ವಾದ.

ನಲ್ಲೀ ನೀರೀಗ್ ಬಂದೋರ್ ಅಲ್ಲಿದು
ಲಾಲ್ ಬಾಗಿನ್ದು ಪರಿಸೆ !
ಒಂದೇ ಮನೆಯೋರ್ ಬಿಂದ್ಗೆ ತಂದಂಗ್ !
ಅದ್ದು – ಮಲ್ಲಿ ವರಿಸೆ !

ನಲ್ಲಿಯಲ್ಲಿ ನೀರು ಹಿಡಿಯಲು ಬಂದವರು ಎಂದರೆ ಅದನ್ನು ನೋಡುವುದೇ ಒಂದು ಹಿತ, ಅದು ಲಾಲ್‌ಬಾಗಿನ ಸೌಂದರ್ಯವನ್ನು, ಸೊಬಗನ್ನು ಆಸ್ವಾದಿಸುವಂತೆ, ನಲ್ಲಿಯ ಹತ್ತಿರ ಬಿಂದಿಗೆ ತರುವವರೆಲ್ಲಾ ಒಂದೇ ಮನೆಯವರು ಅಂದರೆ ನೀರು ಹಿಡಿಯಲು ಬರುವ ನಾವೆಲ್ಲಾರೂ ಒಂದೇ ಎಂಬ ವಿಶಾಲ ಮನೋಭಾವ ಮಲ್ಲವ್ವನದು.

ಒಂದೊಂದಲ್ಲ ನಲ್ಲಿ ತಾವ್ ನಂ
ಮಲ್ಲೀ ಆಡೊ ಆಟ
ಬಾಲಾನ್ ಯಾರೂ ಬಿಚುವಂಗ್ ಇಲ್ಲ
ಮಲ್ಲಮ್ಮನ್ ಸಂಗಾಟ

ನಮ್ಮ ಮಲ್ಲಿಯ ಮುಂದೆ ಯಾರು ಕೂಡ ತಲೆಹರಟೆ ಮಾಡುವ ಆಗಿಲ್ಲ, ಮಲ್ಲವ್ವ ಹೇಳಿದಾಗ ನಾನು ಯಾಕೆ ಕೇಳಬೇಕು ಎಂದು ವಿರೋಧಿಸುವವರು ಯಾರು ಇಲ್ಲ ಎನ್ನುವ ಮೂಲಕ ಮಲ್ಲಿಯ ಬಗೆಗೆ ತನಗಿರುವ ಅಭಿಮಾನ ಹಾಗೂ ಉಳಿದವರಿಗಿರುವ ಭಯ, ಗೌರವ, ಭಕ್ತಿಯನ್ನು ವಿವರಿಸಿರುವುದನ್ನು ಕಾಣಬಹುದಾಗಿದೆ.

ಮಲ್ಲಮ್ಮ – ನನ್ ಮಕ್ಕಳ ತಾಯಿ !
ಮಲ್ಲೀ – ನಂಗ್ ಜೌಳ್ ಯೆಂಡ್ರು !
ನಂ ಪ್ಯಾಟೇಗ್ ಔಳೇ ಪಾಳೇಗಾತಿ !
ಯಿಂತೋಳನ್ ಯಾರ್ ಕಂಡ್ರು !

ಮಲ್ಲಮ್ಮ ನನ್ನ ಮಕ್ಕಳಿಗೆ ತಾಯಿ, ನನಗೆ ಮಲ್ಲಿ ಒಳ್ಳೆಯ ಹೆಂಡತಿ, ನಮ್ಮ ಪೇಟೆಗೆ ಸರಿ, ತಪ್ಪು ನಿರ್ಧರಿಸಿ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂದು ತಿಳಿಸುವ ಪಾಳೇಗಾತಿ ಇಂತಹವಳನ್ನು ಯಾರು ಕಾಣಲು ಸಾಧ್ಯ ?

ಅಣ್ಣಮ್ ತಾಯಿ ! ಅಡ್ ಬಿದ್ದೇ – ನನ್
ಯೆಂಡ್ರು ಮಕ್ಳು ಪ್ಯಾಟೆ
ಸೆಂದಾಗಿರ್ಲಿ – ನೋಡ್ಕೊಳ್ಳವ್ವಾ !
ನೀನೇ ನಮ್ಗೆ ಕ್ವಾಟೆ !

ಅಣ್ಣಮ್ಮ ತಾಯಿ ನಿನಗೆ ಬೇಡಿಕೊಳ್ಳುವೆ ನನ್ನ ಹೆಂಡತಿ, ಮಕ್ಕಳು,ನಮ್ಮ ಪೇಟೆನಾ ಚೆನ್ನಾಗಿರುವ ಹಾಗೆ ನೋಡಿಕೊ,ನಮ್ಮ ಪಾಲಿಗೆ ನೀನೇ ಕೋಟೆ ಇದ್ದ ಹಾಗೆ, ನಮ್ಮನ್ನೆಲ್ಲಾ ಹರಸುವವಳು ನೀನೆ ಎಂದು ಬೇಡಿಕೊಳ್ಳುವ ಪರಿಯನ್ನು ಗಮನಿಸಿದಾಗ ತಾನು, ತನ್ನ ಕುಟುಂಬ ಮಾತ್ರ ಚೆನ್ನಾಗಿದ್ರೆ ಸಾಕೆಂಬ ಸ್ವಾರ್ಥದಲ್ಲಿ ಬದುಕುವವರ ನಡುವೆ ನಮ್ಮ ಪೇಟೆಯು ಅಂದರೆ ಎಲ್ಲಾರೂ ಚೆನ್ನಾಗಿರಲೆಂದು ಪ್ರಾರ್ಥಿಸುವ ನಾಯಕ ಇಡೀ ಕವನದಲ್ಲಿ ನಿಜವಾದ ಅರ್ಥದಲ್ಲಿ ನಾಯಕನೆನಿಸಿಕೊಳ್ಳುತ್ತಾನೆ. ಇಡೀ ಕವನ ಒಂದು ಸರ್ವಸಾಮಾನ್ಯವಾದ ವಿಷಯವನ್ನು (ನಲ್ಲಿಯಲ್ಲಿ ನೀರು ಹಿಡಿಯುವ) ಒಳಗೊಂಡಂತಿದ್ದರೂ ಅದು ನೀಡುವ ಸಂದೇಶ ವಿಶಾಲವಾದ ಅರ್ಥವನ್ನು ತನ್ನಲ್ಲಿ ಅಡಗಿಸಿಟ್ಟುಕೊಂಡಿದೆ ಎನ್ನುವ ಭಾವ ನನ್ನದು. ಎಲ್ಲಾಕ್ಕಿಂತ ಮುಖ್ಯವಾಗಿ ಭಿನ್ನ ಪದಗಳ ಬಳಕೆ, ರಾಜರತ್ನಂ ಅವರು ಬದುಕನ್ನು ನೋಡುವ ಪರಿ, ನಿಜವಾದ ಪ್ರೀತಿ ಪ್ರೀತಿಯನ್ನು ಹೊರತುಪಡಿಸಿ ಬೇರೆ ಏನನ್ನೂ ಅಪೇಕ್ಷೆಪಡಲಾರದೆಂಬ ಭಾವ ಇವುಗಳನ್ನು ಅರ್ಥಮಾಡಿಕೊಂಡು ಪ್ರಸ್ತುತ ನಮ್ಮ ಬದುಕಿಗೆ ಅನ್ವಯಿಸಿಕೊಂಡರೆ ಕವನ ಮಗದಷ್ಟು ಅರ್ಥ ನೀಡಬಲ್ಲದು, ಮತ್ತಷ್ಟು ಆಪ್ತವಾಗಬಲ್ಲದು.

• ರಾಘವೇಂದ್ರ ಸಿ.ಎಸ್,
ಮೊ.9036389640



ಮೈಸೂರು ತಾಲೂಕಿನ ಕೋಟೆಹುಂಡಿ ಗ್ರಾಮದಲ್ಲಿ ಶಾಸಕ ಜಿ.ಟಿ.ದೇವೇಗೌಡ 50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಕೋಟೆಹುಂಡಿ ಮಹದೇವು, ಧನಗಹಳ್ಳಿ ಗ್ರಾಪಂ ಸದಸ್ಯರಾದ ಕೋಟೆಹುಂಡಿ ಸುರೇಶ್, ಪಾಪಣ್ಣ, ದೀಪು, ಪಿಡಿಓ ನರಹರಿ ಮತ್ತು ಕೋಟೆಹುಂಡಿ ಗ್ರಾಮಸ್ಥರಿದ್ದರು.

ಚಾಮುಂಡಿಬೆಟ್ಟದ ಸ್ವಚ್ಛತಾ ಅಭಿಯಾನ ಮುಂದುವರಿಕೆ

ಮೈಸೂರು, ಮಾ.9(ಎಂಟಿವೈ)– ಚಾಮುಂಡಿಬೆಟ್ಟದ ಸ್ವಚ್ಛತಾ ಅಭಿಯಾನ ಮುಂದುವರೆದಿದ್ದು, ಗುರುವಾರ ಅರಣ್ಯ ಸಿಬ್ಬಂದಿಗಳೊಂದಿಗೆ ಚಾಮುಂಡಿಬೆಟ್ಟ ಉಳಿಸಿ ಹಾಗೂ ಪರಿಸರ ಬಳಗದ ಕಾರ್ಯಕರ್ತರು ಪಾಲ್ಗೊಂಡು ಪರಿಸರ ಮಾರಕ ತ್ಯಾಜ್ಯ ಸಂಗ್ರಹಿಸಿದರು.


ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಅಭಿಯಾನದ ಅಂಗವಾಗಿ ಮಾ.3ರಿಂದ 21ರವರೆಗೆ ನಡೆಯುತ್ತಿರುವ ವಿಶೇಷ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ದಿನಕ್ಕೊಂದು ಸಂಸ್ಥೆಗಳ ಕಾರ್ಯಕರ್ತರು, ವಿದ್ಯಾರ್ಥಿಗಳು ಶ್ರಮದಾನದಲ್ಲಿ ಭಾಗಿಯಾಗುತ್ತಿದ್ದಾರೆ. ಇಂದು ಬೆಳಗ್ಗೆ 7.30ರಿಂದ 10 ಗಂಟೆವರೆಗೆ 50ಕ್ಕೂ ಹೆಚ್ಚು ಮಂದಿ ಪರಿಸರಾಸಕ್ತರು ಸ್ವಯಂಪ್ರೇರಣೆಯಿಂದ ಬಂದು 15ಕ್ಕೂ ಹೆಚ್ಚು ಮೂಟೆ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದರು. ಈ ಸಂದರ್ಭದಲ್ಲಿ ಪರಿಸರ ಬಳಗ ಹಾಗೂ ಚಾಮುಂಡಿಬೆಟ್ಟ ಉಳಿಸಿ ಸಮಿತಿಯ ಸದಸ್ಯರಾದ ಪರಶುರಾಮೇಗೌಡ, ಪ್ರೊ.ಕಾಳೇಗೌಡ ನಾಗವಾರ, ಪ್ರೊ. ಕಾಳ ಚೆನ್ನೇಗೌಡ, ಲೀಲಾ ಶಿವಕುಮಾರ್, ಗಂಟಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.


ಪೊಲೀಸ್ ಚೌಕಿಯೊಳಗೆ ಮದ್ಯದ ಬಾಟಲ್‌ಗಳು...!


ಮೈಸೂರು, ಮಾ.9 (ಎಂಕೆ)– ಪೊಲೀಸ್ ಚೌಕಿಯೊಳಗೆ ಮದ್ಯದ ಬಾಟಲ್‌ಗಳು... ಇಲ್ಲಿ ಕುಳಿತು ಕುಡಿದವರ್‍ಯಾರು...!?

ಸಂಚಾರ ನಿರ್ವಹಣೆಗೆ ಮೀಸಲಾಗಿರುವ ಪೊಲೀಸ್ ಚೌಕಿಯೊಂದರಲ್ಲಿ ಮದ್ಯದ ಬಾಟಲ್‌ಗಳು, ರಾಶಿ ರಾಶಿ ನೀರಿನ ಬಾಟಲ್‌ಗಳು ಬಿದ್ದಿದ್ದು ಚೌಕಿಯೊಳಗೆ ಪುಂಡರು ಕುಳಿತು ಪಾರ್ಟಿ ಮಾಡಿದ್ದಾರೋ ಎಂಬ ಅನುಮಾನ ಕಾಡುವಂತಿದೆ.

ಸ್ವಚ್ಛ, ಸುಂದರ, ಶಿಸ್ತಿನ ನಗರಿ ಎಂತಲೂ ಕರೆಯಲ್ಪಡುವ ಮೈಸೂರಿನ ಆರ್‌ಟಿಓ(ಲಕ್ಷ್ಮಿಪುರಂ ಪೊಲೀಸ್ ಠಾಣೆ ಸಮೀಪ) ವೃತ್ತದಲ್ಲಿರುವ ಪೊಲೀಸ್ ಚೌಕಿಯೊಳಗೆ ಮದ್ಯದ ಹಾಗೂ ನೀರಿನ ಖಾಲಿ ಬಾಟಲ್‌ಗಳು ಬಿದ್ದಿದ್ದು, ಚೌಕಿ ಕಸದ ತೊಟ್ಟಿಯಂತೆ ಕಾಣುತ್ತಿದೆ.







ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುವ ಸ್ಥಳವನ್ನು ನೋಡಿದ ಪಾದಚಾರಿಗಳು, ರಾತ್ರಿ ವೇಳೆ ಪುಂಡರು ಚೌಕಿಯೊಳಗೆ ಕೂತು ಪಾರ್ಟಿ ಮಾಡಿರಬಹುದು ಎಂದು ಕಿಡಿಕಾರಿದ್ದಾರೆ. ಜನರಿಗೆ ಕಾನೂನು ಪಾಠ ಹೇಳುವ ಪೊಲೀಸರಿಗೆ ಸಂಬಂಧಿಸಿದ ಚೌಕಿಯೊಳಗೆ ಅಸಹ್ಯ ಇರುವುದು ಬೇಸರದ ವಿಚಾರವಾಗಿದೆ ಎಂದಿದ್ದಾರೆ.

ವೃತ್ತದ ಹತ್ತಿರದಲ್ಲೇ ಲಕ್ಷ್ಮಿಪುರಂ ಪೊಲೀಸ್ ಠಾಣೆ, ಕೆ.ಆರ್.ಸಂಚಾರ ಪೊಲೀಸ್ ಠಾಣೆ, ಆರ್‌ಟಿಓ, ಸ್ವಲ್ಪ ದೂರದಲ್ಲಿ ಕೋರ್ಟ್, ಜಿಪಂ ಕಚೇರಿ ಇದೆ. ಖಾಸಗಿ ಶಾಲಾ–ಕಾಲೇಜು ಹಾಗೂ ವಿದ್ಯಾರ್ಥಿ ನಿಲಯಗಳೂ ಇದ್ದು, ಸದಾ ಜನ ಹಾಗೂ ವಾಹನ ದಟ್ಟಣೆಯಿಂದ ಕೂಡಿರುವ ವೃತ್ತದಲ್ಲಿ ಪೊಲೀಸರ ಈ ಚೌಕಿಯೊಳಗೆ ಮದ್ಯದ ಬಾಟಲಿ ತುಂಬಿರುವುದು ನಮ್ಮ ಕಾನೂನು ವ್ಯವಸ್ಥೆ ಅಣಕಿಸುವಂತಿದೆ.

ನಿರುಪಯುಕ್ತ ಚೌಕಿ: ಚೌಕಿಯ ದುಸ್ಥಿತಿ ಗಮನಿಸಿದರೆ ಸಂಚಾರ ಪೊಲೀಸರು ಇದನ್ನು ಬಳಸುತ್ತಿಲ್ಲವೆಂದು ಕಾಣುತ್ತದೆ. ಬಳಸದೇ ಇದ್ದ ಮೇಲೆ ತೆರವು ಮಾಡಬೇಕು. ಪಾಳು ಬಿದ್ದಂತಿದ್ದರೆ ಕಸದ ತೊಟ್ಟಿಯಾಗಲಿದೆ. ಈ ಕುರಿತು ಚೌಕಿ ವಾರಸುದಾರರಾದ ಪೊಲೀಸ್ ಠಾಣೆ ಅಧಿಕಾರಿಗಳು ಗಮನ ಹರಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



'ಪ್ರಭುತ್ವ' ಮೆಲೋಡಿ ಹಾಡು ಬಿಡುಗಡೆ



ಪ್ರಜಾಪ್ರಭುತ್ವ, ಮತದಾನದ ಬಗ್ಗೆ ಅರಿವು ಮೂಡಿಸುವ ಕಥಾಹಂದರ ಹೊಂದಿದ ಚಿತ್ರ 'ಪ್ರಭುತ್ವ'. ಆರ್. ರಂಗನಾಥ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಯುವನಟ ಚೇತನ್‌ಚಂದ್ರ ಹಾಗೂ ಪಾವನಗೌಡ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಪ್ರಭುತ್ವ ಚಿತ್ರದ ನೀನೇನಾ ನೀನೇನಾ ಎಂಬ ಮೆಲೋಡಿಸಾಂಗ್ ಬಿಡುಗಡೆ ಸಮಾರಂಭ ಹಾಗೂ ಪತ್ರಿಕಾಗೋಷ್ಠಿ ನಡೆಯಿತು. ಮೇಘಡಹಳ್ಳಿ ಡಾ||ಶಿವಕುಮಾರ್ ಅರ್ಪಿಸುವ ಈ ಚಿತ್ರವನ್ನು ರವಿರಾಜ್ ಎಸ್. ಕುಮಾರ್ ನಿರ್ಮಿಸಿದ್ದಾರೆ.

ನಾಯಕ ಚೇತನ್‌ಚಂದ್ರ ಮಾತನಾಡುತ್ತ 'ಪ್ರಭುತ್ವ' ನನ್ನ ಸಿನಿಪಯಣದಲ್ಲೇ ಬಿಗ್‌ಬಜೆಟ್ ಚಿತ್ರ ಎನ್ನಬಹುದು. ನಿರ್ಮಾಪಕರು ಯಾವುದಕ್ಕೂ ಕೊರತೆ ಮಾಡದೆ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ರಂಗನಾಥ್ ಅವರು ಚಿತ್ರವನ್ನು ಅದ್ಭುತವಾಗಿ ನಿರ್ದೇಶಿಸಿದ್ದಾರೆ. ನನ್ನ ಪಾತ್ರ ಕೂಡ ಚೆನ್ನಾಗಿದೆ. ಇದು ಹಾಡಿನ ಬಿಡುಗಡೆ ಸಮಾರಂಭ ಆಗಿರುವುದರಿಂದ, ಹಾಡಿನ ಬಗ್ಗೆ ಹೇಳುತ್ತೇನೆ. ಹರಿ ಸಂತೋಷ್ ಈ ಹಾಡನ್ನು ಬರೆದಿದ್ದು, ಕಾರ್ತಿಕ್ ಹಾಗೂ ಸುಪ್ರಿಯಾರಾಮ್ ಸೊಗಸಾಗಿ ಹಾಡಿದ್ದಾರೆ. ಎಮಿಲ್ ಅವರು ಅಷ್ಟೇ ಚೆನ್ನಾಗಿ ಇದಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಛಾಯಾಗ್ರಾಹಕ ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಹಣ ಕೂಡ ಸುಂದರವಾಗಿದೆ ಎಂದು ಹೇಳಿದರು. ನಿರ್ದೇಶಕ ರಂಗನಾಥ್ ಮಾತನಾಡುತ್ತ, ನಾನು ಈ ಹಿಂದೆ ಅರಿವು ಹಾಗೂ ಕೂಗು ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದೆ. ಇದು ನನ್ನ ಮೂರನೇ ಚಿತ್ರ. ನಿರ್ಮಾಪಕ ರವಿರಾಜ್ ಅವರ ತಂದೆ ಮೇಘಡಹಳ್ಳಿ ಡಾ||ಶಿವಕುಮಾರ್ ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಎಮಿಲ್ ಸಂಗೀತ ಸಂಯೋಜನೆಯ ನಾಲ್ಕು ಹಾಡುಗಳು ಚಿತ್ರದಲ್ಲಿದೆ, ಮತದಾನದ ಮಹತ್ವ ಸಾರುವ ಚಿತ್ರ ಇದಾಗಿದ್ದು, ಶರತ್ ಲೋಹಿತಾಶ್ವ, ವಿಜಯ್ ಚೆಂಡೂರ್ ಉಳಿದ ತಾರಾಬಳಗದಲ್ಲಿದ್ದಾರೆ ಎಂದರು. ತಮ್ಮ ಪಾತ್ರದ ಬಗ್ಗೆ ಚಿಕ್ಕದಾಗಿ ಮಾತನಾಡಿದ ನಾಯಕಿ ಪಾವನಾಗೌಡ, ಇಂದು ಬಿಡುಗಡೆಯಾಗಿರುವ ಹಾಡು ತುಂಬಾ ಚೆನ್ನಾಗಿದೆ ಎಂದರು.

ಸಂಗೀತ ನಿರ್ದೇಶಕ ಎಮಿಲ್ ಮಾತನಾಡುತ್ತ, ಈಗ ನಮ್ಮ ಚಿತ್ರದ ಮೆಲೋಡಿ ಸಾಂಗ್ ಬಿಡುಗಡೆಯಾಗಿದೆ. ಕಾರ್ತಿಕ್ ಹಾಗೂ ಸುಪ್ರಿಯಾರಾಮ್ ಹಾಡಿದ್ದಾರೆ ಎಂದರು. ನಟರಾದ ಶರತ್ ಲೋಹಿತಾಶ್ವ ವಿಜಯ್ ಚೆಂಡೂರ್, ಡ್ಯಾನಿ ತಮ್ಮ ಪಾತ್ರಗಳ ಬಗ್ಗೆ ಮಾತನಾಡಿದರು. ಛಾಯಾಗ್ರಾಹಕ ಕೆ.ಎಸ್ ಚಂದ್ರಶೇಖರ್ ಕ್ಯಾಮೆರಾ ವರ್ಕ್ ಕುರಿತು ಮಾಹಿತಿ ನೀಡಿದರು.

ಈ ವಾರ ತೆರೆಗೆ ಚೌಕಾಬಾರ

ಸಿಲ್ಲಿ ಲಲ್ಲಿ ಖ್ಯಾತಿಯ ವಿಕ್ರಂ ಸೂರಿ ನಿರ್ದೇಶನದ 'ಚೌಕಾಬಾರ' ಚಿತ್ರವು ಇಂದಿನಿಂದ ರಾಜ್ಯಾದ್ಯಂತ ಐವತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಅಲ್ಲದೆ ಮಾರ್ಚ್ 24, 25 ಹಾಗೂ 26ಕ್ಕೆ ಅಮೇರಿಕಾದ ಐದು ರಾಜ್ಯಗಳಲ್ಲಿ ಈ ಚಿತ್ರ ತೆರೆ ಕಾಣಲಿದೆ. ಸುಮಾರು ವರ್ಷಗಳಿಂದ ರಂಗಭೂಮಿ, ಕಿರುತೆರೆ ಹಾಗೂ ಹಿರಿತೆರೆಯಲ್ಲಿ ಸಕ್ರಿಯರಾಗಿರುವ ನಮಿತಾರಾವ್ ಹಾಗೂ ವಿಕ್ರಮ್ ಸೂರಿ ದಂಪತಿಗಳ ಕನಸಿನಕೂಸು ಈ 'ಚೌಕಾಬಾರ'. ನವಿ ನಿರ್ಮಿತಿ ಲಾಂಛನದಲ್ಲಿ ನಮಿತಾರಾವ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ವಿಕ್ರಮ್‌ಸೂರಿ ನಿರ್ದೇಶನ ಮಾಡಿದ್ದಾರೆ.

ನಮಿತಾರಾವ್ ಈ ಚಿತ್ರದ ನಿರ್ಮಾಪಕಿ ಅಷ್ಟೇ ಅಲ್ಲ. ನಾಯಕಿ ಕೂಡ. ವಿಹಾನ್ ಪ್ರಭಂಜನ್ ನಾಯಕ. ಕಾವ್ಯ ರಮೇಶ್, ಸುಜಯ್ ಹೆಗಡೆ, ಸಂಜಯ್‌ಸೂರಿ, ಪ್ರಥಮಪ್ರಸಾದ್ ಮುಂತಾದವರ ಕಲಾವಿದರ ಬಳಗ ಈ ಚಿತ್ರದಲ್ಲಿದೆ. ಮಣಿರಾವ್ ಅವರ ಕಾದಂಬರಿ ಆಧರಿತ ಚಿತ್ರ ಇದಾಗಿದ್ದು, ಚಿತ್ರಕ್ಕೆ ರೂಪ ಪ್ರಭಾಕರ್ ಸಂಭಾಷಣೆ ಬರೆದಿದ್ದಾರೆ. ಅಶ್ವಿನ್ ಪಿ.ಕುಮಾರ್ ಸಂಗೀತ ಸಂಯೋಜನೆ, ರವಿರಾಜ್ ಛಾಯಾಗ್ರಹಣ ಶಶಿಧರ್ ಸಂಕಲನ ಹಾಗೂ ಮದನ್-ಹರಿಣಿ, ಸಚಿನ್ ಅವರ ನೃತ್ಯನಿರ್ದೇಶನ ಈ ಚಿತ್ರಕ್ಕಿದೆ.



ಈ ವಾರ ತೆರೆಗೆ '1 ರಾಬರಿ ಕಥೆ'



ರಾಬರಿ, ಹಣದ ಸುತ್ತ ನಡೆಯುವ ಕಥಾಹಂದರ ಹೊಂದಿರುವ ಚಿತ್ರ '1 ರಾಬರಿ ಕಥೆ' ಈ ವಾರ ರಾಜ್ಯಾದ್ಯಂತ ತೆರೆಕಾಣಲಿದೆ. ರೊಮ್ಯಾಂಟಿಕ್, ಕಾಮಿಡಿ, ಆಕ್ಷನ್, ಸಸ್ಪೆನ್ಸ್- ಥ್ರಿಲ್ಲರ್ ಕಥೆಯಿರುವ ಈ ಚಿತ್ರಕ್ಕೆ ಗೋಪಾಲ್ ಹಳ್ಳೇರ್ ಹೊನ್ನಾವರ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸಮನ್ವಿ ಕ್ರಿಯೇಶನ್ಸ್ ಬೇಲೂರು ಅಡಿಯಲ್ಲಿ ಸಂತೋಷ್ ನಾಗೇನಹಳ್ಳಿ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಜಿ.ಪ್ರಕಾಶ್ ಅವರ ಸಂಭಾಷಣೆ, ಸಂತೋಷ್ ನಾಗೇನಹಳ್ಳಿ, ಪ್ರಕಾಶ್ ಅವರ ಸಾಹಿತ್ಯ, ಡಿಫರೆಂಟ್ ಡ್ಯಾನಿ ಅವರ ಸಾಹಸ, ಹರೀಶ್ ಜಿಂದೆ ಅವರ ಛಾಯಾ ಗ್ರಹಣ, ಸಂಜೀವರೆಡ್ಡಿ ಅವರ ಸಂಕಲನ, ಶ್ರೀವತ್ಸ ಅವರ ಸಂಗೀತ ಮತ್ತು ಚಾಮರಾಜ್, ರೋಹಿತ್ ಅರುಣ್ ಅವರ ನೃತ್ಯ ನಿರ್ದೇಶನವಿದೆ. ಈ ಚಿತ್ರದಲ್ಲಿ ರಣಧೀರ್ ಗೌಡ, ರಿಶ್ವಿಭಟ್, ಸುಂದರ್ ರಾಜ್, ಕರಿ ಸುಬ್ಬು, ಕಡ್ಡಿಪುಡಿ ಚಂದ್ರು, ಶಿವರಾಜ್ ಕೆ.ಆರ್. ಪೇಟೆ, ತಬಲಾನಾಣಿ, ಜಹಾಂಗೀರ್, ಗಿರೀಶ್ ಶಿವಣ್ಣ, ಮೂಗ್ ಸುರೇಶ್, ಎಂ.ಕೆ.ಮಠ್, ನವೀನ್ ಪಡೀಲ್, ಸಂಜು ಬಸಯ್ಯ ಅಲ್ಲದೆ ನಿರ್ಮಾಪಕ ಸಂತೋಷ್ ಅವರೂ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಆನಂದರಾಗ' ಕಪ್ಪು ಬಣ್ಣದ ಹುಡುಗನ ಪ್ರೇಮರಾಗ

'ಆನಂದರಾಗ' ಚಿತ್ರದಲ್ಲಿ ದೀಪಾ ಹಿರೇಮಠ್

ಹೆಣ್ಣೊಬ್ಬಳು ಕಪ್ಪಾಗಿದ್ದರೆ ಸಮಾಜದಲ್ಲಿ ಆಕೆ ಏನೆಲ್ಲ ತೊಂದರೆ ತಾಪತ್ರಯಗಳನ್ನು ಈಗ ಅನುಭವಿಸಬೇಕಾಗುತ್ತದೆ ಎನ್ನುವ ಕಂಟೆಂಟ್ ಉಳ್ಳ ಹಲವಾರು ಕಥೆಗಳು ಕಿರುತೆರೆಯಲ್ಲಿ ಮೂಡಿಬರುತ್ತಿವೆ. ಆದರೆ ಈಗ ಇದೇ ಮೊದಲ ಬಾರಿಗೆ ಕಪ್ಪು ಬಣ್ಣದ ಹುಡುಗನೊಬ್ಬನ ಮನಸ್ಥಿತಿ ಹೇಗಿರುತ್ತೆ, ಸಮಾಜದಲ್ಲಿ ಆತ ಎದುರಿಸುವ ಸಂದರ್ಭಗಳು, ಅವನಿಗಾಗುವ ಅವಮಾನಗಳು ಇದನ್ನೆಲ್ಲ ಸಹಿಸಿಕೊಂಡು ಆತ ಖಿನ್ನತೆಯಿಂದ ಹೇಗೆ ಹೊರಬರುತ್ತಾನೆ ಎಂಬುದನ್ನು ಹೇಳುವ ವಿಭಿನ್ನ ಕಥಾಹಂದರ ಹೊಂದಿರುವ ಧಾರಾವಾಹಿಯೊಂದು ಉದಯ ಟಿವಿಯಲ್ಲಿ ಮಾರ್ಚ್ 13ರಿಂದ ಪ್ರಸಾರವಾಗಲಿದೆ. ದಪ್ಪ ದೇಹ ಮತ್ತು ಕಪ್ಪು ಮೈಬಣ್ಣ ಹೊಂದಿರುವ ನಾಯಕ ಚೆಲುವರಾಜ ಹೇಗೆ ತನ್ನ ಮುಗ್ಧತೆಯಿಂದಲೇ ಜನರ ಮನಸ್ಸನ್ನು ಗೆದ್ದುಬರುತ್ತಾನೆ ಎನ್ನುವ ಕಾನ್ಸೆಪ್ಟ್ ಮೇಲೆ ಈ ಸೀರಿಯಲ್ ನಿರ್ಮಾಣವಾಗಿದೆ. ತಂದೆಯ ಗುರಿಯನ್ನೇ ತನ್ನ ಗುರಿಯನ್ನಾಗಿಸಿಕೊಂಡು ಐಪಿಎಸ್ ಆಗುವ ಕನಸನ್ನು ಹೊತ್ತ ನಾಯಕಿ ದುರ್ಗಾ ತನ್ನ ಮುಗುಳು ನಗೆಯಿಂದಲೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂಥ ಚತುರೆ. ಇವಳಿಗೂ ಕಪ್ಪು ಬಣ್ಣದ ಚೆಲುವನಿಗೂ ಹೇಗೆ ನಂಟಾಯಿತು, ಅವರಿಬ್ಬರ ನಡುವೆ ಇರುವ ಋಣಾನುಬಂಧದ ಕಥೆಯನ್ನು ಈ ಧಾರಾವಾಹಿಯಲ್ಲಿ ಹೇಳಲಾಗಿದೆ.

ನಾಯಕ ಚೆಲುವರಾಜ್, ಅಂಬರೀಷ್ ಅವರ ಅಪ್ಪಟ ಅಭಿಮಾನಿ. ಮುಗ್ಧತೆ 100%, ವಿದ್ಯೆ 0% ಇದ್ದರೂ ಇವನು ನೀಡುವ ನಗುವಿನ ಕಚಗುಳಿ ಮಾತ್ರ 200%. ಹೀಗಿರುವ ಚೆಲುವರಾಜ್ ತಾನು ಒಂದಲ್ಲ ಒಂದು ದಿನ ಅಂಬರೀಷ್ ಅವರ ರೀತಿ ಚಿತ್ರರಂಗದಲ್ಲಿ ದೊಡ್ಡ ಹೀರೊ ಆಗಿ ಬೆಳೆಯಬೇಕು ಎಂಬ ಕನಸು ಕಂಡಿರುತ್ತಾನೆ. ಅಪ್ಪ-ಅಮ್ಮನ ಮುದ್ದಿನ ಮಗಳಾದ ದುರ್ಗಾ ತನ್ನ ತಂದೆ-ತಾಯಿಗೆ ಅಷ್ಟೇ ಗೌರವ ಕೊಡುವವಳು. ದುರ್ಗಾ ಮತ್ತು ಚೆಲುವನ ನಡುವೆ ಅರಳುವ ವಿಭಿನ್ನವಾದ ಪ್ರೇಮಕಥೆಯನ್ನು ಇಲ್ಲಿ ಹೇಳಲಾಗುತ್ತದೆ. ದುರ್ಗಾಳ ಪಾತ್ರದಲ್ಲಿ ನಟಿ ದೀಪಾ ಹಿರೇಮಠ್ ಹಾಗೂ ಚೆಲುವರಾಜನಾಗಿ ಮಂಜು ನಟಿಸಿದ್ದಾರೆ. ನಾಯಕಿಯ ತಂದೆಯಾಗಿ ಕೀರ್ತಿರಾಜ್, ತಾಯಿಯಾಗಿ ಉಷಾ ಭಂಡಾರಿ ಕಾಣಿಸಿಕೊಂಡಿದ್ದಾರೆ. ನಾಯಕನ ತಾಯಿ ಪಾತ್ರದಲ್ಲಿ ವೀಣಾಸುಂದರ್ ನಟಿಸಿದ್ದಾರೆ. ಎಸ್.ಗೋವಿಂದ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಧಾರಾವಾಹಿಯ ನಿರ್ಮಾಣದ ಹೊಣೆಯನ್ನು ಆನಂದರಾಗ್ ವಿಷನ್‌ಟೈಮ್ಸ್ ಹೊತ್ತಿದೆ.

'ಹೈಡ್ ಅಂಡ್ ಸೀಕ್' ಫಸ್ಟ್ ಲುಕ್ ಬಿಡುಗಡೆ



ಲಕ್ಷ್ಮಣ ಖ್ಯಾತಿಯ ಅನೂಪ್ ರೇವಣ್ಣ ನಟಿಸಿರುವ ಹೈಡ್ ಅಂಡ್ ಸೀಕ್ ಚಿತ್ರವು ಸದ್ದಿಲ್ಲದೆ ಚಿತ್ರೀಕರಣ ಮುಗಿಸಿಕೊಂಡು ಬಿಡುಗಡೆಗೆ ಸಿದ್ಧವಾಗಿದೆ. ಪುನೀತ್ ನಾಗರಾಜು ಅವರ ನಿರ್ದೇಶನದ ಈ ಚಿತ್ರದಲ್ಲಿ ಅನೂಪ್ ರೇವಣ್ಣ ಒಬ್ಬ ಕಿಡ್ನಾಪರ್ ಆಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಕಾರ್ಯಕ್ರಮ ನಡೆಯಿತು. ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಿತ್ರದ ಫಸ್ಟ್ ಲುಕ್ ಅನಾವರಣಗೊಳಿಸಿದರೆ, ಮಾಜಿ ಸಚಿವ ಹೆಚ್.ಎಂ.ರೇವಣ್ಣ ಅವರು ಮೇಕಿಂಗ್ ವೀಡಿಯೋ ಲಾಂಚ್ ಮಾಡಿದರು.


ಈ ಸಂದರ್ಭದಲ್ಲಿ ಮಾತನಾಡಿದ ಹೆಚ್.ಎಂ.ರೇವಣ್ಣ, ಇವತ್ತು ಕನ್ನಡ ಚಿತ್ರರಂಗ ದೊಡ್ಡಮಟ್ಟದಲ್ಲಿ ಪ್ರೇಕ್ಷಕರನ್ನು ಪಡೆದಿದೆ. ಈ ಸಿನಿಮಾ ಕೂಡ ಅಂಥಾ ಚಿತ್ರಗಳ ಸಾಲಿಗೆ ಸೇರಲಿ ಎಂದು ಹಾರೈಸಿದರು.

ನಂತರ ಮಾತನಾಡಿದ ಪುನೀತ್ ನಾಗರಾಜು, ಯುವತಿಯ ಅಪಹರಣದ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ ಇದಾಗಿದ್ದು, ಬೆಂಗಳೂರು, ಮಾಗಡಿ, ಚಿಕ್ಕಮಗಳೂರು ಸುತ್ತಮುತ್ತ 30 ದಿನಗಳ ಕಾಲ ಚಿತ್ರೀಕರಿಸಿದ್ದೇವೆ. ಚಿತ್ರದಲ್ಲಿ ನಾಯಕನೇ ಕಿಡ್ನಾಪರ್ ಆಗಿದ್ದು, ಧನ್ಯ ರಾಮ್‌ಕುಮಾರ್ ಒಬ್ಬ ಬ್ಯುಸಿನೆಸ್‌ಮ್ಯಾನ್ ಮಗಳಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ರಿವರ್ಸ್ ಸ್ಕ್ರೀನ್ ಪ್ಲೇ ಮೂಲಕ ಕಥೆ ಹೇಳಲು ಟ್ರೈ ಮಾಡಿದ್ದೇವೆ, ಫಸ್ಟ್ ಹಾಫ್ ಡೈರೆಕ್ಟರ್ ಪಾಯಿಂಟ್ ಆಫ್ ವ್ಯೂನಲ್ಲಿ ಚಿತ್ರಕಥೆ ನಡೆದರೆ, ಸೆಕೆಂಡ್ ಹಾಫ್‌ನಲ್ಲಿ ಅದೇಸೀನ್ ಬೇರೆ ರೀತಿ ನಡೆಯುತ್ತದೆ ಎಂದು ಹೇಳಿದರು.

ನಾಯಕ ಅನೂಪ್ ಮಾತನಾಡುತ್ತ, ನಿರ್ದೇಶಕರು ಒಳ್ಳೇ ಕಥೆ ಮಾಡಿಕೊಂಡಿದ್ದರು. ನನ್ನ ಹಿಂದಿನ ಚಿತ್ರದ ಪಾತ್ರಕ್ಕೂ ಇದಕ್ಕೂ ವ್ಯತ್ಯಾಸವಿದೆ. ಜಾಸ್ತಿ ಮಾತಾಡದ, ಯಾವುದನ್ನೂ ಎಕ್ಸ್‌ಪ್ರೆಷನ್ ಮಾಡದಂಥ ವ್ಯಕ್ತಿ. ನಾನಿಲ್ಲಿ ಹೀರೋ, ವಿಲನ್ ಎರಡೂ ಥರದ ಕ್ಯಾರೆಕ್ಟರ್ ಪ್ಲೇ ಮಾಡಿದ್ದೇನೆ ಎಂದು ಹೇಳಿದರು.

ಸಿನಿಪದಬಂಧ-464

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1.	ಕೋಗಿಲೆ0ು ಮಧುರ ದನಿ	3
2.	ವಿನೋದ್ ರಾಜ್ ಆಡಿದ ಪಕ್ಷಿ0ಯೊಂದರ ಶಿಕಾರಿ	4
5.	ಪುಟ್ಟಣ್ಣನ ಮಿನುಗು ತಾರೆ	3
6.	ಹಣದ ಹುಚ್ಚು ಹಿಡಿದಿರುವವನಿಗೆ ಹೀಗೆನ್ನಿ!	5
8.	_ _ _ ಹೋಗ್ಬಿಟ್ನಾ!?	3
10.	ಕೆ.ಎಸ್.ನರಸಿಂಹಸ್ವಾಮಿ ಕನ್ನಡದ ಪ್ರೀತಿಯ ಬರಹಗಾರ	4
11.	ರಾಕ್ಷಸರು ಕಾಣಿಸಿಕೊಂಡ ನಾಡು	4
14.	ರಮೇಶ್ ಅರವಿಂದ್ ಕೊಲೆಗಾರನಾಗಿ ಇಲ್ಲಿ ತಿರುಗಿದ್ದಾನೆ	3
15.	ರಾಜೇಶ್ ಅಭಿನ0ುದ ಬಿಗಿ ರಕ್ಷಣೆ	5
16.	ಆಂಗ್ಲದ ಖಳನಾ0ುಕ	3
17.	ಚಿತ್ತಕ್ಕೆ ಸಿಕ್ಕ ನೆಮ್ಮದಿ	4
18.	ಶ್ರೀನಾಥ್ ಆಡಿದ ಶಿಕಾರಿ	3

ವಿಜೇತರು: ಲತಾಶ್ರೀ ಕೆ.ಜಿ., ನಂ. 374, 15ನೇ ಅಡ್ಡರಸ್ತೆ, 21ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ, ಮೈಸೂರು.

ಸಿನಿ ಪದಬಂಧ 463ರ ಸರಿ ಉತ್ತರ

ಉ	ಸಿ	ರೇ		ಬೆ	ಳ್ಳಿ	ಬೆ	ಟ್ಟ			ಕು
ತ್ತ						ಳ್ಳಿ		ಹ	ರಿ	ಣಿ
ರ	ಣ	ವಿ	ಕ್ರ	ಮ		ಯ		ಸಿ		ಗ
ಭೂ				ಹಾ	ಲ	ಪ್ಪ		ರು		ಲ್
ಪ		ಮಾ		ರಾ				ತೋ		
	ಯು	ವ	ರಾ	ಜ		ಪಂ	ಚ	ರ	ತ್ನ	
		ನ				ಚ		ಣ		ಪೇ
ಅ		ಮ		ಸ	ರಿ	ತಾ				ಪ
ಲ್ಲಿ		ಗ		ತ್ಯ		ರಾ	ಮ್	ಕು	ಮಾ	ರ್
ಇ	ರು	ಳು		ಜ್ಯೋ						ದೋ
ಲ್ಲಿ			ಶಾಂ	ತಿ	ಕೃ	ಷ್ಣ		ಕ	ಲ್ಯಾ	ಣಿ

ಮೇಲಿನಿಂದ ಕೆಳಕ್ಕೆ

1.	ಏಳು ಬಣ್ಣಗಳ ಕಾಮನ ಬಿಲ್ಲು	5
3.	" ತುಪ್ಪ _ _ _ _ ಉಗಳಗಿಲ್ಲ ನುಂಗಗಿಲ್ಲ....,"	4
4.	ಕಾಶೀನಾಥ್ ಹೆಸರಿಲ್ಲದವನು	4
5.	ಮಾಲಾಶ್ರೀ ಸ್ವಪ್ನದರಸಿ	6
7.	ಮೃತ್ಯುವನ್ನು ಗೆದ್ದವನಿಗೆ ಸಾವೆ ಇಲ್ಲ	4
9.	ಹೂವೊಂದರ ಜೊತೆಗೆ ಜಿಲ್ಲೆ0ುೊಂದು ಸೇರಿದರೆ ನಟನೊಬ್ಬ ಪ್ರತ್ಯಕ್ಷ !	6
11.	ರಂಜನಿ ರಾಘವನ್ ಅಭಿನ0ುದ ಚಿತ್ರ	4
12.	ಈ ಹಾದಿ0ುಲ್ಲಿ ಎಲ್ಲವೂ ಸಸ್ಪೆನ್ಸ್	5
13.	ರವಿಚಂದ್ರನ್,ರೋಜಾ, ಹೀರಾ ರಾಜ್ ಗೋಪಾಲ್ ಅಭಿನ0ುದ ಚಿತ್ರ	4
14.	ಹೆಣ್ಣನ್ನು ಧಾರೆ ಎರೆದು ಕೊಡು	4

ಮೈಸೂರು ಮಿತ್ರ ಶುಕ್ರವಾರ 10 ಮಾರ್ಚ್ 2023

50 ಮೀಟರ್ ಹೆಜ್ಜೆ ಹಾಕಿ ಮೋದಿ ದಶಪಥ ರಸ್ತೆ ಉದ್ಘಾಟನೆ: ಪ್ರತಾಪ್ ಸಿಂಹ

ಮಂಡ್ಯ, ಮಾ.9– ಪ್ರಧಾನಿ ನರೇಂದ್ರ ಮೋದಿ ಅವರು ಮಾ.12ರಂದು ಎಕ್ಸ್‌ಪ್ರೆಸ್ ವೇನಲ್ಲಿ 50 ಮೀಟರ್ ಹೆಜ್ಜೆ ಹಾಕುವ ಮೂಲಕ ದಶಪಥ ರಸ್ತೆ ಉದ್ಘಾಟಿಸಲಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮದ್ದೂರು ತಾಲೂಕಿನ ಗೆಜ್ಜಲಗೆರೆ ಕಾಲೋನಿಯಲ್ಲಿ ನಡೆಯುವ ಪ್ರಧಾನಿ ಮೋದಿ ಸಮಾವೇಶದ ಸಿದ್ಧತೆ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂದು ಪ್ರಧಾನಿ ಮೋದಿ ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಹೊರಟು ಬೆಳಗ್ಗೆ 11 ಗಂಟೆಗೆ ಮೈಸೂರಿನ ಮಂಡಕಹಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು, ಅಲ್ಲಿಂದ ವಿಶೇಷ ಹೆಲಿಕಾಪ್ಟರ್ ಮೂಲಕ ಮಂಡ್ಯದ ಪಿಇಎಸ್ ಕಾಲೇಜು ಆವರಣದಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಮೈದಾನಕ್ಕೆ ಬೆಳಗ್ಗೆ 11.35ಕ್ಕೆ ಬಂದಿಳಿಯಲಿದ್ದಾರೆ ಎಂದರು.

ರೋಡ್ ಶೋ: ಅಲ್ಲಿಂದ ಕಾರಿನಲ್ಲಿ ಮಂಡ್ಯದ ಐಬಿ ವೃತ್ತಕ್ಕೆ (ಹರಿಪ್ರಿಯಾ ಹೋಟೆಲ್ ಬಳಿಗೆ) ಆಗಮಿಸುವ ಪ್ರಧಾನಿ ಮೋದಿ ಐಬಿ ವೃತ್ತದಿಂದ ನಂದಾ ಟಾಕೀಸ್‌ವರೆಗೂ ಒಂದೂವರೆ ಕಿಲೋ ಮೀಟರ್ ರೋಡ್ ಶೋ ನಡೆಸಲಿದ್ದಾರೆ. ರಸ್ತೆ ಅಕ್ಕಪಕ್ಕ ನಿಂತು ಜನ ಮೋದಿ ಅವರನ್ನು ವೀಕ್ಷಿಸಲು ರಸ್ತೆಯ ಎರಡೂ ಬದಿ ಬಿದಿರು ಕಂಬ ಹಾಗೂ ಬ್ಯಾರಿಕೇಡ್ ಅಳವಡಿಸುತ್ತಿದ್ದು, 40 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಬಳಿಕ ನಂದಾ ಚಿತ್ರಮಂದಿರದಿಂದ ಕಾನ್ವೆ ಮೂಲಕ ರಸ್ತೆಯಲ್ಲಿ ಮೋದಿ ಪ್ರಯಾಣಿಸಲಿದ್ದು, ಅಮರಾವತಿ ಹೋಟೆಲ್ ಬಳಿಯಿಂದ ನೂತನ ಬೆಂಗಳೂರು– ಮೈಸೂರು ದಶಪಥ ರಸ್ತೆ ಪ್ರವೇಶಿಸಲಿದ್ದಾರೆ. ಈ ವೇಳೆ ರಸ್ತೆ ಮಧ್ಯೆ ಕಾರಿನಿಂದ ಇಳಿದು ಸಾಂಸ್ಕೃತಿಕ ಕಲಾತಂಡದಿಂದ ಸ್ವಾಗತ



ಪಡೆದು ಹೆದ್ದಾರಿಯಲ್ಲಿ ರಸ್ತೆಯಲ್ಲಿ 50 ಮೀಟರ್ ಹೆಜ್ಜೆ ಹಾಕುವ ಮೂಲಕ ದಶಪಥ ರಸ್ತೆ ಉದ್ಘಾಟಿಸಲಿದ್ದಾರೆ. ಬಳಿಕ ಮತ್ತೆ ಕಾರಿನ ಮೂಲಕ ಗೆಜ್ಜಲಗೆರೆ ಕಾಲೋನಿಗೆ ತೆರಳಿ ಅಲ್ಲಿ ನಡೆಯುವ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮೈಸೂರು– ಕುಶಾಲನಗರ ರಸ್ತೆಗೆ ಚಾಲನೆ ಮಧ್ಯಾಹ್ನ 12.15ಕ್ಕೆ ವೇದಿಕೆಗೆ ಆಗಮಿಸುವ ಮೋದಿ ಬೆಂಗಳೂರು– ಮೈಸೂರು ದಶಪಥ ರಸ್ತೆಗೆ ಚಾಲನೆ ನೀಡುವರು. ಬಳಿಕ ಮೈಸೂರು– ಕುಶಾಲನಗರದ 4 ಪಥದ 3540 ಕೋಟಿ ವೆಚ್ಚದ ಬೃಹತ್ ಕಾಮಗಾರಿಗೆ ಚಾಲನೆ ನೀಡುವರು. ಸಮಾವೇಶದಲ್ಲಿ 2 ಲಕ್ಷ ಜನ ಸೇರುವ ನಿರೀಕ್ಷೆ ಇದೆ ಎಂದರು.

ವಿವಿಧ ಕಾಮಗಾರಿಗೆ ಚಾಲನೆ: ಮಂಡ್ಯ ಜಿಲ್ಲೆಗೆ ಮೋದಿ ಅನೇಕ ಗಿಫ್ಟ್ ಹೊತ್ತು ತರುತ್ತಿದ್ದು, ಮಂಡ್ಯಕ್ಕೆ 135 ಕೋಟಿ ವೆಚ್ಚದ ಅಮೃತ್ 1 ಯೋಜನೆಯಡಿ ಕುಡಿಯುವ ನೀರಿನ ಅಭಿವೃದ್ಧಿ ಕಾಮಗಾರಿ, ತಾಯಿ–ಮಗು ಆಸ್ಪತ್ರೆ ಕಾಮಗಾರಿಗೂ ಚಾಲನೆ ನೀಡಲಿದ್ದಾರೆ ಎಂದರು.

ಮೋದಿ ಕಾರ್ಯಕ್ರಮ ಮುಗಿದ ಬಳಿಕ ಮತ್ತೆ ಪಿಇಎಸ್ ಕಾಲೇಜಿನ ಹೆಲಿಪ್ಯಾಡ್‌ಗೆ ತೆರಳುವುದಿಲ್ಲ. ಬದಲಾಗಿ ಗೆಜ್ಜಲಗೆರೆ ಬಳಿಯೇ ಹೆಲಿಪ್ಯಾಡ್ ನಿರ್ಮಿಸಲು ಸಿದ್ಧತೆ ನಡೆಸುತ್ತಿದ್ದು, ಅಲ್ಲಿಂದ ನೇರವಾಗಿ ಮೈಸೂರು ವಿಮಾನ ನಿಲ್ದಾಣಕ್ಕೆ ತೆರಳಿ ಬಳಿಕ ಅಲ್ಲಿಂದ ಹುಬ್ಬಳ್ಳಿಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ ಎಂದರು.

ವೇದಿಕೆಗೆ 9 ಕ್ಷೇತ್ರದ ಶಾಸಕರು: ಇದು ಸರ್ಕಾರಿ ಕಾರ್ಯಕ್ರಮ ಆದ್ದರಿಂದ ಪಕ್ಷಾತೀತವಾಗಿ ಎಲ್ಲಾ ಜನಪ್ರತಿನಿಧಿಗಳಿಗೂ ಆಹ್ವಾನ ನೀಡುತ್ತಿದ್ದು, ರಸ್ತೆ ವ್ಯಾಪ್ತಿಯ ಬೆಂಗಳೂರು ಉತ್ತರ ಕ್ಷೇತ್ರದ ಸಂಸದ ಡಿ.ವಿ.ಸದಾನಂದಗೌಡ, ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ.ಸುರೇಶ್, ಮಂಡ್ಯ ಸಂಸದೆ ಸುಮಲತಾ ಹಾಗೂ ಮೈಸೂರು ಸಂಸದನಾದ ನನಗೆ ಆಹ್ವಾನವಿರುತ್ತದೆ. ಜೊತೆಗೆ ಯಶವಂತಪುರ, ರಾಜರಾಜೇಶ್ವರಿ ನಗರ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಮೇಲುಕೋಟೆ, ಶ್ರೀರಂಗಪಟ್ಟಣ, ಚಾಮುಂಡೇಶ್ವರಿ ಸೇರಿದಂತೆ 9 ಕ್ಷೇತ್ರಗಳ ಶಾಸಕರು, ಮುಖ್ಯಮಂತ್ರಿಗಳು, ಸಚಿವರಿಗೆ ಕಾರ್ಯಕ್ರಮಕ್ಕೆ ಆಹ್ವಾನವಿರುತ್ತದೆ. ವೇದಿಕೆ ಮೇಲೆ ಆಸೀನರಾಗುವವರ ಪಟ್ಟಿಯನ್ನು ಈಗಾಗಲೇ ಪ್ರಧಾನಿ ಕಾರ್ಯಾಲಯಕ್ಕೆ ಕಳುಹಿಸಿದ್ದು, ಅಂತಿಮ ಪಟ್ಟಿ ಶೀಘ್ರವೇ ನಮಗೆ ತಲುಪಲಿದೆ ಎಂದರು.

ರಸ್ತೆ ಸಂಚಾರ ಬದಲು: ಅಂದು ಪ್ರಧಾನಿ ಮೋದಿ ಮಂಡ್ಯ ನಗರಕ್ಕೆ ಆಗಮಿಸುತ್ತಿರುವುದರಿಂದ ಮಂಡ್ಯ, ಮದ್ದೂರು ಮಾರ್ಗವಾಗಿ, ಮೈಸೂರು, ಬೆಂಗಳೂರು, ತುಮಕೂರು, ಮಲೆ ಮಹದೇಶ್ವರ ಬೆಟ್ಟ ತಲುಪುವವರಿಗೆ ಮಂಡ್ಯ ಮಾರ್ಗವಾಗಿ ಸಂಚರಿಸಲು ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಅವಕಾಶ ಇಲ್ಲ. ಬೆಂಗಳೂರು ಅಥವಾ ಮೈಸೂರು ಮಾರ್ಗವಾಗಿ ಸಂಚರಿಸಲು ಕನಕಪುರ– ಹಲಗೂರು– ಮಳವಳ್ಳಿ– ಬನ್ನೂರು ರಸ್ತೆ ಅಥವಾ ನೆಲಮಂಗಲ– ಕುಣಿಗಲ್–ಬೆಳ್ಳೂರು ಕ್ರಾಸ್– ನಾಗಮಂಗಲ– ಪಾಂಡವಪುರ– ಶ್ರೀರಂಗಪಟ್ಟಣ ರಸ್ತೆ ಬಳಸಿಕೊಳ್ಳಬಹುದು. ಅದರಂತೆ ತುಮಕೂರು ತಲುಪಬೇಕಾದವರು ಸಹ ಮೈಸೂರು– ಶ್ರೀರಂಗಪಟ್ಟಣ– ಪಾಂಡವಪುರ– ನಾಗಮಂಗಲ– ಬೆಳ್ಳೂರು ಕ್ರಾಸ್– ಕುಣಿಗಲ್– ಹುಲಿಯೂರು ದುರ್ಗ ಮಾರ್ಗ ತುಮಕೂರು, ಮೈಸೂರಿಗೆ ಸಂಚರಿಸಬಹುದು. ಅದೇ ರೀತಿ ಬೆಂಗಳೂರಿನಿಂದ ಮಹದೇಶ್ವರ ಬೆಟ್ಟ ತಲುಪುವವರು ಬೆಂಗಳೂರು– ರಾಮನಗರ– ಚನ್ನಪಟ್ಟಣ– ಹಲಗೂರು– ಮಳವಳ್ಳಿ– ಕೊಳ್ಳೇಗಾಲ ಮಾರ್ಗವಾಗಿ ಬೆಟ್ಟಕ್ಕೆ ಸಂಚರಿಸಬಹುದಾಗಿದೆ ಎಂದು ವಿವರಿಸಿದರು.

ಮಾ.12ಕ್ಕೆ ಸೋನಿಯಾ, ರಾಹುಲ್ ಕರೆಸಲಿ: ಮೋದಿ ಬರುವ ದಿನವೇ ಮಾ.12ಕ್ಕೆ ಶ್ರೀರಂಗಪಟ್ಟಣಕ್ಕೆ ಪ್ರಜಾಧ್ವನಿ ಯಾತ್ರೆ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗಮಿಸುತ್ತಿದ್ದು, ಅಂದು ಮೋದಿಗೆ ಹೆಚ್ಚು ಜನ ಬರಲಿದ್ದಾರಾ ಯಾತ್ರೆಗೆ ಹೆಚ್ಚು ಜನ ಬರಲಿದ್ದಾರಾ ನೋಡೋಣ. ಬೇಕಾದರೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕರೆಸಿ ಶಕ್ತಿ ಪ್ರದರ್ಶನ ನಡೆಸಲು ನಾವು ಸಿದ್ಧರಿದ್ದೇವೆ ಎಂದರು.

ಸಿದ್ದು ಜಾಲಿ ರೈಡ್‌ಗೆ ಬರಬಹುದು: ಬೆಂಗಳೂರು– ಮೈಸೂರು ದಶಪಥ ರಸ್ತೆ ತಮ್ಮ ಕಾಲದಲ್ಲಿ ಆರಂಭವಾಗಿದ್ದು ಎಂದು ಹೇಳುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಸ್ತೆ ಕಾಮಗಾರಿ ಆರಂಭವಾದಾಗ ಪರಿಶೀಲಿಸಿ, ನ್ಯೂನತೆ ಬಗ್ಗೆ ಮಾಹಿತಿ ನೀಡಿದ್ದರೆ ಉತ್ತಮವಾಗಿರುತ್ತಿತ್ತು. ಆದರೆ ಕಾಮಗಾರಿ ಮುಗಿದು ಉದ್ಘಾಟನೆ ವೇಳೆ ಬರುತ್ತೇನೆಂದು ಹೇಳುತ್ತಿರುವುದು ನೋಡಿದರೆ ಅವರು ಜಾಲಿ ರೈಡ್‌ಗೆ ಬರುತ್ತಿರಬಹುದು ಎಂದು ಲೇವಡಿ ಮಾಡಿದರು.

ಕಾವೇರಿ ಹೆಸರಿಡಲು ಪ್ರಸ್ತಾವನೆ: ಹೆದ್ದಾರಿ ನಾಮಕರಣ ಸಂಬಂಧ ಯಾವುದೇ ನಿರ್ಧಾರವಾಗಿಲ್ಲ. ಈ ವಿಚಾರದಲ್ಲಿ ಕೆಲವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಇಡೀ ದೇಶದಲ್ಲಿ ಹೆದ್ದಾರಿಗೆ ವ್ಯಕ್ತಿ ಹೆಸರಿಟ್ಟ ಉದಾಹರಣೆಗಳಿಲ್ಲ. ಪವಿತ್ರ ನದಿಗಳ ಹೆಸರಿಟ್ಟಿದ್ದಾರೆ. ಮಂಡ್ಯ, ಮೈಸೂರು, ಬೆಂಗಳೂರು ಸುಭಿಕ್ಷವಾಗಲು ಕಾವೇರಿ ನದಿ ಕಾರಣ. ಹೀಗಾಗಿ ಕಾವೇರಿ ಎಕ್ಸ್‌ಪ್ರೆಸ್ ಹೈವೆ ಎಂದು ಹೆಸರಿಡಲು ಸೂಚಿಸಿದ್ದೇನೆ. ಅದೂ ಅಂತಿಮಗೊಂಡಿಲ್ಲ ಎಂದರು.

ಅದೇ ರೀತಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮಾಡಬೇಕೆನ್ನುವುದು ನಮ್ಮ ಕನಸಾಗಿದ್ದು, ಈ ನಿಟ್ಟಿನಲ್ಲಿ ಮೈಸೂರು, ಮಂಡ್ಯ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಲು ಚಿಂತನೆ ನಡೆದಿದೆ. ಜೊತೆಗೆ ಮೈಸೂರು ರೈಲ್ವೆ ನಿಲ್ದಾಣಕ್ಕೆ ಜಯಚಾಮರಾಜೇಂದ್ರ ಒಡೆಯರ್ ಹೆಸರಿಸಲು ಸಿದ್ಧತೆ ನಡೆಯುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಚಿವ ನಾರಾಯಣಗೌಡ, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ವಕ್ತಾರ ಮಹೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಶಿವಣ್ಣ, ಡಾ.ಇಂದ್ರೇಶ್, ಸಚ್ಚಿದಾನಂದ, ವೈ.ವಿ.ರವಿಶಂಕರ್, ಮೂಡಾ ಅಧ್ಯಕ್ಷ ಶ್ರೀನಿವಾಸ್ ಉಪಸ್ಥಿತರಿದ್ದರು.

ಸಹಕಾರಿ ಫಲಾನುಭವಿಗಳು ಭಾಗಿ: ಎಸ್‌ಟಿಎಸ್

ಮಂಡ್ಯ: ಮಂಡ್ಯದ ಗೆಜ್ಜಲಗೆರೆಯಲ್ಲಿ ಮಾ.12ರಂದು ನಡೆಯುವ ಪ್ರಧಾನಿ ಮೋದಿ ನೇತೃತ್ವದ ಸಮಾರಂಭಕ್ಕೆ ಜಿಲ್ಲೆಯ 7 ತಾಲೂಕಿನಿಂದ ಸಹಕಾರಿ ಕ್ಷೇತ್ರದ ಫಲಾನುಭವಿಗಳು ಭಾಗಿಯಾಗಲಿದ್ದಾರೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಗೆಜ್ಜಲಗೆರೆ ಸಮಾವೇಶದ ವೇದಿಕೆ ಬಳಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು– ಮೈಸೂರು ದಶಪಥ ರಸ್ತೆ ಉದ್ಘಾಟನೆ ಸಮಾರಂಭಕ್ಕೆ 2 ಲಕ್ಷ ಜನ ಆಗಮಿಸಲಿದ್ದು, ಆ ಪೈಕಿ ಜಿಲ್ಲೆಯ 40 ಸಾವಿರ ಹಾಲು ಉತ್ಪಾದಕ ಫಲಾನುಭವಿಗಳು ಆಗಮಿಸಲಿದ್ದಾರೆ. ಜಿಲ್ಲೆಯ ಪ್ರತಿ ತಾಲೂಕಿನಿಂದ ಫಲಾನುಭವಿಗಳು ಬರಲು ವ್ಯವಸ್ಥೆ ಮಾಡಿದ್ದೇವೆ ಎಂದರು.

ವಿಜೃಂಭಣೆಯ ಕಾರ್ಕಹಳ್ಳಿ ಬಸವೇಶ್ವರ ರಥೋತ್ಸವ



ಭಾರತೀನಗರ, ಮಾ.9– ಇಲ್ಲಿಗೆ ಸಮೀಪದ ಕಾರ್ಕಹಳ್ಳಿ ಶ್ರೀಬಸವೇಶ್ವರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ತಹಸೀಲ್ದಾರ್ ಟಿ.ಎನ್.ನರಸಿಂಹಮೂರ್ತಿ ಶ್ರೀಬಸವೇಶ್ವರ ದೇವರಿಗೆ ಪೂಜೆ ಸಲ್ಲಿಸಿ ರಥ ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಭಕ್ತಿಭಾವ ಪ್ರದರ್ಶಿಸಿದರು. ರಥೋತ್ಸವಕ್ಕೆ ಹಲವು ಸಾಂಸ್ಕೃತಿಕ ಕಲಾ ತಂಡಗಳು ಮೆರಗು ನೀಡಿದವು. ಯಾವುದೇ ಅಹಿತಕರ ಘಟನೆ ನಡೆಯದಂತೆ ಕೆ.ಎಂ.ದೊಡ್ಡಿ ಪೊಲೀಸರು ಬಿಗಿಭದ್ರತೆ ಕೈಗೊಂಡಿದ್ದರು.

ಮುಂಬರುವ ಚುನಾವಣೆಯಲ್ಲಿ ಮತ್ತೊಂದು ಅವಕಾಶ ನೀಡಿ

ಸಚಿವ ಕೆ.ಸಿ.ನಾರಾಯಣಗೌಡ ಮನವಿ

ಕೆ.ಆರ್.ಪೇಟೆ, ಮಾ.9– ಮೂರು ಬಾರಿ ಶಾಸಕನಾಗಿ, ಒಮ್ಮೆ ಸಚಿವನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲು ಮುಂಬರುವ ಚುನಾವಣೆಯಲ್ಲಿ ಮತ್ತೊಂದು ಅವಕಾಶ ನೀಡುವಂತೆ ಸಚಿವ ಕೆ.ಸಿ.ನಾರಾಯಣಗೌಡ ಮನವಿ ಮಾಡಿದರು.

ತಾಲೂಕಿನ ಗವಿಮಠದ ಕಾಪನಹಳ್ಳಿ ಸಮೀಪದ ಮಡಿಲಮ್ಮನವರ ದೇವಾಲಯದ ಆವರಣದಲ್ಲಿ ಸಚಿವ ನಾರಾಯಣಗೌಡ ಅಭಿಮಾನಿ ಬಳಗದಿಂದ ಏರ್ಪಡಿಸಿದ್ದ ಔತಣ ಕೂಟದಲ್ಲಿ ಮಾತನಾಡಿದ ಅವರು, ನಾನು ತಾಲೂಕಿನಲ್ಲಿ ಕಳೆದ 15 ವರ್ಷಗಳಿಂದ ನಮ್ಮ ತಂದೆ–ತಾಯಿ ಹೆಸರಲ್ಲಿ ಟ್ರಸ್ಟ್ ಸ್ಥಾಪಿಸಿ ಸಮಾಜ ಸೇವೆ ಮಾಡುತ್ತಾ ಬಂದಿದ್ದು, ಈ ವೇಳೆ ರಾಜಕಾರಣಿಗಳ ಟೀಕೆಗಳನ್ನು ಸಹಿಸದೇ ರಾಜಕೀಯಕ್ಕೆ ಕ್ಷೇತ್ರ ಪ್ರವೇಶಿಸಿ. ನಿಮ್ಮ ಆಶೀರ್ವಾದದಿಂದ ಈ ಮಟ್ಟಕ್ಕೆ ಬೆಳೆದಿದ್ದೇನೆ. ತಾಲೂಕಿನ ಜನತೆಯ ಋಣ ತೀರಿಸಲು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದ ಅವರು, ನಾನು 2 ಬಾರಿ ಜೆಡಿಎಸ್‌ನಿಂದ ಶಾಸಕನಾಗಿ



ಆಯ್ಕೆಯಾದರೂ ಕ್ಷೇತ್ರ ಅಭಿವೃದ್ಧಿ ಪಡಿಸಲು ಸಾಧ್ಯವಾಗಲಿಲ್ಲ. ಆದರೆ ಮಾಜಿ ಸಿಎಂ ಯಡಿಯೂರಪ್ಪನವರ ಆಶೀರ್ವಾದದಿಂದ ಬಿಜೆಪಿಗೆ ಸೇರಿ ಸಚಿವನಾದ ಬಳಿಕ ಕ್ಷೇತ್ರಕ್ಕೆ 1800 ಕೋಟಿಗೂ ಅಧಿಕ ಅನುದಾನ ತಂದು ಅಭಿವೃದ್ಧಿ ಪಡಿಸಿದ್ದೇನೆ. ರಾಜಕೀಯ ಶಕ್ತಿ ಇರಲಿ, ಇಲ್ಲದಿರಲಿ ನನ್ನ ಜೀವವಿರುವ ತನಕ ನಿಮ್ಮ ಸೇವೆಗೆ ಸಿದ್ಧ ಎಂದರು.

ಈ ವೇಳೆ ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ತಾಪಂ ಮಾಜಿ ಅಧ್ಯಕ್ಷ ಜವರಾಯಿಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕುಮಾರ್, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಬಿಜೆಪಿ ಉಪಾಧ್ಯಕ್ಷ ಪುಟ್ಟಣ್ಣ, ಎಸ್.ಸಿ. ಮೋರ್ಚಾ ಅಧ್ಯಕ್ಷ ರವಿಶಿವಕುಮಾರ್, ಸೋಮನಹಳ್ಳಿ ಗ್ರಾಪಂ ಅಧ್ಯಕ್ಷ ಪಾಪಣ್ಣ, ತಾ.ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮೇಗೌಡ, ಜವರೇಗೌಡ, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ಮುಖಂಡರಾದ ಪ್ರವೀಣ್, ಮಂಜುನಾಥ್, ಪಾಂಡು, ನಾರಾಯಣ್ ಸೇರಿದಂತೆ ಇತರರಿದ್ದರು.

ಇಂದು ನಗರಸಭೆ ಸಾಮಾನ್ಯ ಸಭೆ

ಮಂಡ್ಯ, ಮಾ.9– ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀಧರಣಪ್ಪ ಸಭಾಂಗಣದಲ್ಲಿ ಮಾ.10 ರಂದು ಬೆಳಗ್ಗೆ 11 ಗಂಟೆಗೆ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರಸಭೆ ಸಂಬಂಧಪಟ್ಟ ವಿಷಯಗಳ ಹಾಗೂ 2023–24ನೇ ಸಾಲಿನ ಆಯವ್ಯಯ ಮಂಡನೆ ಸಭೆ ಕರೆಯಲಾಗಿದೆ. ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭಾ ಸದಸ್ಯರು ಮತ್ತು ನಾಮನಿರ್ದೇಶಿತ ಸದಸ್ಯರು ಸಭೆಗೆ ಸಕಾಲಕ್ಕೆ ಆಗಮಿಸುವಂತೆ ನಗರಸಭೆ ಪೌರಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾ.14, ನೇರ ಸಂದರ್ಶನ

ಮಂಡ್ಯ, ಮಾ.9– ಎಂಎನ್‌ಸಿ ಕಂಪನಿ ಕಾರು ಉತ್ಪಾದನಾ ಘಟಕದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಐಟಿಐ ಉತ್ತೀರ್ಣ/ ಅನುತ್ತೀರ್ಣವಾದ ಅಭ್ಯರ್ಥಿಗಳಿಗೆ ಮಾ.14 ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಪ್ರೆಂಟಿಸ್ ನೇಮಕಾತಿಗಾಗಿ ನೇರ ಸಂದರ್ಶನ ಆಯೋಜಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂ: 8217803781, 08232–295124 ಸಂಪರ್ಕಿಸಬಹುದಾಗಿದೆ.

ವೈರಮುಡಿಗೌಡ ನಿಧನ



ಶ್ರೀರಂಗಪಟ್ಟಣ, ಮಾ.9– ತಾಲೂಕಿನ ಹುಲಿಕೆರೆ ಗ್ರಾಪಂ ಮಾಜಿ ಅಧ್ಯಕ್ಷ ವೈರಮುಡಿಗೌಡ(75) ಗುರುವಾರ ನಿಧನರಾದರು. ಮೃತರು ಪುತ್ರ ಕುಮಾರ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವೇಗೌಡರ ಆಸೆ ಪೂರೈಸಲು ಸಾಹಸಕ್ಕೆ ಕೈ ಹಾಕಿದ್ದೇನೆ: ಹೆಚ್‌ಡಿಕೆ ಶಪಥ



ಹಾಸನ: ಹೆಚ್.ಡಿ ದೇವೇಗೌಡರ ಆಸೆ ಪೂರೈಸಲು ನಾನು ಈ ಬಾರಿ ಸಾಹಸಕ್ಕೆ ಕೈಹಾಕಿದ್ದೇನೆ. ಹಾಸನ ಜಿಲ್ಲೆಯಲ್ಲಿ 7ಕ್ಕೆ ಏಳು ಸ್ಥಾನವನ್ನೂ ಗೆದ್ದು ಅವರ ಆಸೆ ಪೂರೈಸುತ್ತೇನೆ ಎಂದು ಮಾಜಿ ಸಿಎಂ ಹೆಚ್.ಡಿ ಕುಮಾರಸ್ವಾಮಿ ಶಪಥ ಮಾಡಿದ್ದಾರೆ. ಹಾಸನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೇವೇಗೌಡರ 60 ವರ್ಷದ ರಾಜಕೀಯ ಜೀವನದಲ್ಲಿ ಈ ನಾಡಿಗೆ ಏನೇನೊ ಮಾಡಬೇಕೆಂಬ ಕನಸು ಕಂಡಿದ್ದರು. ಆದರೆ ಅವರಿಗೆ ಸಿಕ್ಕಿದ ಅವಧಿ ಕಡಿಮೆ. 11 ತಿಂಗಳು ಪ್ರಧಾನಿ, 2 ವರ್ಷ ರಾಜ್ಯದಲ್ಲಿ ಸಿಎಂ, 3 ವರ್ಷ ಸಚಿವರಾಗಿದ್ದರು. ಅವರು ಅಂದುಕೊಂಡಿದ್ದನ್ನು ಮಾಡೋಕೆ ಆಗಲಿಲ್ಲ. ಅವರ ಆಸೆ ಪೂರೈಸಲು ನಾನು ಈಗ ಸಾಹಸಕ್ಕೆ ಕೈ ಹಾಕಿದ್ದೇನೆ ಎಂದು ಹೇಳಿದ್ದಾರೆ. ನಿಮ್ಮ ಕಣ್ಣೆದುರೇ ನಿಮ್ಮ ಆಸೆಯಂತೆ ಜನರ ಬದುಕು ಕಟ್ಟೋ ಸರ್ಕಾರ ಬರುತ್ತೆ. ಅದನ್ನು ನೋಡಲು ನೀವು ಇರಬೇಕು ಎಂದು ತಂದೆಯಿಂದ ವಚನ ಪಡೆದುಕೊಂಡಿದ್ದೇನೆ. ದೇವರಿಗೂ ಇದೇ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಕಂಡ ಕನಸನ್ನು ನನ್ನ ಮಕ್ಕಳು ನನಸು ಮಾಡಿದ್ದಾರೆ ಎಂದು ಅವರ ಮನಃ ತೃಪ್ತಿಯಾಗಬೇಕು ಎಂದು ತಿಳಿಸಿದ್ದಾರೆ. ನಮ್ಮ ಭದ್ರಕೋಟೆಯನ್ನು ಛಿದ್ರ ಮಾಡುತ್ತೇವೆ ಎಂದು ಕೆಲವರು ಹೊರಟಿದ್ದಾರೆ. ದೇವೇಗೌಡರು ಬೆಳೆಸಿರುವ ಲಕ್ಷಾಂತರ ಕಾರ್ಯಕರ್ತರ ಶಕ್ತಿ ಇರೋವರೆಗೂ ಈ ಪಕ್ಷಕ್ಕೆ ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದ್ದಾರೆ. ಹಣ ಇದೆ ಅಂತಾ ಪಂಚರತ್ನ ಯಾತ್ರೆ ಮಾಡ್ತಿದ್ದಾರೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದ ಹೆಚ್‌ಡಿಕೆ, 40 ಸೀಟ್ ಒಬ್ಬನೇ ಏಕಾಂಗಿಯಾಗಿ ಗೆದ್ದಿರುವುದು ಕಡಿಮೆಯೇ. ಅವರಿದ್ದಾಗ ಎಷ್ಟು ಜನ ನಾಯಕರಿದ್ದರು. 58 ಸೀಟ್ ಗೆಲ್ಲಬೇಕಾದರೆ ಯಾರ್ಯಾರ ಕೊಡುಗೆ ಎಷ್ಟು. ಅದೆಲ್ಲಾ ಹೇಳಬೇಕಲ್ವಾ ಎಂದು ಸವಾಲು ಹಾಕಿದ್ದಾರೆ.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ: ಎಫ್‌ಐಆರ್ ದಾಖಲಿಸಲು ಅಧಿಕಾರಿಗಳಿಗೆ ತರಬೇತಿ ನೀಡಿ



ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ದಾಖಲಿಸುವ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚುನಾವಣಾ ವಿಚಕ್ಷಣ ದಳ(ಫ್ಲೇಯಿಂಗ್ ಸ್ಕ್ವಾಡ್)ಕ್ಕೆ ಅಗತ್ಯ ತರಬೇತಿ ನೀಡುವಂತೆ ಮುಖ್ಯ ಚುನಾವಣಾ ಆಯೋಗ, ರಾಜ್ಯ ಚುನಾವಣಾ ಆಯೋಗ, ಗೃಹ ಇಲಾಖೆ ಮತ್ತು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ತನ್ನ ವಿರುದ್ಧ ದಾಖಲಾಗಿದ್ದ ಪ್ರಕರಣ ರದ್ದು ಕೋರಿ ಎ.ಮಂಜು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿರುವ ಹೈಕೋರ್ಟ್ ನ್ಯಾಯಪೀಠ, ಈ ನಿರ್ದೇಶನ ನೀಡಿದೆ.

ಚುನಾವಣಾ ಅಕ್ರಮಗಳ ಕುರಿತು ವಿಚಕ್ಷಣ ದಳ ಪೊಲೀಸರಿಗೆ ನೀಡುವ ದೂರಿಗೆ ಸಂಬಂಧಿಸಿದಂತೆ ಬಹುತೇಕ ಪ್ರಕರಣಗಳಲ್ಲಿ ಚುನಾವಣೆ ನಡೆಯುವ ವೇಳೆ ಔಪಚಾರಿಕವಾಗಿರುತ್ತವೆ. ಅಂತಿಮವಾಗಿ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ ವಿರುದ್ಧ ಪೊಲೀಸರು ಬಿ. ರಿಪೋರ್ಟ್ ಸಲ್ಲಿಸುತ್ತಾರೆ. ಸೋತ ಅಭ್ಯರ್ಥಿಗಳ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಹೀಗಾಗಿ ಸೂಕ್ತ ತರಬೇತಿ ನೀಡಬೇಕು ಎಂದು ಸೂಚನೆ ನೀಡಿದೆ.

ಅಸಂಜ್ಞೆಯ ಕೇಸ್‌ಗಳಲ್ಲಿ ಮ್ಯಾಜಿಸ್ಟ್ರೇಟ್ ಅನುಮತಿ ಇಲ್ಲದೆ ಎಫ್‌ಐಆರ್ ದಾಖಲಿಸುವಂತಿಲ್ಲ ಎಂಬುದು ಪೊಲೀಸರಿಗೆ ಗೊತ್ತಿದ್ದರೂ ಈ ರೀತಿಯ ಘಟನೆಗಳು ನಡೆಯುತ್ತಿವೆ. ಐಪಿಸಿ 155ರ ಪ್ರಕಾರ ಅಸಂಜ್ಞೆಯ ಪ್ರಕರಣಗಳಲ್ಲಿ ಮ್ಯಾಜಿಸ್ಟ್ರೇಟ್‌ನಿಂದ ಅನುಮತಿ ಪಡೆದ ಪ್ರಕರಣಗಳ ತನಿಖೆ, ವಿಚಾರಣೆಯ ಕಾರ್ಯವಿಧಾನದಲ್ಲಿ ದೊಡ್ಡ ಮಟ್ಟದ ಉಲ್ಲಂಘನೆಗಳು ನಡೆಯುತ್ತಿರುತ್ತವೆ ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ಸಂಜ್ಞೇಯೇತರ ಅಪರಾಧ ಪತ್ತೆಯಾದಲ್ಲಿ ಮಾಹಿತಿದಾರರು ಸಿಆರ್‌ಪಿಸಿ ಸೆಕ್ಷನ್ 152(2)ರಲ್ಲಿ ಮ್ಯಾಜಿಸ್ಟ್ರೇಟ್‌ರನ್ನು ಸಂಪರ್ಕಿಸಿ ಅನುಮತಿ ಪಡೆದುಕೊಳ್ಳಬಹುದು. ಇದಕ್ಕಾಗಿ ಮ್ಯಾಜಿಸ್ಟ್ರೇಟ್ 155(1) ಮನವಿ ಸಲ್ಲಿಸಿ ಅನುಮತಿ ಪಡೆದುಕೊಳ್ಳಬೇಕು. ಬಳಿಕ ಮ್ಯಾಜಿಸ್ಟ್ರೇಟ್ ವಿವೇಚನೆ ಬಳಸಿ ಅನುಮತಿ ಕೊಡಬೇಕು. ಆ ನಂತರ ಎಫ್‌ಐಆರ್ ದಾಖಲಿಸಬೇಕು. ಐಪಿಸಿ ಸೆಕ್ಷನ್ 188 ಸಂಜ್ಞೆಯ ಅಪರಾಧ ಆದರೂ ದೂರುದಾರರು (ವಿಚಕ್ಷಣಾಧಿಕಾರಿಗಳು) ಸಿಆರ್‌ಪಿಸಿ 154(1)ರ ಅಡಿಯಲ್ಲಿ ಪೊಲೀಸರಿಗೆ ದೂರು ನೀಡುವಂತಿಲ್ಲ. ಆದರೆ, ಪಂಚನಾಮೆ ಸಿದ್ಧತೆ ಪಡೆಸಿ ದೂರುದಾರರು ಸಾಕ್ಷ್ಯಗಳ ಸಮ್ಮುಖದಲ್ಲಿ ದಾಖಲೆಗಳನ್ನು ವಶಪಡಿಸಿಕೊಳ್ಳ ಬಹುದು. ಇದರ ಆಧಾರದ ಮೇಲೆ ಚುನಾವಣಾ ಆಯೋಗ ಅನುಮತಿ ಪಡೆದು ಸಿಆರ್‌ಪಿಸಿ 200(2)(ಡಿ) ಅಡಿ ಮ್ಯಾಜಿಸ್ಟ್ರೇಟ್ ಮುಂದೆ ದೂರು ದಾಖಲಿಸಬೇಕು ಎಂದು ನಿರ್ದೇಶನ ನೀಡಿದೆ.

ಲೋಕಾಯುಕ್ತರಿಂದ ಮಾಡಾಳ್ ವಿರೂಪಾಕ್ಷಪ್ಪ ಸುದೀರ್ಘ ವಿಚಾರಣೆ

● ಹಲವು ಗಂಟೆಗಳ ಕಾಲ ವಿಚಾರಣೆ ● ಎಲ್ಲದಕ್ಕೂ ನಂಗೊತ್ತಿಲ್ಲ ಸಿದ್ಧ ಉತ್ತರ!?

ಬೆಂಗಳೂರು, ಮಾ.9–ಲಂಚ ಪ್ರಕರಣದ ಪ್ರಮುಖ ಆರೋಪಿ, ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಗುರುವಾರ ಸಂಜೆ ಲೋಕಾಯುಕ್ತ ಕಚೇರಿಗೆ ಹಾಜರಾಗಿ ಸುದೀರ್ಘ ವಿಚಾರಣೆ ಎದುರಿಸಿದರು.

ವಕೀಲರು, ಪೊಲೀಸರೊಂದಿಗೆ ಕಚೇರಿಗೆ ಹಾಜರಾದ ಮಾಡಾಳ್‌ರನ್ನು ಲೋಕಾಯುಕ್ತ ತನಿಖಾಧಿಕಾರಿ ಆಂಥೋನಿ ಜಾನ್ ನೇತೃತ್ವದ ತಂಡ, ಅಲ್ಲಿನ 3ನೇ ಮಹಡಿಯಲ್ಲಿ ರಾತ್ರಿ 9.30ರವರೆಗೂ ವಿಚಾರಣೆ ನಡೆಸಿತು. ರಾಜ್ಯ ಸಾಬೂನು ಮತ್ತು ಮಾರ್ಜಕಗಳ ನಿಗಮದ ಟೆಂಡರ್ ನೀಡಲು ಲಂಚಕ್ಕೆ ಬೇಡಿಕೆ, ಪುತ್ರ ಪ್ರಶಾಂತ್ ಮೂಲಕ ಲಂಚ ಸ್ವೀಕರಿಸಿದ ಬಗ್ಗೆ ತನಿಖಾಧಿಕಾರಿಗಳು ಪ್ರಶ್ನಿಸಿದಾಗ 'ನನಗೇನೂ ಗೊತ್ತಿಲ್ಲ, ನಾನು ತಪ್ಪು ಮಾಡಿಲ್ಲ' ಎಂದು ಮಾಡಾಳ್ ವಾದಿಸಿದ್ದಾರೆ ಎಂದು ಹೇಳಲಾಗಿದೆ.

ಸತತ ನಾಲ್ಕು ಗಂಟೆಗಳ ವಿಚಾರಣೆ ಬಳಿಕವೂ ಮಾಡಾಳ್, 'ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಸಂಜಯನಗರದ ಮನೆಯಲ್ಲಿ ಜಪ್ತಿ ಮಾಡಿರುವ ಹಣಕ್ಕೆ ದಾಖಲೆಗಳನ್ನು ಒದಗಿಸುತ್ತೇನೆ. ಅದಕ್ಕೆ ಕಾಲಾವಕಾಶ ಬೇಕಿದೆ' ಎಂದು ತಿಳಿಸಿದ್ದಾರೆ. ವಿಚಾರಣೆ ವೇಳೆ ಪ್ರಾಥಮಿಕ ಮಾಹಿತಿ ಕಲೆ ಹಾಕಿರುವ ತನಿಖಾಧಿಕಾರಿಗಳು ಶುಕ್ರವಾರವೂ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಕಳುಹಿಸಿದ್ದಾಗಿ ಮೂಲಗಳು ತಿಳಿಸಿವೆ.



ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿದೆ. ಯಾವ ಸಿಬ್ಬಂದಿಗೂ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಲೋಕಾಯುಕ್ತ ಪೊಲೀಸರಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ತನಿಖಾ ಹಂತದಲ್ಲಿ ಯಾವುದನ್ನು ಪ್ರಸ್ತಾಪಿಸಲ್ಲ. ಸದ್ಯ ಲೋಕಾಯುಕ್ತ ಪೊಲೀಸರು ಮತ್ತೆ ಬರಲು ಹೇಳಿಲ್ಲ. ಮತ್ತೆ ಕರೆದಾಗ ಖಂಡಿತ ವಿಚಾರಣೆಗೆ ಹಾಜರಾಗುತ್ತೇನೆ. ಮಾಧ್ಯಮಗಳು ಪ್ರಶ್ನಿಸಿದ್ದರಿಂದ ಒತ್ತಡದಲ್ಲಿ ಮಾತನಾಡಿದ್ದೇನೆ ಎಂದು ಮಾಡಾಳ್ ಪ್ರತಿಕ್ರಿಯಿಸಿದ್ದಾರೆ.

ರಾಜ್ಯ ಸಾಬೂನು ಮತ್ತು ಮಾರ್ಜಕಗಳ ನಿಗಮದಲ್ಲಿ ಭಾರೀ ಅವ್ಯವಹಾರ ನಡೆದಿದೆ ಎಂಬ ಆರೋಪಗಳಿವೆ. ಕಳೆದ ವಾರ ಬೆಂಗಳೂರು ಜಲ ಮಂಡಳಿ ಮತ್ತು ಒಳಚರಂಡಿ ಮುಖ್ಯ ಲೆಕ್ಕಾಧಿಕಾರಿ ಮಾಡಾಳ್ ಪ್ರಶಾಂತ್ ಅವರ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಆ ಸಂದರ್ಭದಲ್ಲಿ ಅವರು 40 ಲಕ್ಷ ರೂ.ಗೂ ಹೆಚ್ಚು ಮೊತ್ತದ ಲಂಚ ಪಡೆಯುವುದು ಬಯಲಾಗಿತ್ತು. ನಂತರದಲ್ಲಿ ಶಾಸಕರ ಮನೆ ಮೇಲೂ ದಾಳಿ ನಡೆಸಿದಾಗ ಕೋಟ್ಯಂತರ ರೂ. ನಗದು, ಚಿನ್ನಾಭರಣ ದೊರೆತಿತ್ತು. ಈ ಮಧ್ಯೆ ಬಂಧನ ಭೀತಿಯಿಂದ ನಾಪತ್ತೆಯಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ, ಮಧ್ಯಂತರ ಜಾಮೀನು ಸಿಕ್ಕ ಬಳಿಕ ಪ್ರತ್ಯಕ್ಷರಾಗಿದ್ದರು.

ಪ್ರತಾಪ್‌ಸಿಂಹ ಏನು ಸಚಿವರಾ; ಕೇವಲ ಸಂಸದ ಅಷ್ಟೇ...!



ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ಮಾರ್ಚ್ 12 ರಂದು ಉದ್ಘಾಟನೆಯಾಗಲಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಕ್ರೆಡಿಟ್ ವಾರ್ ಮುಂದುವರಿದಿದ್ದು, ಈ ಸಂಬಂಧ ಬಿಜೆಪಿ ಸಂಸದ ಪ್ರತಾಪ್ ಸಿಂಹ ಅವರ ವಿರುದ್ಧ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಗುರುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಪ್ರತಾಪ್ ಸಿಂಹ ಏನು ಸಚಿವರಾ, ಅವರು ಕೇವಲ ಒಬ್ಬ ಸಂಸದ ಅಷ್ಟೇ. ಈ ಹೆದ್ದಾರಿ ಪೂರ್ತಿ ಪ್ರತಾಪ್ ಸಿಂಹ ಕ್ಷೇತ್ರದಲ್ಲಿ ಬರುತ್ತಾ ಕಳಸವಾಡಿವರೆಗೆ ಮಾತ್ರ ಪ್ರತಾಪ್ ಸಿಂಹ ಕ್ಷೇತ್ರ ಬರುತ್ತೆ ಅಷ್ಟೇ. ಮಂಡ್ಯ, ರಾಮನಗರ ಜಿಲ್ಲೆಯಲ್ಲೂ ಈ ಹೆದ್ದಾರಿ ಹಾದುಹೋಗುತ್ತದೆ ಎಂದರು. ನಾನು ಬೆಂಗಳೂರು–ಮೈಸೂರು ಹೆದ್ದಾರಿ ವೀಕ್ಷಿಸಲು ಹೋಗುತ್ತಿಲ್ಲ. ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಅವರು ಹೆದ್ದಾರಿ ವೀಕ್ಷಣೆ ಮಾಡುತ್ತಾರೆ ಎಂದು ಮಾಜಿ ಸಿಎಂ ತಿಳಿಸಿದ್ದಾರೆ. ಪ್ರಧಾನಿ ಮೋದಿ ಅವರು ಮಾ.12 ರಂದು ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯನ್ನು ಉದ್ಘಾಟಿಸುವ ಮೊದಲು ಇಂದು ಸಿದ್ದರಾಮಯ್ಯ ಹೆದ್ದಾರಿ ವೀಕ್ಷಣೆ ಮಾಡಲು ಮುಂದಾಗಿದ್ದರು. ಆದರೆ ಎಐಸಿಸಿಯ ಸ್ಕ್ರೀನಿಂಗ್ ಕಮಿಟಿ ಗುರುವಾರ ಮುಂದುವರಿಯಲಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಹೆದ್ದಾರಿ ವೀಕ್ಷಣೆಯ ಪ್ರವಾಸ ರದ್ದಾಗಿದೆ.

ಇಂದು ಕಾಂಗ್ರೆಸ್ ನಿಯೋಗದಿಂದ ಹೆದ್ದಾರಿ ಪರಿಶೀಲನೆ

ಮೈಸೂರು, ಮಾ.9– ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ನೇತೃತ್ವದ ಕಾಂಗ್ರೆಸ್ ನಿಯೋಗ ನಾಳೆ(ಮಾ.10) ಬೆಳಗ್ಗೆ 10 ಗಂಟೆಗೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಪರಿಶೀಲನೆ ನಡೆಸಲಿದೆ. ಸಿದ್ದಲಿಂಗಪುರದಿಂದ ಕೆಲ ದೂರ ಕ್ರಮಿಸಿ, ದಶಪಥ ಹೆದ್ದಾರಿ ಪರಿಶೀಲನೆ ನಡೆಸಲಿದ್ದಾರೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ತಿಳಿಸಿದ್ದಾರೆ.

ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯಕ್ಕೆ ಸಾಕ್ಷಿಯಾದ ಪ್ರಧಾನಿ ಮೋದಿ, ಆಸೀಸ್ ಪ್ರಧಾನಿ ಆಂಥೋನಿ ಆಲ್ಬನೀಸ್

4ನೇ ಟೆಸ್ಟ್: ಮೊದಲ ದಿನ ಆಸೀಸ್ ಮೇಲುಗೈ



ಅಹಮದಾಬಾದ್, ಮಾ.9– ಆರಂಭಿಕ ಆಟಗಾರ ಉಸ್ಮಾನ್ ಖವಾಜ ಅವರ ಶತಕದ ನೆರವಿನಿಂದ ಆಸ್ಟ್ರೇಲಿಯಾ ಬಾರ್ಡರ್–ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದ ಮೊದಲ ದಿನ ಮೇಲುಗೈ ಸಾಧಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾಕ್ಕೆ ಆರಂಭಿಕರಾದ ಟ್ರಾವಿಸ್ ಹೆಡ್ ಹಾಗೂ ಉಸ್ಮಾನ್ ಖವಾಜ 61 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಟ್ರಾವಿಸ್ ಹೆಡ್ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಮಾರ್ನಸ್ ಲಾಬುಶೇನ್ ಕೇವಲ 3 ರನ್ ಗಳಿಸಿ ಹಿಂತಿರುಗಿದರು. ಈ ವೇಳೆ ಖವಾಜ ಜೊತೆಯಾದ ಸ್ಟೀವನ್ ಸ್ಮಿತ್ 79 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಆದರೆ 38 ರನ್ ಗಳಿಸಿ ಸ್ಮಿತ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಪೀಟರ್ ಹ್ಯಾಂಡ್ಸ್‌ಕಾಂಬ್ ಸಹ 17 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಮತ್ತೊಂದೆಡೆ ತಾಳ್ಮೆಯ ಆಟವಾಡಿ ಭಾರತೀಯ ಬೌಲರ್‌ಗಳನ್ನು ಕಾಡಿದ ಖವಾಜ 251 ಎಸೆತಗಳಲ್ಲಿ 15 ಬೌಂಡರಿ ಒಳಗೊಂಡ ಭರ್ಜರಿ ಶತಕ ಸಿಡಿಸಿ ಸಂಭ್ರಮಿಸಿದರು. ಇವರಿಗೆ ಉತ್ತಮ ಸಾಥ್ ನೀಡಿದ ಕ್ಯಾಮರೂನ್ ಗ್ರೀನ್ 49ರನ್ ಗಳಿಸಿದ್ದು, 104 ರನ್ ಗಳಿಸಿರುವ ಖವಾಜ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಮೊಹಮ್ಮದ್ ಶಮಿ 2, ಆರ್.ಅಶ್ವಿನ್ ಹಾಗೂ ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಮೊಟೆರಾದಲ್ಲಿ ಪ್ರಧಾನಿ ಮೋದಿ, ಆಂಥೋನಿ ಅಲ್ಬನೀಸ್: ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಬಾರ್ಡರ್–ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಅಂತಿಮ ಪಂದ್ಯದ ನಿಮಿತ್ತ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾ ಪ್ರಧಾನಮಂತ್ರಿ ಆಂಥೋನಿ ಅಲ್ಬನೀಸ್ ಇಲ್ಲಿನ ಮೊಟೇರಾ ಅಂಗಣಕ್ಕೆ ಆಗಮಿಸಿ ಎರಡೂ ತಂಡಗಳಿಗೆ ಶುಭ ಹಾರೈಸಿದರು.

ಪಂದ್ಯದ ಆರಂಭಕ್ಕೂ ಮುನ್ನ ಪ್ರಧಾನಿ ಮೋದಿ, ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್‌ರನ್ನು ಸ್ವಾಗತಿಸಿದರು. ನಂತರ ರಥದ ಮೂಲಕ ಮೈದಾನವನ್ನು ಒಂದು ಸುತ್ತು ಹಾಕಿದರು. ಬಳಿಕ ಇಬ್ಬರೂ ಉಭಯ ತಂಡಗಳ ಆಟಗಾರರಿಗೆ ಕೈ ಕುಲುಕಿ ಶುಭ ಹಾರೈಸಿದರು. ಎರಡೂ ರಾಷ್ಟ್ರಗಳ ರಾಷ್ಟ್ರಗೀತೆ ಹಾಡುವ ವೇಳೆ ಆಯಾ ತಂಡಗಳ ಜೊತೆ ಪ್ರಧಾನ ಮಂತ್ರಿಗಳು ನಿಂತು ದನಿಗೂಡಿಸಿ ದರು. ನಂತರ ನಾಲ್ಕನೇ ಟೆಸ್ಟ್ ಪಂದ್ಯ ಆರಂಭಿಸಲಾಯಿತು.

ಪ್ರಧಾನಿ ಮೋದಿ ಹಾಗೂ ಆಂಥೋನಿ ಅವರು ಗ್ಯಾಲರಿ ಯಲ್ಲಿ ಕುಳಿತು ಕೆಲಕಾಲ ಟೆಸ್ಟ್ ಪಂದ್ಯ ವೀಕ್ಷಿಸಿ ದರು. ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಭಾರತಕ್ಕೆ 4 ದಿನಗಳ ಪ್ರವಾಸ ಕೈಗೊಂಡಿದ್ದಾರೆ. 4ನೇ ಟೆಸ್ಟ್ ಪಂದ್ಯದ ನಿಮಿತ್ತ ತಮ್ಮನ್ನು ಆಹ್ವಾನಿಸಿದ ಪ್ರಧಾನಿ ಮೋದಿಗೆ ಇದೇ ವೇಳೆ ಆಸ್ಟ್ರೇಲಿಯಾ ಪ್ರಧಾನಿ ಧನ್ಯವಾದ ಅರ್ಪಿಸಿದರು.

ಭಾರತದ ಪ್ರಧಾನಿ ನರೇಂದ್ರ ಮೋದಿ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾಗೆ ರಾಷ್ಟ್ರೀಯ ತಂಡದ ಕ್ಯಾಪ್ ಕೊಟ್ಟರೆ, ಆಂಥೋನಿ ಅಲ್ಬನೀಸ್ ಅವರು ತಮ್ಮ ತಂಡದ ನಾಯಕ ಸ್ಟೀವನ್ ಸ್ಮಿತ್‌ಗೆ ಕ್ಯಾಪ್ ಕೊಟ್ಟು ಶುಭ ಹಾರೈಸಿದರು. ಈ ವೇಳೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಕಾರ್ಯದರ್ಶಿ ಜಯ ಶಾ ಉಪಸ್ಥಿತರಿದ್ದರು.



ಉಭಯ ತಂಡಗಳ ನಾಯಕರಿಗೆ ಕ್ಯಾಪ್ ನೀಡಿ, ಶುಭ ಹಾರೈಸಿ, ಕೆಲಕಾಲ ಪಂದ್ಯ ವೀಕ್ಷಿಸಿದ ಪ್ರಧಾನಿ ಮೋದಿ, ಆಸೀಸ್ ಪ್ರಧಾನಿ ಆಂಥೋನಿ ಆಲ್ಬನೀಸ್

ಜನರಲ್ ಕೆ.ಎಸ್. ತಿಮ್ಮಯ್ಯ ಮ್ಯೂಸಿಯಂಗೆ ಮೊಮ್ಮಗಳು ಅಮೃತ ಸಂತೋಷ್ ಭೇಟಿ



ಮಡಿಕೇರಿ, ಮಾ.9– ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಮೊಮ್ಮಗಳು ಅಮೃತ ಸಂತೋಷ್ ಅವರು ಸನ್ನಿಸೈಡ್‌ಗೆ ಭೇಟಿ ನೀಡಿ ಜನರಲ್ ತಿಮ್ಮಯ್ಯ ಮ್ಯೂಸಿಯಂ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮ್ಯೂಸಿಯಂ ಉಸ್ತುವಾರಿ ಸುಬೇದಾರ್ ಮೇಜರ್ ಗುಡ್ಡಂಡ ತಿಮ್ಮಯ್ಯ ಅವರು ಅಮೃತ ಅವರಿಗೆ ಮ್ಯೂಸಿಯಂ ಕುರಿತು ಮಾಹಿತಿ ಒದಗಿಸಿದರು.

ತಮ್ಮ ತಾತ ಜನರಲ್ ತಿಮ್ಮಯ್ಯ ಅವರ ಬಾಲ್ಯ, ಸೇನಾ ಜೀವನ ಹಾಗೂ ಯುದ್ಧದ ಸಂದರ್ಭದಲ್ಲಿ ಎದುರಿಸಿದ ಸವಾಲುಗಳು ಮತ್ತು ಪರಾಕ್ರಮಗಳ ಭಾವಚಿತ್ರಗಳು, ಜನರಲ್ ತಿಮ್ಮಯ್ಯ ಅವರು ಸೇವೆ ಸಲ್ಲಿಸಿರುವ ವಿವಿಧ ರೆಜಿಮೆಂಟ್‌ಗಳಲ್ಲಿ ಬಳಸಲಾಗಿದ್ದ ಹಲವು ಬಗೆಯ ಬಂದೂಕುಗಳು ಮತ್ತವರ ಜೀವಮಾನ ಸಾಧನೆಯ ದಾಖಲೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಮೊದಲ ಬಾರಿಗೆ ಮ್ಯೂಸಿಯಂಗೆ ಭೇಟಿ ನೀಡಿದ್ದೇನೆ. ಅತ್ಯುತ್ತಮ ರೀತಿಯಲ್ಲಿ ಮ್ಯೂಸಿಯಂ ಅನ್ನು ನಿರ್ಮಿಸಲಾಗಿದ್ದು, ಉತ್ತಮ ನಿರ್ವಹಣೆ ಮಾಡಿರುವುದಕ್ಕೆ ಧನ್ಯವಾದ ಸಲ್ಲಿಸುವುದಾಗಿ ಅವರು ತಿಳಿಸಿದರು.

ಜನರಲ್ ತಿಮ್ಮಯ್ಯ ಅವರ ಪುತ್ರಿ ಮಿರೆಲ್ ಹಾಗೂ ಮೇಜರ್ ಜನರಲ್ ಕೊಂಗೇಟಿರ ಚಂಗಪ್ಪ ದಂಪತಿ ಪುತ್ರಿಯಾಗಿರುವ ಅಮೃತ ಸಂತೋಷ್ ಪ್ರಸ್ತುತ ಉತ್ತರಾಂಚಲ್‌ನ ಅಲ್ಮೋರಾ ಜಿಲ್ಲೆಯಲ್ಲಿ ನೆಲೆಸಿದ್ದಾರೆ.

ಬೆಲೆ ಏರಿಕೆ ವಿರೋಧಿಸಿ ಸಿಪಿಐ(ಎಂ) ಪ್ರತಿಭಟನೆ



ವಿರಾಜಪೇಟೆ, ಮಾ.9– ಕೇಂದ್ರ ಮತ್ತು ರಾಜ್ಯ ಸರಕಾರ ದಿನ ಬಳಕೆ ಆಹಾರ ಪದಾರ್ಥ ಸೇರಿದಂತೆ ಅಡುಗೆ ಅನಿಲದ ಬೆಲೆ ಏರಿಕೆ ಮಾಡುತ್ತಿದ್ದು, ಜನಜೀವನ ಕಷ್ಟವಾಗಿದೆ ಎಂದು ಸಿಪಿಐ(ಎಂ) ಪಕ್ಷದ ವಿರಾಜಪೇಟೆ ನಗರ ಶಾಖೆ ವತಿಯಿಂದ ಪಟ್ಟಣದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಲಾಯಿತು.

ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡ ಎ.ಸಿ. ಸಾಬು ಮಾತನಾಡಿ, ಸರಕಾರ ಗಳು ಬಜೆಟ್ ಮಂಡನೆ ಸಂದರ್ಭ ಕೊಡಗನ್ನು ಕಡೆಗಣಿಸಿದೆ. ಜೊತೆಗೆ ಕಾರ್ಮಿಕರಿಗೆ ಮತ್ತು ರೈತರಿಗೆ ಯಾವುದೇ ಯೋಜನೆಗಳನ್ನು ಜಾರಿಗೆ ತಂದಿಲ್ಲ. ಈ ಹಿಂದೆ ಕೇಂದ್ರ ಮತ್ತು ರಾಜ್ಯ ಸರಕಾರ ಅಧಿಕಾರಕ್ಕೆ ಬಂದರೆ ಎಲ್ಲಾ ವಸ್ತುಗಳ ಬೆಲೆಯನ್ನು ಇಳಿಸುವುದಾಗಿ ಹೇಳಿ ಅಧಿಕಾರಕ್ಕೆ ಬಂತು. ಉಜ್ವಲ ಯೋಜನೆಯಲ್ಲಿ ಉಚಿತ ಅಡುಗೆ ಅನಿಲ ನೀಡುವುದಾಗಿ ಹೇಳಿ ಈಗ 1,150 ರೂ. ಏರಿಕೆ ಮಾಡಲಾಗಿದೆ. ಅದಕ್ಕೆ ಸಬ್ಸಿಡಿಯೂ ಇಲ್ಲ. ಕೊರೊನಾದ ನಂತರ ಜನರು ತತ್ತರಿಸಿ ಹೋಗಿದ್ದಾರೆ. ಅದರಿಂದ ಎಲ್ಲ ವಸ್ತುಗಳ ಬೆಲೆಯನ್ನು ಕಡಿಮೆ ಮಾಡಲು ಸರಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸಿಪಿಐ(ಎಂ) ಪಕ್ಷದ ನಗರ ಕಾರ್ಯದರ್ಶಿ ಶಾಜಿ ರಮೇಶ್ ಮಾತನಾಡಿ, ಕೇಂದ್ರ ಸರಕಾರ ಅಧಿಕಾರಕ್ಕೆ ಬಂದ ನಂತರ ದಿನಬಳಕೆಯ ವಸ್ತುಗಳ ಬೆಲೆಯನ್ನು ದಿನೇ ದಿನೆ ಏರಿಕೆ ಮಾಡುತ್ತಿರುವುದರಿಂದ ಕೂಲಿ ಕಾರ್ಮಿಕರು ಜೀವನ ನಡೆಸುವುದೇ ಕಷ್ಟವಾಗಿದೆ. ಈಗಿನ ಸರಕಾರ ಅಧಿಕಾರಕ್ಕೆ ಬರುವ ಮೊದಲು ಅಡುಗೆ ಅನಿಲಕ್ಕೆ 600 ರೂ. ಮಾತ್ರ ಇತ್ತು ಈಗ ನಾವುಗಳು ಸಾವಿರಕ್ಕೂ ಹೆಚ್ಚು ಹಣ ನೀಡಬೇಕಾಗಿದೆ. ಈ ಸರಕಾರಕ್ಕೆ ಬಡ ಕಾರ್ಮಿಕರ ಮೇಲೆ ಕರುಣೆ ಇದ್ದಲ್ಲಿ ಪಡಿತರ ಚೀಟಿ ಅಹಾರ ವಸ್ತುಗಳನ್ನು ಹೆಚ್ಚು ಮಾಡುವಂತೆ ಒತ್ತಾಯಿಸಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯ ಪದ್ಮಿನಿ, ತಾಲೂಕು ಶಾಖೆಯ ರತೀಶ್, ಹಮೀದ್, ಖಾಲಿದ್, ಖಾಶಿಂ, ಹರಿದಾಸ್, ಬಾಪುಟ್ಟಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೆದಕಲ್ ಶ್ರೀ ಭದ್ರಕಾಳೇಶ್ವರಿ ದೇವಾಲಯದ ವಾರ್ಷಿಕೋತ್ಸವ

ಮಡಿಕೇರಿ, ಮಾ.9– ಕೆದಕಲ್ ಶ್ರೀ ಭದ್ರಕಾಳೇಶ್ವರಿ ದೇವಾಲಯದ ವಾರ್ಷಿಕೋತ್ಸವವು ಮಾ.12ರಂದು ನಡೆಯಲಿದೆ. ಅಂದು ಬೆಳಗ್ಗೆ 11 ಗಂಟೆಗೆ ವಿವಿಧ ಪೂಜಾ ಕೈಂಕರ್ಯಗಳು ಪ್ರಾರಂಭವಾಗಿ, ದೇವರ ದರ್ಶನ ಹಾಗೂ ಅನ್ನದಾನ ನೆರವೇರಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ದೇವಾಲಯದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ಕೋರಿದೆ.

ಇಂದು ಕೊಡಗು ಜಿಲ್ಲೆಗೆ ವಿಜಯಸಂಕಲ್ಪ ಯಾತ್ರೆ

ಆನೆಚೌಕೂರು ಗೇಟ್ ಬಳಿ ಸ್ವಾಗತ, ಗೋಣಿಕೊಪ್ಪದಲ್ಲಿ ಬಹಿರಂಗ ಸಭೆ



ವಿರಾಜಪೇಟೆ, ಮಾ.9– ಭಾರತೀಯ ಜನತಾ ಪಕ್ಷದ ವಿಜಯ ಸಂಕಲ್ಪ ಯಾತ್ರೆ ಶುಕ್ರವಾರ (ಮಾ.10) ಸಂಜೆ ಕೊಡಗು ಜಿಲ್ಲೆಗೆ ಆಗಮಿಸುತ್ತಿದ್ದು, ವಿರಾಜಪೇಟೆ ತಾಲೂಕಿನ ಆನೆಚೌಕೂರು ಗೇಟ್ ಬಳಿ ರಥಯಾತ್ರೆಯನ್ನು ಅದ್ಧೂರಿಯಾಗಿ ಬರ ಮಾಡಿಕೊಳ್ಳಲಾಗುವುದು.

ವಿರಾಜಪೇಟೆ ಬಿಜೆಪಿಯ ಮಂಡಲ ಅಧ್ಯಕ್ಷ ನೆಲ್ಲಿರ ಚಲನ್ ಕುಮಾರ್ ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ವಿಜಯ ಸಂಕಲ್ಪ ಯಾತ್ರೆ ರಾಜ್ಯದ ನಾಲ್ಕು ಕಡೆಗಳಲ್ಲಿ ಸಂಚರಿಸುತ್ತಿದ್ದು, ಮಲೆ ಮಹದೇಶ್ವರ ಬೆಟ್ಟದಿಂದ ಹೊರಟ ಯಾತ್ರೆ ಕೊಡಗು ಜಿಲ್ಲೆಗೆ ಆಗಮಿಸಲಿದೆ. ಅಂದು ಗೋಣಿಕೊಪ್ಪದ ಆರ್.ಎಂ.ಸಿ ಸಭಾಂಗಣದಿಂದ ಮುಖ್ಯರಸ್ತೆಯಲ್ಲಿ ಮೆರವಣಿಗೆ ಮೂಲಕ ಯಾತ್ರೆ ನಡೆಸಲಾಗುವುದು ಎಂದರು.

ಗೋಣಿಕೊಪ್ಪ ಬಳಿಕ ಖಾಸಗಿ ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆ ಆಯೋಜಿಸಲಾಗಿದೆ. ಸಭೆಯನ್ನು ಉದ್ದೇಶಿಸಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಷಣ ಮಾಡಲಿದ್ದಾರೆ. ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಇಂಧನ ಸಚಿವ ಸುನೀಲ್ ಕುಮಾರ್, ವಸತಿ ಸಚಿವ ವಿ. ಸೋಮಣ್ಣ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಿರ್ಮಲ್ ಕುಮಾರ್ ಸುರಾನಾ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಜಿ ಬೋಪಯ್ಯ ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ ವಾಟೇರಿರ ಬೋಪಣ್ಣ ಮಾತನಾಡಿ, ಈಗಾಗಲೇ ಬಿಜೆಪಿ ಪಕ್ಷದ ಓಬಿಸಿ ಸಭೆಯನ್ನು ಚೆನ್ನಯ್ಯನಕೋಟೆಯಲ್ಲಿ ನಡೆಸಲಾಗಿದೆ. ಮಾ.15 ರಂದು ವಿರಾಜಪೇಟೆ ಮಹಿಳಾ ಸಮಾಜದಲ್ಲಿ ಮಹಿಳಾ ಮೋರ್ಚಾ ಸಭೆಯನ್ನು ನಡೆಸಲಾಗುವುದು. ಚುನಾವಣಾ ಪೂರ್ವ ತಯಾರಿ ನಡೆಸಿದ್ದು, ರಾಜ್ಯ ಸರ್ಕಾರದ 4 ವರ್ಷಗಳ ಸಾಧನೆ, ಕೇಂದ್ರ ಸರ್ಕಾರದ 8 ವರ್ಷಗಳ ಸಾಧನೆಯನ್ನು ಮತದಾರರ ಮುಂದಿಡಲಾಗುವುದು. 180 ಬೂತ್‌ಗಳಿಗೆ ಸರ್ಕಾರದ ಯೋಜನೆ ಅಭಿವೃದ್ಧಿ ಹಾಗೂ ಜನಪರ ಕೆಲಸ ಕಾರ್ಯಗಳನ್ನು ಎಲ್‌ಇಡಿ ದೊಡ್ಡ ಪರದೆಯ ಮೂಲಕ ಪ್ರದರ್ಶಿಸಲಾಗುತ್ತದೆ.

ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಅಜ್ಜಿಕುಟ್ಟಿರ ಪ್ರವೀಣ್, ವಕ್ತಾರ ಮಲಿಯಂಡ ಪೊನ್ನಣ್ಣ, ವಿರಾಜಪೇಟೆ ವಿಧಾನ ಸಭಾ ಕ್ಷೇತ್ರ ವಿಸ್ತಾರ ಶ್ರೀಕಾಂತ್ ಇದ್ದರು.

ಮೇನಲ್ಲಿ ನಾಟಿ ವೈದ್ಯರ ಸಮಾವೇಶ

ಮಡಿಕೇರಿ, ಮಾ.9– ಕರ್ನಾಟಕ ಜೀವ ವೈವಿಧ್ಯ ಮಂಡಳಿ ವತಿಯಿಂದ ರಾಜ್ಯ ಪಾರಂಪರಿಕ ವೈದ್ಯ ಪರಿಷತ್ ಸಹಯೋಗದಲ್ಲಿ ವಲಯ ಮಟ್ಟದ ನಾಟಿ ವೈದ್ಯರ ಸಮಾವೇಶ ಸಂಬಂಧ ಪೂರ್ವಭಾವಿ ಸಭೆ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಂಡಳಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮೊದಲ ಕಾರ್ಯಕ್ರಮವನ್ನು ಮೇ ಅಂತ್ಯದಲ್ಲಿ ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಮಾತನಾಡಿದ ರವಿ ಕಾಳಪ್ಪ ರಾಜ್ಯ ಮಟ್ಟದ ಸಮ್ಮೇಳನ ನಡೆಸುವ ಉದ್ದೇಶ ಮಂಡಳಿಯದ್ದಾಗಿತ್ತು. ಆದರೆ ಅನಿವಾರ್ಯ ಕಾರಣದಿಂದ ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ವಲಯ ಮಟ್ಟದ ಸಮ್ಮೇಳನವನ್ನು ವ್ಯವಸ್ಥಿತವಾಗಿ ಆಯೋಜಿಸಬೇಕೆಂದು ಸಲಹೆ ನೀಡಿದರು. ವಿಧಾನಸಭಾ ಚುನಾವಣೆ ಕಳೆದ ಬಳಿಕ ಅರ್ಥಪೂರ್ಣ ಕಾರ್ಯಕ್ರಮ ಆಯೋಜನೆಯಾಗಬೇಕು. ಹೆಸರಿಗೆ ಮಾತ್ರ ಕಾರ್ಯಕ್ರಮವಾಗದೆ, ನಾಟಿ ವೈದ್ಯರಿಂದ ಮಾಹಿತಿ ವಿನಿಮಯವಾಗುವಂತಿರಬೇಕು. ನುರಿತ ನಾಟಿ ವೈದ್ಯರಿಂದ ಕಾರ್ಯಾಗಾರ ಹಮ್ಮಿಕೊಳ್ಳಬೇಕು. ನಾಟಿ ವೈದ್ಯರಿಂದ ಸಂವಾದ ಕಾರ್ಯಕ್ರಮವನ್ನೂ ಏರ್ಪಡಿಸಬೇಕೆಂದು ತಿಳಿಸಿದರು. ಸಮಾವೇಶದಲ್ಲಿ ತುಮಕೂರು, ರಾಮನಗರ, ಮಂಡ್ಯ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ನಾಟಿ ವೈದ್ಯರನ್ನು ಆಹ್ವಾನಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ದ್ವಿತೀಯ ಪಿಯು ಪರೀಕ್ಷೆ ಆರಂಭ

ಮೊದಲ ದಿನ 4352 ವಿದ್ಯಾರ್ಥಿಗಳು ಹಾಜರು, 154 ಮಂದಿ ಗೈರು



ಮಡಿಕೇರಿ, ಮಾ.9– ಜಿಲ್ಲೆಯಾದ್ಯಂತ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿದ್ದು, ಸುಗಮವಾಗಿ ನಡೆಯಿತು. ಮಾ.29ರವರೆಗೆ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಕನ್ನಡ ವಿಷಯದ ಪರೀಕ್ಷೆಗೆ 4506 ವಿದ್ಯಾರ್ಥಿಗಳು ಹಾಜರಾಗಬೇಕಿತ್ತು. ಆದರೆ, 4352 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದರೆ, 154 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಶನಿವಾರ ನಡೆಯಲಿರುವ ಗಣಿತಶಾಸ್ತ್ರ ವಿಷಯದಲ್ಲಿ 1299 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇದರೊಂದಿಗೆ ಮರು ಪರೀಕ್ಷೆಗೆ ಹಾಜರಾಗುವವರು ಇರಲಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಟ್ಟರಾಜು ತಿಳಿಸಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೊಡಗಿನಲ್ಲಿ ಒಟ್ಟು 19 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಅವರು ತಿಳಿಸಿದರು.

ಸುಂಟಿಕೊಪ್ಪ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇದೇ ಪ್ರಥಮ ಬಾರಿಗೆ ಪರೀಕ್ಷಾ ಕೇಂದ್ರ ತೆರೆದ ಹಿನ್ನೆಲೆಯಲ್ಲಿ 4 ಪದವಿಪೂರ್ವ ಕಾಲೇಜಿನ 255 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ಪ್ರಸಕ್ತ ಸಾಲಿನಿಂದ ಕೊಡಗು ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಸುಂಟಿಕೊಪ್ಪ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರ ಸ್ಥಾಪಿಸಿರುವುದರಿಂದ ಸುಂಟಿಕೊಪ್ಪದ ಸಂತ ಮೇರಿ ಆಂಗ್ಲ ಪದವಿಪೂರ್ವ ಕಾಲೇಜು, ಮಾದಾಪುರ ಚೆನ್ನಮ್ಮ ಕಾಲೇಜು, ಗರಗಂದೂರು ಮೊರಾರ್ಜಿ ವಸತಿ ವಿಜ್ಞಾನ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸುಂಟಿಕೊಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

ವಾರ್ಷಿಕ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ದೂರದ ಪರೀಕ್ಷಾ ಕೇಂದ್ರಕ್ಕೆ ಪ್ರಶ್ನೆ ಪತ್ರಿಕೆಗಳನ್ನು ಸರಿಯಾದ ಸಮಯದಲ್ಲಿ ತಲುಪಿಸಲು ಸೂಕ್ತ ಕ್ರಮ ಕೈಗೊಂಡಿದ್ದರಿಂದ ಯಾವುದೇ ಸಮಸ್ಯೆಯಾಗಿಲ್ಲ. ಮಡಿಕೇರಿ 5, ವಿರಾಜಪೇಟೆ 2, ಪೊನ್ನಂಪೇಟೆ 4, ಸೋಮವಾರಪೇಟೆ 3, ಕುಶಾಲನಗರ 5 ಸೇರಿದಂತೆ ಜಿಲ್ಲೆಯ 19 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ವಿದ್ಯಾರ್ಥಿಗಳಿರುವ ಪ್ರದೇಶದ 10ರಿಂದ 15 ಕಿ.ಮೀ. ಒಳಗೆ ಪರೀಕ್ಷಾ ಕೇಂದ್ರಗಳನ್ನು ತೆರೆದಿದ್ದ ಕಾರಣ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ ತಲುಪಲು ಅನುಕೂಲವಾಯಿತು. ಪರೀಕ್ಷೆಗೆ ತೆರಳುವ ಪರೀಕ್ಷಾರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶ ಪತ್ರವನ್ನು ತೋರಿಸಿದಲ್ಲಿ ಕೆಎಸ್ ಆರ್‌ಟಿಸಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು.

ಇಂದು ವಿಶೇಷ ಶಿಕ್ಷಣ ಕಾರ್ಯಕ್ರಮ

ಮಡಿಕೇರಿ, ಮಾ.9– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿ., ಸೋಮವಾರಪೇಟೆ ತಾಲೂಕು ಬಸವನಹಳ್ಳಿ ಲ್ಯಾಂಪ್ಸ್ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಲ್ಯಾಂಪ್ಸ್ ಸಹಕಾರ ಸಂಘಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಕಾರ್ಯದರ್ಶಿಗೆ ಕಿರುಅರಣ್ಯ ಉತ್ಪನ್ನ ಸಂಗ್ರಹಣೆ, ಇಲಾಖೆಯಿಂದ ಗಿರಿಜನರಿಗೆ ದೊರಕುವ ಸವಲತ್ತು ಹಾಗೂ ಸಹಕಾರ ಕಾಯ್ದೆ ಕಾನೂನು ಕುರಿತು ವಿಶೇಷ ಶಿಕ್ಷಣ ಕಾರ್ಯಕ್ರಮವು ಮಾ.10 ರಂದು ಬೆಳಗ್ಗೆ 11 ಗಂಟೆಗೆ ಬಸವನಹಳ್ಳಿ ಸಮುದಾಯ ಭವನದಲ್ಲಿ ನಡೆಯಲಿದೆ.

ನೂತನ ವಾಲ್ಮೀಕಿ ಮಹರ್ಷಿ ಭವನ ಲೋಕಾರ್ಪಣೆ

ಭವನಗಳು ಸದಾ ಚಟುವಟಿಕೆಯ ಕೇಂದ್ರಗಳಾಗಿರುವಂತೆ ನೋಡಿಕೊಳ್ಳಿ: ಶಾಸಕ ಪುಟ್ಟರಂಗಶೆಟ್ಟಿ ಅಭಿಮತ



ಚಾಮರಾಜನಗರ ಮಾ.9– ಸಮುದಾಯ ಭವನಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಟ್ಟಂತೆ, ಅವುಗಳ ನಿರ್ವಹಣೆಗೂ ಗಮನಹರಿಸುವುದು ಸೂಕ್ತ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಭೋಗಾಪುರ ಗ್ರಾಮದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶಾಸಕರ ಅನುದಾನ ಸೇರಿ 30ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಮಹರ್ಷಿ ವಾಲ್ಮೀಕಿ ನೂತನ ಸಮುದಾಯಭವನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಮಾಯಣದಂತಹ ಮಹಾನ್ ಕಾವ್ಯ ಬರೆದ ವಾಲ್ಮೀಕಿ ಮಹರ್ಷಿ ಹೆಸರಿನಲ್ಲಿ ಸುಸಜ್ಜಿತ ಭವನ ನಿರ್ಮಾಣವಾಗಿರುವುದು ಸಂತಸದ ವಿಚಾರ. ಗ್ರಾಮಸ್ಥರು ಸಮುದಾಯ ಭವನ ನಿರ್ವಹಣೆಯ ಬಗ್ಗೆ ಕಾಳಜಿವಹಿಸಬೇಕು. ಶಾಲಾ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಬೇಕು. ಭವನ ಕೆಲ ವರ್ಷಗಳ ಹಿಂದೆಯೇ ಉದ್ಘಾಟನೆಗೊಳ್ಳಬೇಕಿತ್ತು. ಅನುದಾನದ ಕೊರತೆಯಿಂದ ಭವನದ ಕಾಮಗಾರಿ ವಿಳಂಬವಾಯಿತು. ಇನ್ನು ಕ್ಷೇತ್ರದ ಕೆಲ ಗ್ರಾಮಗಳಲ್ಲಿ ಭವನಗಳ ಕಾಮಗಾರಿ ನಡೆಯುತ್ತಿವೆ. ಅವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ಅರಕಲವಾಡಿ ಸೋಮನಾಯಕ ಮಾತನಾಡಿ, ಶಾಸಕರ ಅಭಿವೃದ್ಧಿ ಪರ ಕಾಳಜಿ ಪರಿಣಾಮ ಕ್ಷೇತ್ರದ ಹಲಗ್ರಾಮಗಳಲ್ಲಿ ಸಮುದಾಯ ಭವನಗಳು, ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ಜರುಗುತ್ತಿವೆ ಎಂದರು. ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಬಿಕಾಂ ಮಹದೇವನಾಯಕ ಮಾತನಾಡಿ, ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದ ಸತ್ಪ್ರಜೆಗಳನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಮಾಜಿ ಜಿಪಂ ಸದಸ್ಯ ಅರಕಲವಾಡಿ ಸೋಮನಾಯಕ ಗ್ರಾಪಂ ಉಪಾಧ್ಯಕ್ಷೆ ಪುಟ್ಟಗೌರಮ್ಮ, ಸದಸ್ಯರಾದ ಮಹೇಶ್, ರಾಜಮ್ಮ, ನಾಗಮ್ಮ, ನಾಗು, ಎಪಿಎಂಸಿ ಮಾಜಿ ಅಧ್ಯಕ್ಷ ಡಿ.ನಾಗೇಂದ್ರ, ತಾಪಂ ಮಾಜಿ ಸದಸ್ಯ ಮಹಾಲಿಂಗು, ಮಧು ಆಚಾರ್, ರಾಮಚಂದ್ರಯ್ಯ, ನಾಗನಾಯ್ಕ, ರಾಜೇಶ್, ರಾಜಗೋಪಾಲ್, ಕೆಲ್ಲಂಬಳ್ಳಿ ಸೋಮೇಶ್, ಮಹೇಶನಾಯ್ಕ, ನಾಗೇಂದ್ರ ಸೇರಿದಂತೆ ಗ್ರಾಮದ ಎಲ್ಲ ಸಮುದಾಯದ ಯಜಮಾನರು, ಗ್ರಾಮಸ್ಥರು, ಅಧಿಕಾರಿಗಳು ಹಾಜರಿದ್ದರು.

ವೀರಶೈವ ಸಂಪ್ರದಾಯದಂತೆ ಮಲೆಯೂರು ಗುರುಸ್ವಾಮಿ ಅಂತ್ಯಕ್ರಿಯೆ



ಚಾಮರಾಜನಗರ, ಮಾ.9– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಬುಧವಾರ ತಡರಾತ್ರಿ ಅನಾರೋಗ್ಯದಿಂದ ನಿಧನರಾದ ಸಾಹಿತಿ, ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ(76) ಅವರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಚಾಮರಾಜನಗರ ತಾಲೂಕಿನ ಮಲೆಯೂರು ಗ್ರಾಮದಲ್ಲಿ ವೀರಶೈವ ಸಂಪ್ರದಾಯದಂತೆ ನೆರವೇರಿತು.

ಕೆಲವು ದಿನಗಳಿಂದ ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಕೊನೆಯುಸಿರೆಳೆದಿದ್ದಾರೆ. ಗುರುಸ್ವಾಮಿ ಅವರ ಅಂತಿಮ ದರ್ಶನಕ್ಕೆ ಜೆಎಸ್‌ಎಸ್ ವಿದ್ಯಾಪೀಠದ ಬಳಿ ಗುರುವಾರ ಮಧ್ಯಾಹ್ನದವರೆಗೂ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನದ ಬಳಿಕ ಅವರ ಹುಟ್ಟೂರಾದ ಚಾಮರಾಜನಗರ ತಾಲೂಕಿನ ಮಲೆಯೂರಿನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹತ್ತಾರು ಪುಸ್ತಕಗಳನ್ನು ರಚಿಸಿದ್ದರು: ಪ್ರೊ. ಮಲೆಯೂರು ಗುರುಸ್ವಾಮಿ ಅವರು 5ಕ್ಕೂ ಹೆಚ್ಚು ಕಾದಂಬರಿ ಹಾಗೂ 10ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಇವುಗಳಲ್ಲಿ ಪ್ರಮುಖವಾಗಿ ಮಹಾಯಾತ್ರಿಕ, ಅಪ್ರತಿಮ ವೀರ, ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ ಕಾದಂಬರಿಗಳು, ಮಾತೆಂಬುದು ಜ್ಯೋತಿರ್ಲಿಂಗ ವಚನ ಸಾಹಿತ್ಯ, ಶ್ರೀ ಕಾರ್ಯಸ್ವಾಮಿ ಮಠದ ಕ್ಷೇತ್ರ ಚರಿತ್ರೆ, ಶರಣ ಕಿರಣ ವ್ಯಕ್ತಿ ಚಿತ್ರ, ಪ್ರಭುಲಿಂಗ ಲೀಲೆ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ.

ಅಲ್ಲದೇ, ಮೂಡಲಸೀಮೆಯ ಕಥೆಗಳು, ಕಾಡಂಚಿನ ಕೋಗಿಲೆಗಳ ಕಲರವ, ಕಪಿಲಾ ನದಿಯ ಎಡಬಲದಿ, ಹೆಜ್ಜೆಗೆ ಅಕ್ಕ, ಛಂದೋನಿಜಗುಣ, ರಾಜಪಥ, ಸೋಮಸಿರಿ, ಶಿವಪ್ರಭೆ, ಶಿವಯೋಗ, ಹೊನ್ನಹೊಳೆ, ಶಿವಸಂಪದ ಸೇರಿದಂತೆ ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ. ಇವರು ರಾಜ್ಯೋತ್ಸವ ಪ್ರಶಸ್ತಿ, ಮಹಾಕವಿ ಷಡಕ್ಷರ ದೇವ ಸ್ಮಾರಕ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಸಂತಾಪ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾಗಿದ್ದ ಗುರುಸ್ವಾಮಿ ಅವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಸಂತಾಪ ಸೂಚಿಸಿದೆ. ಪರಿಷತ್ತಿನ ಮಾರ್ಗದರ್ಶಕರಾಗಿದ್ದ ಮಲೆಯೂರು ಗುರುಸ್ವಾಮಿಯವರ ನಿಧನ ಕನ್ನಡ ಸಾಹಿತ್ಯಕ್ಕೆ ಹಾಗೂ ಚಾಮರಾಜನಗರ ಜಿಲ್ಲೆಗೆ ಅಪಾರ ನಷ್ಟ ಉಂಟುಮಾಡಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶೈಲಕುಮಾರ್, ಪದಾಧಿಕಾರಿಗಳು ತಿಳಿಸಿದ್ದಾರೆ.

ಸಚಿವರಿಂದ ಸಂತಾಪ: ಹಿರಿಯ ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿ ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ತೀವ್ರ ಸಂತಾಪ ಸೂಚಿಸಿದ್ದಾರೆ.

ಸಮಾಜದ ಚಿಂತಕರು, ಕವಿಗಳು, ವಿಮರ್ಶಕರು, ಉತ್ತಮ ವಾಕ್ಪಟು, ಸಾರಸ್ವತ ಲೋಕದ ಸುಪುತ್ರರು, ಮೇರು ಸಾಹಿತಿ, ಸರಳ–ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ್ದ, ನನ್ನ ಆತ್ಮೀಯರೂ ಆಗಿದ್ದ ಪ್ರೊ. ಮಲೆಯೂರು ಗುರುಸ್ವಾಮಿಯವರ ನಿಧನದಿಂದ ನನಗೆ ಅತೀವ ದುಃಖವಾಗಿದೆ. ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಶರಣ ತತ್ವ ಮತ್ತು ಚಿಂತನೆಗಳನ್ನು ನಾಡಿನ ಜನತೆಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು. ಅವರ ನಿಧನದಿಂದ ಸಾಹಿತ್ಯ ಲೋಕದ ಮತ್ತೊಂದು ಕೊಂಡಿ ಕಳಚಿರುವುದು ಇಡೀ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆ ಆರಂಭ

6576 ವಿದ್ಯಾರ್ಥಿಗಳು ಹಾಜರು, 213 ಮಂದಿ ಗೈರು



ಚಾಮರಾಜನಗರ, ಮಾ.9– ಜಿಲ್ಲೆಯಲ್ಲಿ ಗುರುವಾರದಿಂದ ದ್ವಿತೀಯ ಪಿಯು ಪರೀಕ್ಷೆ ಆರಂಭವಾಗಿದ್ದು, ಮೊದಲ ದಿನ ಯಾವುದೇ ಗೊಂದಲ ಇಲ್ಲದೆ ಪರೀಕ್ಷೆ ಸುಲಲಿತವಾಗಿ ನಡೆಯಿತು.

ಜಿಲ್ಲೆಯ 17 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಮೊದಲ ದಿನವಾದ ಇಂದು ಕನ್ನಡ ಪರೀಕ್ಷೆ ನಡೆಯಿತು. ಕನ್ನಡ ವಿಷಯದ ಪರೀಕ್ಷೆಯನ್ನು ಒಟ್ಟು 6789 ವಿದ್ಯಾರ್ಥಿಗಳು ತೆಗೆದುಕೊಂಡಿದ್ದರು. ಆದರೆ, 6576 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದು, ಉಳಿದ 213 ವಿದ್ಯಾರ್ಥಿಗಳು ಪರೀಕ್ಷೆ ಗೈರು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ಪ್ರಸನ್ನ ತಿಳಿಸಿದರು.

ಪರೀಕ್ಷಾ ಕೇಂದ್ರದ 100 ಮೀಟರ್ ಅಂತರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಅಕ್ಕ–ಪಕ್ಕದ ಜೆರಾಕ್ಸ್ ಅಂಗಡಿಗಳ ಬಾಗಿಲು ಮುಚ್ಚಿಸಲಾಗಿತ್ತು. ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಭೇಟಿ: ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ನಗರದ ಜೆಎಸ್‌ಎಸ್ ಕಾಲೇಜಿನಲ್ಲಿ ತೆರೆಯಲಾಗಿದ್ದ ಪರೀಕ್ಷಾ ಕೇಂದ್ರ ಸೇರಿದಂತೆ ಇತರೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಮಾ.12, ಕೊಳ್ಳೇಗಾಲದಲ್ಲಿ ಉದ್ಯೋಗ ಮೇಳ



ಕೊಳ್ಳೇಗಾಲ. ಮಾ.9– ರಾಚಯ್ಯ ಪ್ರತಿಷ್ಠಾನದ ವತಿಯಿಂದ ಕೊಳ್ಳೇಗಾಲದ ನ್ಯಾಷನಲ್ ಶಾಲಾ ಆವರಣದಲ್ಲಿ ಮಾ.12 ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ. ನುರಿತ ಕಂಪನಿಗಳು ಈ ಮೇಳದಲ್ಲಿ ಭಾಗವಹಿಸಲಿದ್ದು, ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳಿದೆ.

ರಾಚಯ್ಯ ಪ್ರತಿಷ್ಠಾನ ಅನೇಕ ಸೇವಾ ಕಾರ್ಯಕ್ರಮಗಳನ್ನು ಪ್ರತಿ ಬಾರಿಯೂ ಹಮ್ಮಿಕೊಳ್ಳುತ್ತಿದ್ದು, ಈ ಬಾರಿ ನಿರುದ್ಯೋಗಿಗಳ ಅನುಕೂಲಕ್ಕಾಗಿ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ರೀತಿಯಲ್ಲಿ ಪಾಲ್ಗೊಳ್ಳಬೇಕು ಎಂದು ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ ಮೇಳಕ್ಕೆ ವಾಟಾಳು ಮಠಾಧ್ಯಕ್ಷರಾದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ, ಮೈಸೂರಿನ ಉರಿಲಿಂಗಿ ಪೆದ್ದಿ ಮಠಾಧ್ಯಕ್ಷರಾದ ಜ್ಞಾನಪ್ರಕಾಶ ಸ್ವಾಮೀಜಿ ಜಂಟಿಯಾಗಿ ಚಾಲನೆ ನೀಡುವರು. ನಗರಸಭಾಧ್ಯಕ್ಷೆ ರೇಖಾ ಮತ್ತು ಸದಸ್ಯರು ನೇಮಕಗೊಂಡ ಉದ್ಯೋಗಿಗಳಿಗೆ ಪ್ರಮಾಣ ಪತ್ರ ವಿತರಿಸುವರು ಎಂದರು.

ಮಾಜಿ ಶಾಸಕ ಎಸ್.ಜಯಣ್ಣ ಎಸ್. ಬಾಲರಾಜು, ಬಳಿಕ ನಾನು ಈಗ ಜಿ.ಎನ್. ನಂಜುಂಡಸ್ವಾಮಿಯವರು ಎಲ್ಲರೂ ಸಹಾ ಹೊರಗಡೆಯಿಂದ ಬಂದು ಪಕ್ಷಕ್ಕೆ ಸೇರಿದವರೆ ಆಗಿದ್ದೇವೆ. ನಂಜುಂಡಸ್ವಾಮಿ ಯಾವುದೆ ಷರತ್ತಿಲ್ಲದೆ ಪಕ್ಷ ಸೇರಿದ್ದಾರೆ. ಸೇರ್ಪಡೆಗೆ ನನಗೂ ಆಹ್ವಾನಿಸಿದ್ದರು, ಆದರೆ ಅನ್ಯ ಕಾರ್ಯನಿಮಿತ್ತ ನಾನು ಹಾಗೂ ಮಾಜಿ ಶಾಸಕ ಜಯಣ್ಣ ಅವರು ಪಾಲ್ಗೊಂಡಿರಲಿಲ್ಲ, ಆದರೆ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ್, ಮಾಜಿ ಶಾಸಕ ಬಾಲರಾಜು, ಜಿಲ್ಲಾಧ್ಯಕ್ಷ ಮರಿಸ್ವಾಮಿ, ಬ್ಲಾಕ್ ಅಧ್ಯಕ್ಷ ಆಲಹಳ್ಳಿ ತೋಟೇಶ್, ಚಂದ್ರು ಇನ್ನಿತರರು ಪಾಲ್ಗೊಂಡಿದ್ದರು. ಅವರ ಸೇರ್ಪಡೆಯನ್ನು ನಾನು ಸ್ವಾಗತಿಸುವ ಮೂಲಕ ಎಲ್ಲರೂ ಒಗ್ಗಟ್ಟಿನಿಂದ ತೆರಳಿದರೆ ಪಕ್ಷದ ಅಭ್ಯರ್ಥಿ ಹೆಚ್ಚಿನ ಮತಗಳಿಂದ ಗೆಲ್ಲುವ ಹೆಚ್ಚಿನ ಅವಕಾಶವಿದೆ ಎಂದರು.

ಗುಂಡ್ಲುಪೇಟೆಯಲ್ಲಿ ಪುಡಿರೌಡಿಗಳ ಅಟ್ಟಹಾಸ

ಸಿಗರೇಟ್ ದುಡ್ಡು ಕೇಳಿದ ಅಂಗಡಿಯವನ ಮೇಲೆ ಹಲ್ಲೆ, ಕೊಲೆ ಬೆದರಿಕೆ

ಗುಂಡ್ಲುಪೇಟೆ, ಮಾ.9– ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಇಂಪನ ಸ್ಟೋರ್ಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹದೇವಸ್ವಾಮಿ ಎಂಬುವವರ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪಟ್ಟಣದಲ್ಲಿ ಪುಡಿರೌಡಿಗಳ ಅಟ್ಟಹಾಸ ಎಲ್ಲೆ ಮೀರಿದೆ.

ಪಟ್ಟಣದ ವಾಸಿ ಸೂರಿ ಮತ್ತು ಮಣಿ ಎಂಬ ಯುವಕರು ಮದ್ಯ ಸೇವಿಸಿ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಇಂಪನ ಸ್ಟೋರ್ಸ್‌ಗೆ ಬಂದು ಸಿಗರೇಟ್ ಮತ್ತಿತರೆ ವಸ್ತುಗಳನ್ನು ಪಡೆದು ಹಣ ಕೇಳಿದಾಗ ಮಹದೇವಸ್ವಾಮಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದು ಸಣ್ಣಪುಟ್ಟ ಗಾಯಗಳಾಗಿದೆ. ಮುಂದೆಯೂ ಸಿಗರೇಟಿಗೆ ಹಣ ಕೇಳಿದರೆ ಚಾಕುವಿನಿಂದ ಚುಚ್ಚಿ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಮಹದೇವಸ್ವಾಮಿ ದೂರು ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಸೂರಿ ಮತ್ತು ಮಣಿ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇತ್ತೀಚೆಗೆ ಪಟ್ಟಣದಲ್ಲಿ ಪುಡಿ ರೌಡಿಗಳು ಕುಡಿದು ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತಿಸುವುದು ಮತ್ತು ಗಲಾಟೆ ಮಾಡಿ ರೌಡಿಸಂ ತೋರಿಸುವುದು ಮತ್ತು ದ್ವಿಚಕ್ರವಾಹನಗಳನ್ನು ಅತಿವೇಗದಿಂದ ಚಲಾಯಿಸುತ್ತ ಎದುರಿಗೆ ಬರುವ ವಾಹನಗಳಿಗೆ ದಿಕ್ಕು ತಪ್ಪಿಸಿ ವಿಕೃತಿ ಮೆರೆಯುವುದು, ಸಾರ್ವಜನಿಕ ಸ್ಥಳಗಳಲ್ಲಿ ಕುಡಿದು ಗಲಾಟೆ ಮಾಡುವ ಪ್ರಕರಣಗಳು ಹೆಚ್ಚಾಗುತ್ತಿದ್ದು. ಇಂತಹವರಿಗೆ ಪೊಲೀಸರು ತಕ್ಕಪಾಠ ಕಲಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೊಳ್ಳೇಗಾಲದ ಉಪ ವಿಭಾಗ ಆಸ್ಪತ್ರೆಗೆ ನ್ಯಾಯಾಧೀಶರ ಭೇಟಿ, ಪರಿಶೀಲನೆ



ಚಾಮರಾಜನಗರ, ಮಾ.9– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಶ್ರೀಧರ ಅವರು ಇತ್ತೀಚೆಗೆ ಕೊಳ್ಳೇಗಾಲದ ಉಪ ವಿಭಾಗ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

ವೈದ್ಯರೊಂದಿಗೆ ಆಸ್ಪತ್ರೆಯ ಎಲ್ಲಾ ಕೊಠಡಿಗಳಿಗೂ ಖುದ್ದಾಗಿ ಭೇಟಿ ನೀಡಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಆರೋಗ್ಯದ ವಾತಾವರಣವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಆಸ್ಪತ್ರೆಯ ಎಲ್ಲರೂ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ಸೂಚಿಸಿದರು. ಮಧುಮೇಹ, ರಕ್ತದೊತ್ತಡ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ನೀಡುತ್ತಿರುವ ವೈದ್ಯಕೀಯ ಸೌಲಭ್ಯದ ಕುರಿತು ಪರಿಶೀಲಿಸಿದರು. ಚಿಕಿತ್ಸೆ ನೀಡಲು ಅಗತ್ಯವಿರುವ ಔಷಧ ಹಾಗೂ ಇನ್ನಿತರೆ ವೈದ್ಯಕೀಯ ಸೌಲಭ್ಯಗಳನ್ನು ಸಕಾಲದಲ್ಲೇ ಉಗ್ರಾಣಕ್ಕೆ ಸರಬರಾಜು ಮಾಡಿಕೊಳ್ಳುವಂತೆ ನಿರ್ದೇಶನ ನೀಡಿದರು.

ಎಲ್ಲಾ ವಾರ್ಡ್‌ಗಳಿಗೂ ಭೇಟಿ ನೀಡಿ, ರೋಗಿಗಳಿಂದ ಕುಂದು ಕೊರತೆಗಳನ್ನು ಆಲಿಸಿದರು. ಸರ್ಕಾರದಿಂದ ಉಚಿತವಾಗಿ ದೊರೆಯುವ ಔಷಧ ಹಾಗೂ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ವಿತರಿಸಬೇಕು. ಕುಡಿಯುವ ನೀರು, ಆಸ್ಪತ್ರೆಯ ಸ್ವಚ್ಛತೆ ಬಗ್ಗೆ ವಿಶೇಷ ಗಮನ ಹರಿಸುವಂತೆ ವೈದ್ಯಾಧಿಕಾರಿಗಳಿಗೆ ನ್ಯಾಯಾಧೀಶರು ಸೂಚನೆ ನೀಡಿದರು. ಕಾನೂನು ನೆರವಿನ ಅಗತ್ಯವಿದ್ದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವಂತೆ ಸಾರ್ವಜನಿಕರಿಗೆ ನ್ಯಾಯಾಧೀಶರಾದ ಎಂ. ಶ್ರೀಧರ ಸಲಹೆ ನೀಡಿದರು.

ಭಾರತದಲ್ಲಿ ಮತ್ತೆ ಏರಿಕೆ ಹಾದಿಯಲ್ಲಿ ಕೊರೊನಾ

379 ಹೊಸ ಕೇಸ್ ಪತ್ತೆ, ಸಕ್ರಿಯ ಪ್ರಕರಣ 3,177ಕ್ಕೆ ಏರಿಕೆ

ನವದೆಹಲಿ: ಭಾರತದಲ್ಲಿ ಮಹಾಮಾರಿ ಕೊರೊನಾ ಮತ್ತೆ ಏರಿಕೆಯ ಹಾದಿಯನ್ನು ಹಿಡಿದಿದ್ದು. ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 379 ಹೊಸ ಪ್ರಕರಣಗಳು ಪತ್ತೆಯಾಗಿವೆ.

ಇದರೊಂದಿಗೆ ದೇಶದಲ್ಲಿ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 4,46,89,072ಕ್ಕೆ ಏರಿಕೆಯಾಗಿದೆ. ಅಲ್ಲದೇ, ಕೋವಿಡ್‌ನಿಂದ ಸಾವನ್ನಪ್ಪಿರುವವರ ಒಟ್ಟು ಸಂಖ್ಯೆ 5,30,776ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 3,177ಕ್ಕೆ ತಲುಪಿದೆ.. ಈ ನಡುವೆ ಒಟ್ಟು ಚೇತರಿಸಿಕೊಂಡವರ ಸಂಖ್ಯೆ 4,41,55,119ಕ್ಕೆ ತಲುಪಿದೆ. ಇನ್ನು ಭಾರತದಲ್ಲಿ ಒಂದೇ 36,368 ಮಂದಿಯನ್ನು ಕೊರೊನಾ ಪರೀಕ್ಷೆಗೊಳಪಡಿಸಲಾಗಿದ್ದು, ಈ 91,94,14,382 91,91,89,149 ಮಂದಿಯನ್ನು ಪರೀಕ್ಷೆಗೊಳಪಡಿಸಲಾಗಿದೆ ಎಂದು ಐಸಿಎಂಆರ್ ಮಾಹಿತಿ ನೀಡಿದೆ.

ಭಾರತದಲ್ಲಿ ಜನವರಿ 16ರಂದು ಸ್ವದೇಶಿ ನಿರ್ಮಿತ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಕೊರೊನಾ ಲಸಿಕೆಗೆ ಪ್ರಧಾನಿ ಮೋದಿಯವರು ಚಾಲನೆ ನೀಡಿದ್ದು, ತಮ್ಮ ಜೀವವನ್ನೇ ಪಣಕ್ಕಿಟ್ಟು ಕೊರೊನಾ ವಿರುದ್ಧ ಹೋರಾಟ ಮಾಡುತ್ತಿರುವ ಕೊರೊನಾ ವಾರಿಯರ್ಸ್‌ಗೆ ಲಸಿಕೆಯ ಮೊದಲ ಆದ್ಯತೆಯನ್ನು ನೀಡಲಾಗಿತ್ತು. ಬಳಿಕ 45 ವರ್ಷ ಮೇಲ್ಪಟ್ಟ ಎಲ್ಲಾ ನಾಗರಿಕರಿಗೆ ಲಸಿಕೆ ನೀಡಲಾಗಿತ್ತು ಮೇ 1ರಿಂದ 18–45 ವರ್ಷ ವಯಸ್ಸಿನ ಎಲ್ಲರಿಗೂ ಲಸಿಕೆ ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಮಾಹಿತಿ ನೀಡಿರುವ ಪ್ರಕಾರ ಲಸಿಕೆ ಅಭಿಯಾನ ಆರಂಭವಾಗಿ ಇಲ್ಲಿಯವರೆಗೂ 2,20,64,34,000 ಜನರಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ತಿಳಿಸಿದೆ.

ದಶಪಥ ರಸ್ತೆ: 6 ತಿಂಗಳಲ್ಲಿ 84 ಮಂದಿ ಬಲಿ

ಬೆಂಗಳೂರು: ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಸಂಚಾರ ಆರಂಭವಾಗಿ ಆರು ತಿಂಗಳಾಗಿದೆ. ಈ ಅವಧಿಯಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಿದ್ದು, ಕನಿಷ್ಠ 84 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಈ ಹೆದ್ದಾರಿಯಲ್ಲಿ ವಾಹನ ಸಂಚಾರ ಆರಂಭ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ 335ಕ್ಕೂ ಹೆಚ್ಚು ಅಪಘಾತ ಪ್ರಕರಣಗಳು ವರದಿ ಆಗಿವೆ. ಹೆದ್ದಾರಿ ಕಾಮಗಾರಿ ಅಂತಿಮ ಹಂತಕ್ಕೆ ಬಂದ ಡಿಸೆಂಬರ್, ಜನವರಿಯಲ್ಲೇ ಹೆಚ್ಚು ಅಪಘಾತಗಳು ಆಗಿವೆ. ಕುಂಬಳಗೋಡಿನಿಂದ ನಿಡಘಟ್ಟವರೆಗಿನ ರಾಮನಗರ ಜಿಲ್ಲಾ ವ್ಯಾಪ್ತಿಯ ಹೆದ್ದಾರಿಯಲ್ಲಿ 110ಕ್ಕೂ ಹೆಚ್ಚು ಆಕ್ಸಿಡೆಂಟ್ ಆಗಿದ್ದು, 41 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ 225 ಅಪಘಾತ ಉಂಟಾಗಿದ್ದು, 43 ಸವಾರರು ಬಲಿಯಾಗಿದ್ದಾರೆ. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ 30 ಅಪಘಾತ ಉಂಟಾಗಿದ್ದು, 8 ಮಂದಿ ಸಾವನ್ನಪ್ಪಿದ್ದಾರೆ.

ಬಿಡದಿ–ರಾಮನಗರ–ಚನ್ನಪಟ್ಟಣ ಬೈಪಾಸ್‌ಗಳಲ್ಲಿ ವಾಹನಗಳ ವೇಗ ಹೆಚ್ಚಿರುತ್ತದೆ. ಸರ್ವೀಸ್ ರಸ್ತೆಗಳಲ್ಲೂ ವಾಹನ ಓಡಾಟ ಹೆಚ್ಚಿದೆ. ಅತಿಯಾದ ವೇಗ ಮತ್ತು ಬೇಗ ತಲುಪಬೇಕೆಂಬ ಧಾವಂತವೇ ಅಪಘಾತ ಹೆಚ್ಚಾಗಲು ಕಾರಣವಾಗಿದೆ.

ನಿಧನ



ಡಾ.ಹೆಚ್.ಟಿ.ಪುಟ್ಟಸ್ವಾಮಿ

ಮೈಸೂರು, ಮಾ.9–ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಹಾಗೂ ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಹೆಚ್.ಟಿ.ಪುಟ್ಟಸ್ವಾಮಿ(67) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ವನಜಾಕ್ಷಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮಾ.10) ಮಧ್ಯಾಹ್ನ ಬಿಳಿಕೆರೆ ಹೋಬಳಿ ಮನುಗನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮತಗಟ್ಟೆಗಳಿಗೆ ನಿಯೋಜಿಸಿ

ಕುರಿತಂತೆ ವಿವಿಧ ಕಾರ್ಯಕ್ರಮಗಳಲ್ಲಿ ತಂಡ ಪಾಲ್ಗೊಳ್ಳಲಿದೆ. ನಗರಕ್ಕೆ ಬರುತ್ತಿದ್ದಂತೆ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿಕೊಂಡು ಸಮಾಲೋಚನೆ ನಡೆಸಿದ ಆಯೋಗ, ನಂತರ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಟ್ಟಿಗೆ ಚುನಾವಣೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಿತು. ಬಳಿಕ ಪ್ರಜಾಪ್ರಭುತ್ವದ ಒಳಗೊಳ್ಳುವಿಕೆ ಮತ್ತು ಸಮಗ್ರತೆ ವಿಷಯದ ಕುರಿತ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ನಾಳೆ ರಾಜ್ಯದ 34 ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಚುನಾವಣೆಯ ಪೂರ್ವಭಾವಿ ತಯಾರಿ ಕುರಿತು ಸಭೆ ನಡೆಸಲಿದೆ. ಸಂಜೆ ನಗರದ ಟಾಟಾ ಸಭಾಂಗಣದಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹಮ್ಮಿಕೊಳ್ಳಲಾಗಿರುವ ಮತದಾರರ ಜಾಗೃತಿ ಕುರಿತ ವಿಶೇಷ ವಸ್ತುಪ್ರದರ್ಶನ, ಏಕಥಾನ್ ಉದ್ಘಾಟಿಸಿದ ನಂತರ ಮತದಾರರ ಜಾಗೃತಿ ಮೂಡಿಸುವ ಎಲ್‌ಇಡಿ ವಾಹನಗಳಿಗೆ ಚಾಲನೆ ನೀಡಲಿದ್ದಾರೆ.

ನಂತರ ನಡೆಯುವ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಚುನಾವಣಾ ರಾಯಭಾರಿಗಳು, ವಿದ್ಯಾರ್ಥಿಗಳು, ದಿವ್ಯಾಂಗರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಸೇರಿದಂತೆ ಅನೇಕ ಗಣ್ಯರೊಂದಿಗೆ ಆಯೋಗದ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಶನಿವಾರ ಬೆಳಗ್ಗೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಧ್ಯಾಹ್ನ ನಂತರ ಮೂರು ದಿನಗಳ ತಮ್ಮ ಭೇಟಿಯ ಕುರಿತು ಪತ್ರಿಕಾಗೋಷ್ಠಿ ನಡೆಸಿಕೊಡಲಿದ್ದಾರೆ. ಅಂದು ಸಂಜೆ ವೇಳೆಗೆ ನವದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆ ಆರಂಭ

ಶಸ್ತ್ರಸಜ್ಜಿತ ಪೊಲೀಸ್ ಭದ್ರತೆಯೊಂದಿಗೆ ನಿಯೋಜಿತ ಆಯಾಯ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲಾಯಿತು. ಎಲ್ಲಾ ಕೇಂದ್ರಗಳಲ್ಲೂ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಪರೀಕ್ಷಾ ಪ್ರಕ್ರಿಯೆಗಳನ್ನು ಸೆರೆಹಿಡಿಯಲಾಗಿದೆ ಎಂದು ತಿಳಿಸಿದರು.

ಪರೀಕ್ಷಾ ಅಕ್ರಮಗಳನ್ನು ತಡೆಯಲು ರಚಿಸಿರುವ ವಿಚಕ್ಷಕ ದಳದ ಅಧಿಕಾರಿಗಳು ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದರು. ಎಲ್ಲಾ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿದ್ದರಿಂದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶಾತಿ ನಿರ್ಬಂಧಿಸಲಾಗಿತ್ತು.

ಈ ಬಾರಿ ಪರೀಕ್ಷೆಗೆ ಹಾಜರು ಮತ್ತು ಗೈರು ಹಾಜರು ಕುರಿತ ಮಾಹಿತಿಯನ್ನು ಆನ್‌ಲೈನ್ ಮೂಲಕವೇ ರವಾನಿಸಲಾಯಿತು. ಯಾವುದೇ ಗೊಂದಲವಿಲ್ಲದೆ ಮೊದಲ ದಿನದ ಕನ್ನಡ ಭಾಷೆ ಪತ್ರಿಕೆಯ ಪರೀಕ್ಷೆ ಸುಗಮವಾಗಿ ನಡೆಯಿತು ಎಂದು ಹೇಳಿದರು.

ಕನ್ನಡದ ಜೊತೆಗೆ ಇಂದು ಅರೇಬಿಕ್ ಭಾಷೆ ಪರೀಕ್ಷೆಯು ಎರಡು ಕೇಂದ್ರಗಳಲ್ಲಿ ನಡೆದಿದ್ದು, ನೋಂದಣಿಯಾಗಿದ್ದ ಎಲ್ಲಾ 6 ಮಂದಿ ವಿದ್ಯಾರ್ಥಿಗಳೂ ಪರೀಕ್ಷೆ ಬರೆದಿದ್ದಾರೆ. ಪ್ರತೀ ಕೇಂದ್ರದಲ್ಲೂ ಕುಡಿಯುವ ನೀರು, ಶೌಚಾಲಯ, ಅಂಗವಿಕಲರಿಗಾಗಿ ರ್‍ಯಾಂಪ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಪ್ರವೇಶ ಪತ್ರಗಳನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳದ ವಿದ್ಯಾರ್ಥಿಗಳಿಗೆ ಅವರ ಮೊಬೈಲ್ ನಂಬರ್‌ಗೆ ಬಂದಿದ್ದ ಮಾಹಿತಿ ಆಧರಿಸಿ ಆಯಾಯ ಸೆಂಟರ್‌ಗಳಲ್ಲೇ ಕಂಪ್ಯೂಟರ್ ಮೂಲಕ ಪ್ರಿಂಟ್ ತೆಗೆದುಕೊಟ್ಟು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಯಿತು ಎಂದು ತಿಳಿಸಿದರು.

ಪರೀಕ್ಷಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ: ದ್ವಿತೀಯ ವಾರ್ಷಿಕ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳಿಗೆ ತಲುಪಲು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದ್ದು, ಪ್ರವೇಶ ಪತ್ರ ತೋರಿಸಿ ವಿದ್ಯಾರ್ಥಿಗಳು ಪ್ರಯಾಣ ಮಾಡಿದರು ಎಂದು ಕೆಎಸ್‌ಆರ್‌ಟಿಸಿ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಕೈ ತೋರಿದ ಸ್ಥಳದಲ್ಲಿ ಬಸ್ ನಿಲ್ಲಿಸಿ ಹತ್ತಿಸಿಕೊಂಡು ಅವರು ಹೇಳಿದ ಕಡೆ ನಿಲುಗಡೆ ಕೊಟ್ಟು ಇಳಿಸಬೇಕೆಂದು ಎಲ್ಲಾ ಸಾರಿಗೆ ಬಸ್ ಚಾಲಕರು ಹಾಗೂ ನಿರ್ವಾಹಕರಿಗೆ ಸೂಚನೆ ನೀಡಲಾಗಿದ್ದು, ವಿದ್ಯಾರ್ಥಿಗಳು ಉಚಿತ ಪ್ರಯಾಣದ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೃತೀಯ ಲಿಂಗಿ ಮತದಾರರು

ಈಗಾಗಲೇ ಮತದಾರರ ಪಟ್ಟಿಯಲ್ಲಿ 210 ತೃತೀಯ ಲಿಂಗಿಗಳು ನೋಂದಣಿಯಾಗಿದ್ದು ಉಳಿದವರೂ ಆದಷ್ಟು ಬೇಗ ನೋಂದಾಯಿಸಿಕೊಂಡು ಮತದಾರರ ಚೀಟಿಯನ್ನು ಪಡೆದುಕೊಳ್ಳಬೇಕು ಎಂದರು. ಸಭೆಯಲ್ಲಿ ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ರೂಪ, ಜಿ.ಪಂ.ನ ಉಪ ಕಾರ್ಯದರ್ಶಿ ಕೃಷ್ಣಂ ರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಸವರಾಜು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ ಹರೀಶ್ ಒಳಗೊಂಡಂತೆ ತೃತೀಯ ಲಿಂಗಿ ಸ್ವಯಂ ಸೇವಾ ಸಂಸ್ಥೆಗಳಾದ ಆಶೋದಯ ಆಶ್ರಯ ಹಾಗೂ ಸೆವೆನ್ ರೈನ್ಬೋನ ತೃತೀಯ ಲಿಂಗಿಗಳು ಉಪಸ್ಥಿತರಿದ್ದರು.

ಸಿಎಂ ಬಸವರಾಜ ಬೊಮ್ಮಾಯಿ ಚಿಂತನೆ

ಸಮುದಾಯಕ್ಕೆ ಬೊಮ್ಮಾಯಿ ಸೇರಿದ್ದು, ಆ ಸಮುದಾಯ ಈ ಕ್ಷೇತ್ರದಲ್ಲಿ ಹೆಚ್ಚು ಮತದಾರರನ್ನು ಹೊಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಮುಖ್ಯಮಂತ್ರಿ ಹಾವೇರಿ ಜಿಲ್ಲೆಯಿಂದ ನೆರೆಯ ದಾವಣ ಗೆರೆಯ ಜಿಲ್ಲೆಗೆ ಕ್ಷೇತ್ರಾಂತರ ಮಾಡುತ್ತಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷೆಯ ವರದಿ ಬರುತ್ತಿದ್ದಂತೆ ಎಚ್ಚೆತ್ತಿರುವ ಮುಖ್ಯಮಂತ್ರಿ, ಇತ್ತೀಚೆಗೆ ದಾವಣಗೆರೆಯಲ್ಲಿ ಪಕ್ಷ ಮತ್ತು ಧಾರ್ಮಿಕ ಕಾರ್ಯಕ್ರಮದಲ್ಲಿ ಮೇಲಿಂದ ಮೇಲೆ ಭಾಗವಹಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ತವರು ಕ್ಷೇತ್ರ ಮದ್ದೂರು, ಸುರಕ್ಷಿತವಲ್ಲ ವೆಂದು ಬೆಂಗಳೂರಿನ ಚಾಮರಾಜಪೇಟೆ ಯಿಂದ ಸ್ಪರ್ಧಿಸಿದ್ದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದರೂ ಸೋಲಿನ ಭೀತಿಯ ಸುಳಿವರಿತು ನಂತರ ಬಾದಾಮಿ ವಿಧಾನಸಭಾ ಕ್ಷೇತ್ರದಿಂದ ಚುನಾವಣೆ ಕಣಕ್ಕಿಳಿದಿದ್ದರು.

ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ನಿರೀಕ್ಷೆಯಂತೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪರಾಭವಗೊಂಡು ಬಾದಾಮಿಯಲ್ಲಿ ಗೆದ್ದರೂ ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಾಗಲಿಲ್ಲ. ಕೃಷ್ಣ ಅವರಿಗೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಬೊಮ್ಮಾಯಿ ಅವರು ತಮ್ಮ ತವರು ಕ್ಷೇತ್ರ ಬಿಟ್ಟು ಕೃಷ್ಣ, ಸಿದ್ದರಾಮಯ್ಯರ ಹಾದಿ ತುಳಿಯುತ್ತಿದ್ದಾರೆ.

ಮಾ.26ರಂದು ಮೈಸೂರಲ್ಲಿ ಜೆಡಿಎಸ್ ಪಂಚರತ್ನ ಯಾತ್ರೆ ಸಮಾರೋಪ

● ಮೈಸೂರು ಹೊರವಲಯದ ಸರ್ಕಾರಿ ಉತ್ತನಹಳ್ಳಿ ಬಳಿ 100 ಎಕರೆ ಪ್ರದೇಶದಲ್ಲಿ ಸಮಾವೇಶ ● 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಸೇರುವ ನಿರೀಕ್ಷೆ ● ವೇದಿಕೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ನಂತರ ಶಾಸಕ ಸಾ.ರಾ.ಮಹೇಶ್ ವಿವರಣೆ



ಮೈಸೂರು, ಮಾ.9(ಎಂಟಿವೈ)– ರಾಜ್ಯದಾದ್ಯಂತ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿರುವ ಪಂಚರತ್ನ ಯಾತ್ರೆಗೆ ಎಲ್ಲೆಡೆ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದ್ದು, ಮಾ.26ರಂದು ಮೈಸೂರಲ್ಲಿ ಯಾತ್ರೆಯ ಸಮಾರೋಪ ಸಮಾರಂಭ ನಡೆಯಲಿದೆ. ಇದರಲ್ಲಿ 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಸೇರಲಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ಮೈಸೂರು ತಾಲೂಕಿನ ಸರ್ಕಾರಿ ಉತ್ತನಹಳ್ಳಿ ಬಳಿ ಪಂಚರತ್ನ ಯಾತ್ರೆ ಸಮಾವೇಶದ ಸಮಾರೋಪ ಸಮಾರಂಭದ ವೇದಿಕೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ರಾಜ್ಯದಾದ್ಯಂತ ಯಾತ್ರೆ ಸಂಚರಿಸಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರ ಕೈಹಿಡಿಯಲು ಜನತೆ ಉತ್ಸುಕರಾಗಿದ್ದಾರೆ. ನಿರೀಕ್ಷೆಗೂ ಮೀರಿದ ಜನ ಬೆಂಬಲ ದೊರೆತಿದೆ. ಇದೀಗ ಯಾತ್ರೆಯ ಸಮಾರೋಪ ಸಮಾರಂಭಕ್ಕೆ ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿ 100 ಎಕರೆ ಪ್ರದೇಶದಲ್ಲಿ ವ್ಯವಸ್ಥೆಯಾಗುತ್ತಿದೆ. ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯದಾದ್ಯಂತ 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು. ಸಮಾರೋಪ ಸಮಾರಂಭದ ಯಶಸ್ಸಿಗಾಗಿ ಈಗಾಗಲೇ ಜಿ.ಟಿ.ದೇವೇಗೌಡ, ಸಿ.ಎಸ್.ಪುಟ್ಟರಾಜು ಮಾರ್ಗದರ್ಶನದಲ್ಲಿ ಕೆ.ಮಹದೇವು, ಅಶ್ವಿನ್‌ಕುಮಾರ್ ಸೇರಿದಂತೆ ಎಲ್ಲ ಹಿರಿಯ ಮುಖಂಡರೊಂದಿಗೆ ಚರ್ಚಿಸಲಾಗಿದೆ. ಪಂಚರತ್ನ ಯಾತ್ರೆ ಸಮಾರೋಪ ಮೈಸೂರಿನಲ್ಲಿ ಆಗಬೇಕು ಎಂದು ಕುಮಾರಸ್ವಾಮಿ ಅವರಲ್ಲಿ ಮನವಿ ಮಾಡಿದ್ದೆವು. ಅದಕ್ಕೆ ಅವರು ಒಪ್ಪಿಗೆ ಸೂಚಿಸಿದ್ದು, ಸಿದ್ಧತಾ ಕಾರ್ಯ ಆರಂಭಿಸಿದ್ದೇವೆ. ಎರಡು ದಿನಗಳ ಹಿಂದೆ ಕುಮಾರಸ್ವಾಮಿ ಅವರು ಈ ಸ್ಥಳ ನಿಗದಿಪಡಿಸಿದ್ದಾರೆ. ಹಾಗಾಗಿ ಇಲ್ಲಿ ವೇದಿಕೆ ನಿರ್ಮಾಣ, ಇನ್ನಿತರೆ ವ್ಯವಸ್ಥೆಗೆ ಗುದ್ದಲಿ ಪೂಜೆ ಮಾಡಿದ್ದೇವೆ ಎಂದರು.

ಜೆಡಿಎಸ್‌ನ ಕೆಲ ಶಾಸಕರು ಕಾಂಗ್ರೆಸ್, ಬಿಜೆಪಿ ಸೇರಲು ಸಿದ್ಧರಾಗಿದ್ದಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಮತ್ತು ಬಿಜೆಪಿಯವರು ಹೇಳುತ್ತಿದ್ದಾರೆ ಅಷ್ಟೆ. ಆದರೆ ಈಗಾಗಲೇ ಆ ಎರಡು ಪಕ್ಷದ ಅನೇಕ ನಾಯಕರು ಜೆಡಿಎಸ್‌ಗೆ ಬಂದಿದ್ದಾರೆ. ಕೆಲ ಹಾಲಿ ಶಾಸಕರು ಬರಲು ಮುಂದಾಗಿದ್ದಾರೆ. ಈ ಸಂಬಂಧ ಕುಮಾರಸ್ವಾಮಿ ಅವರ ಬಳಿಯೂ ಚರ್ಚೆ ನಡೆಸಿದ್ದಾರೆ. ಬಲಿಷ್ಠ ಕಾರ್ಯಕರ್ತರ ಪಡೆ ಇರುವವರೆಗೂ ಜೆಡಿಎಸ್‌ಗೆ ಯಾವುದೇ ಸಮಸ್ಯೆ ಇಲ್ಲ. ಯಾರೇ ಹೋದರೂ ಪಕ್ಷಕ್ಕೆ ಹಾನಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ, ನಂಜನಗೂಡು, ಚಾಮರಾಜ, ನರಸಿಂಹರಾಜ ಒಳಗೊಂಡಂತೆ ಮಾರ್ಚ್ 26ರ ನಂತರ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಸಿ.ಎಸ್. ಪುಟ್ಟರಾಜು, ಕೆ.ಮಹದೇವ್, ಎಂ.ಅಶ್ವಿನ್ ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ನಗರಾಧ್ಯಕ್ಷ ಕೆ.ಟಿ. ಚಲುವೇಗೌಡ, ಕೆ.ಆರ್.ಕ್ಷೇತ್ರದ ಪಕ್ಷದ ಅಭ್ಯರ್ಥಿ ಕೆ.ವಿ.ಮಲ್ಲೇಶ್, ರಾಮು, ಪಾಲಿಕೆ ಸದಸ್ಯೆ ಪ್ರೇಮಾಶಂಕರೇಗೌಡ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪ್ರಮುಖ ಘಟ್ಟ; ಶ್ರದ್ಧೆಯಿಂದ ವ್ಯಾಸಂಗ ಮಾಡಿದರೆ ಮುಂದಿನ ಶೈಕ್ಷಣಿಕ ಹಾದಿ ಸುಗಮ

ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಸಮಾಜ ಕಲ್ಯಾಣಾಧಿಕಾರಿ ಕಿವಿಮಾತು



ಮೈಸೂರು, ಮಾ.9(ಎಂಟಿವೈ)– ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು, ನಿರ್ದಿಷ್ಟ ಗುರಿಯೊಂದಿಗೆ ಚೆನ್ನಾಗಿ ಓದಿ ಎಲ್ಲರೂ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಬಿ. ಮಾಲತಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಹತ್ತನೇ ತರಗತಿ ಪ್ರಮುಖ ಘಟ್ಟವಾಗಿದೆ. ಈ ವೇಳೆ ಶ್ರದ್ಧೆಯಿಂದ ಅಧ್ಯಯನ ಮಾಡಿದರೆ, ಮುಂದಿನ ಶೈಕ್ಷಣಿಕ ಹಾದಿ ಸುಗಮವಾಗುತ್ತದೆ. ವಿದ್ಯಾರ್ಥಿಗಳ ಜೀವನದ ದಿಕ್ಕನ್ನು ಬದಲಿಸುವ ಶಕ್ತಿ ಹತ್ತನೇ ತರಗತಿಯಲ್ಲಿ ದೊರಕಲಿದೆ. ಈ ಅವಧಿಯಲ್ಲಿ ಯಶಸ್ಸು ಗಳಿಸಿದರೆ, ಮುಂದಿನ ಎಲ್ಲಾ ಪರೀಕ್ಷೆಗಳನ್ನು ಸುಲಭವಾಗಿ ಜಯಿಸಬಹುದು ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎನ್. ಮುನಿರಾಜು ಮಾತನಾಡಿ, ಸರ್ಕಾರ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದು, ಈ ಸೌಲಭ್ಯ ಬಳಸಿಕೊಂಡು ಏಳ್ಗೆ ಸಾಧಿಸಬೇಕು. ಚೆನ್ನಾಗಿ ಓದಿ ನೂರಕ್ಕೆ ನೂರರಷ್ಟು ಅಂಕಗಳನ್ನು ಗಳಿಸುವ ಮೂಲಕ ನಿಮ್ಮ ತಂದೆ ತಾಯಿಗೆ, ಹಾಸ್ಟೆಲ್‌ಗೆ ಒಳ್ಳೆಯ ಹೆಸರನ್ನು ತರಬೇಕು. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ಕಲ್ಪಿಸಲಾಗಿದೆ. ವಾರ್ಡನ್ ಗಾಯತ್ರಿ, ಈ ಹಾಸ್ಟೆಲ್‌ನಲ್ಲಿ ಹಲವು ಸೌಲಭ್ಯ ಒದಗಿಸಿ, ಮಾದರಿ ಹಾಸ್ಟೆಲ್ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಆರ್.ಎಸ್.ಸಿದ್ದಲಿಂಗು, ಸಂದೀಪ್, ಅಮ್ಮರಾಮಚಂದ್ರ, ಸಂತೋಷ್ ಸಿಂಧೆ, ಮುಖ್ಯಶಿಕ್ಷಕರಾದ ಅನಿತಾ, ಆನಂದ್, ಶಿವಮಲ್ಲಯ್ಯ, ಚಿಕ್ಕೀರಯ್ಯ, ವಾರ್ಡನ್ ಗಾಯತ್ರಿ ಎಸ್., ಗುಂಡ್ಲುಪೇಟೆ ಮಹೇಶ್, ಶೈಲಶ್ರೀ ಹಾಗೂ ನಿಲಯಪಾಲಕರು ಹಾಜರಿದ್ದರು. ಇದೇ ವೇಳೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜೆಡಿಎಸ್‌ಗೆ ನೇಮಕ



ಮೈಸೂರು, ಮಾ.9– ಮೈಸೂರು ನಗರ (ಜಿಲ್ಲೆ) ಜಾತ್ಯತೀತ ಜನತಾದಳ ಸಂಘಟನಾ ಕಾರ್ಯದರ್ಶಿಯಾಗಿ ಜೆ. ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.



ದೇವರಾಜು

ಮೈಸೂರು, ಮಾ.9– ಮೈಸೂರು ನಗರ (ಜಿಲ್ಲೆ) ಜಾತ್ಯತೀತ ಜನತಾದಳದ ಉಪಾಧ್ಯಕ್ಷರಾಗಿ ದೇವರಾಜು ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಏ.1 ರಿಂದ ಬೇಸಿಗೆ ಮೇಳ ಆರಂಭ

ಮೈಸೂರು, ಮಾ.9–ಏ.1 ರಿಂದ ಬೇಸಿಗೆ ಮೇಳವನ್ನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಬಾಡಿಗೆ ಆಧಾರದ ಮೇರೆಗೆ ನಡೆಸಲು ಉದ್ದೇಶಿಸಲಾಗಿದ್ದು, ಮೇಳ ಆಯೋಜಿಸಲು ಆಸಕ್ತಿ ಉಳ್ಳವರು ಮಾ.15ರೊಳಗೆ ಪ್ರಾಧಿಕಾರದ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ದೂ.ಸಂ:0821–2444265 ಅನ್ನು ಸಂಪರ್ಕಿಸಬಹುದು ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಮಹಾತ್ಮರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ

ಡಿಡಿಪಿಯು ನಾಗಮಲ್ಲೇಶ್ ಸಲಹೆ

ಮೈಸೂರು, ಮಾ.9(ಎಸ್‌ಪಿಎನ್)– ಸಾಧಕರು, ಮಹಾತ್ಮರ ಜೀವನ ಚರಿತ್ರೆಗಳ ಕುರಿತು ಕಾಲೇಜು ಹಂತದಲ್ಲೇ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು ಎಂದು ಡಿಡಿಪಿಯು ನಾಗಮಲ್ಲೇಶ್ ಸಲಹೆ ನೀಡಿದರು.

ಮೈಸೂರು ದೇವರಾಜ ಬಾಲಕಿಯರ ಸರ್ಕಾರಿ ಪಿಯು ಕಾಲೇಜು ಆವರಣದಲ್ಲಿ ಕಾಲೇಜು ವಾರ್ಷಿಕ ಸಂಚಿಕೆ 'ಬೆಳ್ಳಿಕಟ್ಟೆ ಚಿಗುರು' ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಪಿಯು ಹಂತದ ವಿದ್ಯಾರ್ಥಿಗಳ ಮನದಾಳದ ಮಾತು, ಅವರ ಪ್ರತಿಭಾ ಅನಾವರಣಕ್ಕೆ ಆಯಾಯ ಕಾಲೇಜುಗಳಲ್ಲಿ ಹೊರತರುವ ವಾರ್ಷಿಕ ಸಂಚಿಕೆಗಳು ಉತ್ತಮ ವೇದಿಕೆಯಾಗಿವೆ. ಈ ಪುಸ್ತಕದಲ್ಲಿ ವಿದ್ಯಾರ್ಥಿಗಳ ಸಾಧನೆ, ಜ್ಞಾನವಾಹಿನಿಗೆ ಹತ್ತಿರ ಬರಹಗಳನ್ನು ಪರಿಚಯಿಸಿರುವುದು ಉತ್ತಮ ಬೆಳವಣಿಗೆ ಎಂದರಲ್ಲದೆ, ಇದರ ಹಿಂದೆ ಉಪನ್ಯಾಸಕರ ಶ್ರಮವಿದೆ ಎಂದು ತಿಳಿಸಿದರು.

ಕಾಲೇಜು ಪ್ರಾಂಶುಪಾಲ ಕಾಡ್ನೂರು ಶಿವೇಗೌಡ ಮಾತನಾಡಿ, ನಮ್ಮ ಕಾಲೇಜಿನ ವಾರ್ಷಿಕ ಸಂಚಿಕೆ 'ಬೆಳ್ಳಿಕಟ್ಟೆ ಚಿಗುರು' ಪುಸ್ತಕದಲ್ಲಿ ನಮ್ಮ ವಿದ್ಯಾರ್ಥಿಗಳ ಬೌದ್ಧಿಕ ಗುಣಮಟ್ಟ ಇದರಲ್ಲಿ ಅನಾವರಣಗೊಂಡಿದೆ ಎಂದರು.

ಈ ವೇಳೆ ಮೈಸೂರು ನಗರ ಪಾಲಿಕೆ ಸದಸ್ಯೆ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಪ್ರಮೀಳಾ ಎಂ.ಭರತ್, ಮಾತನಾಡಿದರು. ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ವಿಘ್ನೇಶ್ವರ ಭಟ್ಟ, ರಾಜಗೋಪಾಲ್ ಹಾಗೂ ಶ್ರೀನಿವಾಸ್, ಆಶೀರ್ವಾದ ಹೋಟೆಲ್ ವ್ಯವಸ್ಥಾಪಕ ಸುಬ್ರಹ್ಮಣ್ಯ, ಚರಣ, ಉಪನ್ಯಾಸಕರಾದ ಸುನಿತಾ, ಸಬೀತಾ, ನಾಗೇಶ್, ಡಾ.ವಿ.ಸುಶೀಲಾ ಭಟ್ಟ, ಜಗದೀಶ್, ಆನಂದಕುಮಾರ್, ಡಾ.ಸ್ವಾಮಿಗೌಡ, ಶ್ಯಾಮಲಾ, ಪುಷ್ಪಾಲತಾ, ಪ್ರಭಾವತಿ, ಉಷಾ, ಮೋನಿಕಾ, ಸುಷ್ಮಾ ಹಾಗೂ ಅಖಿಲ ಕರ್ನಾಟಕ ಪಿಯು ಉಪನ್ಯಾಸಕರ ಹಿತರಕ್ಷಣಾ ಸಂಘದ ಅಧ್ಯಕ್ಷ ಕೋಟೆ ವೆಂಕಟೇಶ್, ಶಿವಮಲ್ಲಪ್ಪ ಮುಂತಾದವರಿದ್ದರು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿವಿ ಮೊಹಲ್ಲಾದಲ್ಲಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ನಡೆದ ಸಮಾರಂಭದಲ್ಲಿ ವಾರ್ಡನ್ ಗಾಯತ್ರಿ ಅವರನ್ನು ಶೈಲಶ್ರೀ ಹಾಗೂ ಹಾಸ್ಟೆಲ್ ಸಿಬ್ಬಂದಿ ಅಭಿನಂದಿಸಿದರು.

ಮಾ.12, ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು: ಮಾ.12 ರಂದು ಮೈಸೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ನಾರಾಯಣಶಾಸ್ತ್ರಿ ರಸ್ತೆಯ ಮಹಾರಾಣಿ ಸರ್ಕಾರಿ ಪಿ.ಯು. ಕಾಲೇಜು ಕೇಂದ್ರದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಯಲಿರುವ ವಸತಿ ಶಾಲೆಗಳ ಪ್ರವೇಶಾತಿ ಪ್ರವೇಶ ಪರೀಕ್ಷೆಯ ಸಂಬಂಧ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಕಲಂ 144 ಸಿ.ಆರ್.ಪಿ.ಸಿ. ಅನ್ವಯ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ನಿಷೇಧಾಜ್ಞೆಯನ್ನು ಜಾರಿಗೊಳಿಸಿದ್ದಾರೆ.

ಸಚಿವ ಸೋಮಣ್ಣ ಬಿಜೆಪಿಯಲ್ಲೇ ಉಳಿಸಿಕೊಂಡರೆ 150 ಸ್ಥಾನ ಗೆಲ್ಲುವ ಉದ್ದೇಶ ಸಾಕಾರಗೊಳ್ಳಲಿದೆ

ಮೈಸೂರಲ್ಲಿ ಸಚಿವ ವಿ.ಸೋಮಣ್ಣ ಅಭಿಮಾನಿಗಳ ಒಕ್ಕೊರಲ ಆಗ್ರಹ



ಮೈಸೂರು, ಮಾ.9(ಎಂಟಿವೈ)– ಪಕ್ಷದ ಮುಖಂಡರೊಂದಿಗೆ ಮುನಿಸಿಕೊಂಡಿರುವ ಸಚಿವ ವಿ.ಸೋಮಣ್ಣ ಅವರನ್ನು ಬಿಜೆಪಿಯಲ್ಲೇ ಉಳಿಸಿಕೊಂಡರೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ 150 ಸ್ಥಾನ ಲಭಿಸಲಿದೆ ಎಂದು ಸಚಿವ ವಿ.ಸೋಮಣ್ಣ ಅಭಿಮಾನಿಗಳು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.

ಸಚಿವ ವಿ.ಸೋಮಣ್ಣ ಬಿಜೆಪಿ ತೊರೆದು ಕಾಂಗ್ರೆಸ್ ಸೇರಲಿದ್ದಾರೆ ಎಂಬ ವದಂತಿ ಹಿನ್ನೆಲೆಯಲ್ಲಿ ಮೈಸೂರಿನ ವಿದ್ಯಾರಣ್ಯಪುರಂನ ಕಲ್ಯಾಣ ಮಂಟಪವೊಂದರಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ವಿ.ಸೋಮಣ್ಣ ಅಭಿಮಾನಿಗಳು ಸಭೆ ಸೇರಿ, ಚರ್ಚಿಸಿದರಲ್ಲದೆ, 'ನಿಮ್ಮೊಂದಿಗೆ ನಾವಿದ್ದೇವೆ' ಸಂದೇಶ ರವಾನಿಸಿದರಲ್ಲದೆ, ಸೋಮಣ್ಣ ಅವರನ್ನು ಬಿಜೆಪಿಯಲ್ಲೇ ಉಳಿಸಿಕೊಳ್ಳುವಂತೆ ಆಗ್ರಹಿಸಿದರು. ಭಿತ್ತಿಪತ್ರಗಳನ್ನು ಪ್ರದರ್ಶಿಸಿ, ಘೋಷಣೆಗಳನ್ನು ಕೂಗಿದರು.

ಸಭೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ ಮಾತನಾಡಿ, ಸಚಿವ ವಿ. ಸೋಮಣ್ಣ ಅವರಿಗೆ ಬೆನ್ನೆಲುಬಾಗಿರುವ ಲಕ್ಷಾಂತರ ಕಾರ್ಯಕರ್ತರು, ಅಭಿಮಾನಿಗಳು ರಾಜ್ಯದ ಎಲ್ಲೆಡೆ ಇದ್ದಾರೆ. ಅವರನ್ನು ಕಡೆಗಣಿಸಿದರೆ ಪಕ್ಷಕ್ಕೆ ದೊಡ್ಡ ಪ್ರಮಾಣದ ನಷ್ಟವುಂಟಾಗುತ್ತದೆ. ಇಂತಹ ನಾಯಕರು ಪಕ್ಷ ತೊರೆಯುವಂತೆ ಮಾಡಬಾರದು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸಂಘಟನೆ ದೃಷ್ಟಿಯಿಂದ ಇಂತಹ ಕ್ರಿಯಾಶೀಲ ವ್ಯಕ್ತಿತ್ವವನ್ನು ಬಳಸಿಕೊಳ್ಳಬೇಕು. ಪಕ್ಷ ಸಂಘಟನೆಯಲ್ಲಿ ಅವರಿಗಿರುವ ಅನುಭವ ಉಪಯೋಗಿಸಿಕೊಂಡು 150 ಸ್ಥಾನ ಗೆಲ್ಲುವ ಗುರಿಯನ್ನು ಸಾಕಾರಗೊಳಿಸಿಕೊಳ್ಳಬೇಕು. ಇಲ್ಲವಾದರೆ ಮೈಸೂರು, ಚಾಮರಾಜನಗರ ಮಾತ್ರವಲ್ಲದೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬಿಜೆಪಿಗೆ ಹಿನ್ನಡೆಯಾಗುತ್ತದೆ ಎಂದು ಎಚ್ಚರಿಸಿದರು.

ಉದ್ಯಮಿ ಎಸ್.ಎಂ.ಶಿವಪ್ರಕಾಶ್, ಹನೂರು ಕ್ಷೇತ್ರದ ಬಿಜೆಪಿ ಮುಖಂಡ ನಿಶಾಂತ್ ಮಾತನಾಡಿ, ಸೋಮಣ್ಣ ಕ್ರಿಯಾಶೀಲ ನಾಯಕ. ಅವರು ಉಸ್ತುವಾರಿಯಾದ ನಂತರ ಚಾಮರಾಜನಗರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳಾಗಿವೆ ಎಂದರು.

ಸಭೆಯಲ್ಲಿ ರೈತ ಮುಖಂಡ ಮಲ್ಲೇಶ್ ಸಮಾವೇಶದ ನಿರ್ಣಯ ಮಂಡಿಸಿದರು. ಮುಖಂಡರಾದ ಪುಟ್ಟಬುದ್ಧಿ, ಬಾಲರಾಜ್, ಜೋಗಿಮಂಜು, ಸಚಿವ ವಿ.ಸೋಮಣ್ಣ ಪರ ಬ್ಯಾಟ್ ಬೀಸಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ನೂರಾರು ಅಭಿಮಾನಿಗಳು ಸೋಮಣ್ಣ ಬಿಜೆಪಿಯಲ್ಲೇ ಇರಬೇಕು. ಅವರಿಗೆ ಉನ್ನತ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದರೆ, ಕೆಲವು ಅಭಿಮಾನಿಗಳು ಸೋಮಣ್ಣ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯೂ ಆಗುತ್ತಾರೆ ಎಂದು ಘೋಷಣೆ ಕೂಗಿ, ಅಭಿಮಾನ ಮೆರೆದರು.

ಈ ಸಂದರ್ಭದಲ್ಲಿ ಉಪ್ಪಾರ ಪೀಠದ ಶ್ರೀ ಮಂಜುನಾಥ ಸ್ವಾಮೀಜಿ, ಚಾಮುಲ್ ನಿರ್ದೇಶಕ ಬಸವರಾಜ್, ಬಿಜೆಪಿ ಮುಖಂಡರಾದ ದೊಡ್ಡಹುಂಡಿ ಜಗದೀಶ್, ಸೋಮನಾಯಕ, ಉದ್ಯಮಿ ಯು.ಎಸ್.ಶೇಖರ್, ಕೊಡಸೋಗೆ ಶಿವಬಸಪ್ಪ, ನಿಟ್ರೆ ನಾಗರಾಜಪ್ಪ, ಚಾಮರಾಜನಗರ ಎಪಿಎಂಸಿ ಅಧ್ಯಕ್ಷ ರವಿ ಕಮ್ಮರಹಳ್ಳಿ, ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಕೆ.ಆರ್.ಲೋಕೇಶ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುಂದರಪ್ಪ, ರಾಜಶೇಖರ್, ಶೈಲಜಾ ಮಲ್ಲೇಶ್, ಪಾಪಣ್ಣ, ಅರಕಲವಾಡಿ ಲಿಂಗಪ್ಪ, ವೆಂಕಟರಮಣಸ್ವಾಮಿ, ನಿರಂಜನಬಾಬು ಇದ್ದರು.

ಕಾಂಗ್ರೆಸ್ ಭದ್ರಕೋಟೆ ತಲಕಾಡಲ್ಲಿ ಪಕ್ಷಾಂತರ ಪರ್ವ

ಪಂಚರತ್ನ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ನೂರಾರು ಮಂದಿ 'ಕೈ' ತೊರೆದು ಜೆಡಿಎಸ್ ಸೇರ್ಪಡೆ

ತಿ.ನರಸೀಪುರ, ಮಾ.9– ಕಾಂಗ್ರೆಸ್ ಭದ್ರಕೋಟೆ ತಲಕಾಡು ಹೋಬಳಿಯಲ್ಲಿ ಪಕ್ಷಾಂತರ ಪರ್ವ ಆರಂಭವಾಗಿದ್ದು, ಗುರುವಾರ ತಲಕಾಡಿನಲ್ಲಿ ಮಹಿಳೆಯರು ಸೇರಿದಂತೆ ನೂರಾರು ಕಾರ್ಯಕರ್ತರು ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು.

ತಲಕಾಡು ಹೋಬಳಿ ಮೊದಲಿನಿಂದ ಕಾಂಗ್ರೆಸ್ ಭದ್ರಕೋಟೆ. ಇಲ್ಲಿನ ಮತದಾರರು ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಹೆಚ್ಚಿನ ಲೀಡ್ ಕೊಡುತ್ತಾ ಬಂದಿದ್ದಾರೆ. ಆದರೆ ಇತ್ತೀಚಿನ ರಾಜಕೀಯ ಬೆಳವಣಿಗೆಯಿಂದ ಬೇಸತ್ತಿರುವ ನೂರಾರು ಕಾರ್ಯಕರ್ತರು ಸಾಮೂಹಿಕವಾಗಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಯಾಗುತ್ತಿದ್ದು, ಇದು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮುಳುವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಇಲ್ಲಿನ ಶಿವಪಾರ್ವತಿ ಕಲ್ಯಾಣ ಮಂಟಪದಲ್ಲಿ ನಡೆದ ಜೆಡಿಎಸ್‌ನ ಪಂಚರತ್ನ ರಥಯಾತ್ರೆ ಪೂರ್ವಭಾವಿ ಸಭೆಯಲ್ಲಿ ವಡೆಯಾಂದಹಳ್ಳಿ ಹಾಗೂ ತಲಕಾಡಿನ ನೂರಾರು ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಯಾದರು. ತಲಕಾಡಿನ ಕಾಂಗ್ರೆಸ್ ಮುಖಂಡರಾದ ಸತೀಶ್ ನಾಯಕ ಹಾಗೂ ಹಸ್ತಿಕೇರಿ ನಾಗರಾಜು ಕಾರ್ಯಕ್ರಮದಲ್ಲಿ ಕಾಣಿಸಿಕೊಂಡು ಕುತೂಹಲ ಮೂಡಿಸಿದರು.

ಮುಖಂಡ ಸತೀಶ್‌ನಾಯಕ ಮಾತನಾಡಿ, ಈಗಷ್ಟೆ ಪಕ್ಷಾಂತರ ಪರ್ವ ಆರಂಭಗೊಂಡಿದೆ. ಮುಂದಿನ ದಿನಗಳಲ್ಲಿ ನಿರೀಕ್ಷೆಗೂ ಮೀರಿ ನಡೆಯಲಿದ್ದು, ಕ್ಷೇತ್ರದಲ್ಲಿ ಜೆಡಿಎಸ್ ಶಕ್ತಿ ಅನಾವರಣಗೊಳ್ಳಲಿದೆ. ಕ್ಷೇತ್ರದ ಸಹೃದಯಿ, ಜನಪರ ಕಾಳಜಿಯುಳ್ಳ ಶಾಸಕ ಅಶ್ವಿನ್‌ಕುಮಾರ್ ಸರಳ ಸಜ್ಜನಿಕೆ ಮೆಚ್ಚಿ ಕಾಂಗ್ರೆಸ್ ಕಾರ್ಯಕರ್ತರು ಸ್ವಪ್ರೇರಣೆಯಿಂದ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ನಾವು ಯಾರನ್ನೂ ಬಲವಂತವಾಗಿ ಕರೆ ತಂದಿಲ್ಲ. ಮುಂದಿನ ದಿನಗಳಲ್ಲಿ ಪಕ್ಷ ಸೇರುವವರ ಸಂಖ್ಯೆ ಊಹಿಸಲೂ ಸಾಧ್ಯವಿಲ್ಲ ಎಂದರು.



ಮುಖಂಡ ಹಸ್ತಿಕೇರಿ ನಾಗರಾಜು ಮಾತನಾಡಿ, ಶಾಸಕರ ಜನಪರ ಕಾಳಜಿ ಮೆಚ್ಚಿ ಪಕ್ಷ ಸೇರ್ಪಡೆಗೊಂಡಿದ್ದೇನೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಕ್ಷೇತ್ರದಲ್ಲಿ ಮತ್ತೊಮ್ಮೆ ಅಶ್ವಿನ್ ಕುಮಾರ್ ಅವರನ್ನು ಗೆಲ್ಲಿಸಿ ಮಂತ್ರಿ ಮಾಡಬೇಕಿದೆ ಎಂದರು.

ಶಾಸಕ ಅಶ್ವಿನ್ ಕುಮಾರ್ ಮಾತನಾಡಿ, ನನ್ನ ಮೇಲೆ ವಿಶ್ವಾಸವಿಟ್ಟು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡಿರುವ ಕಾರ್ಯಕರ್ತರ ಭಾವನೆಗೆ ಸ್ಪಂದಿಸುತ್ತೇನೆ. ನನ್ನ ನಂಬಿ ಬಂದಿರುವ ಯಾರ ಮನಸ್ಸಿಗೂ ನೋವು ಮಾಡದೇ, ಅವರ ಭಾವನೆಗೆ ಚ್ಯುತಿ ತರದೇ ಪಕ್ಷದಲ್ಲಿ ಗೌರವಯುತವಾಗಿ ನಡೆಸಿಕೊಳ್ಳುತ್ತೇನೆ ಎಂದರು.

ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡು ಕಾರ್ಯಕ್ರಮಗಳಿಂದ ದೂರ ಉಳಿದಿರುವ ಮಾಜಿ ಜಿಪಂ ಸದಸ್ಯ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ಎಚ್.ಮಂಜುನಾಥ್ ಅವರನ್ನು ನೆನಪಿಸಿಕೊಂಡ ಶಾಸಕರು, ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ಸೇವೆ ಸಲ್ಲಿಸುತ್ತಿದ್ದ ಮಂಜುನಾಥ್ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಲಾಗಿತ್ತು. ಅಂದಿನಿಂದ ಮಂಜು ಪಕ್ಷದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೂ, ಅವರ ಮತ್ತು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರ ನಡುವೆ ಮುಸುಕಿನ ಗುದ್ದಾಟ ನಡೆಯುತ್ತಿತ್ತು. ಅಂತಿಮವಾಗಿ ಮಂಜು ಕಾಂಗ್ರೆಸ್ ಕಾರ್ಯಕ್ರಮದಿಂದ ದೂರ ಉಳಿದರು. ಇಂದು ನಡೆದ ಪಂಚರತ್ನ ರಥಯಾತ್ರೆ ಪೂರ್ವಭಾವಿ ಸಭೆಯಲ್ಲಿ ಶಾಸಕರು ಮಂಜುನಾಥ್ ಹೆಸರನ್ನು ಪ್ರಸ್ತಾಪಿಸಿ ಮಂಜಣ್ಣನವರ ಮಾರ್ಗದರ್ಶನದಲ್ಲಿ ಪಕ್ಷ ಸೇರ್ಪಡೆ ಸಂತಸ ತಂದಿದೆ ಎಂದರು.

ಇದೇ ವೇಳೆ ತಲಕಾಡು ಕಾಂಗ್ರೆಸ್‌ನ ಹಿರಿಯ ಮುಖಂಡ ಹಾಗೂ ನಾಯಕ ಸಮಾಜದ ಯಜಮಾನ ರಾಜಣ್ಣ, ಸತೀಶ್ ನಾಯಕ್,ಹಸ್ತಿಕೇರಿ ನಾಗರಾಜು, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಕುಮಾರ್ ನಾಯಕ್, ಗ್ರಾಪಂ ಸದಸ್ಯ ರಘು ನಾಯಕ್ ಸೇರಿದಂತೆ ನೂರಾರು ಬೆಂಬಲಿಗರು ಕಾಂಗ್ರೆಸ್ ಪಕ್ಷವನ್ನು ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಕ್ಷೇತ್ರ ಅಧ್ಯಕ್ಷ ಸಿಬಿ ಹುಂಡಿ ಚಿನ್ನಸ್ವಾಮಿ, ಮಾಜಿ ಜಿ.ಪಂ. ಸದಸ್ಯ ಜೈಪಾಲ್ ಭರಣಿ, ಮಾದಾಪುರ ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶ್, ರಮೇಶ್, ಮಹಿಳಾ ಘಟಕದ ಅಧ್ಯಕ್ಷ ಯಶೋಧಮ್ಮ,ಕುರುಬ ಸಮಾಜದ ಹಿರಿಯ ಮುಖಂಡ ಶಿವಮೂರ್ತಿ, ಉಮಾಪತಿ, ಅಶೋಕ್, ಮಾವಿನಹಳ್ಳಿ ರಾಜೇಶ್, ಸತೀಶ್, ರಾಜೇಶ್, ಹೆಮ್ಮಿಗೆ ಹೊನ್ನಯ್ಯ ಹಾಜರಿದ್ದರು.

ಮಾ.19ಕ್ಕೆ ಪಂಚರತ್ನ ರಥಯಾತ್ರೆ

ತಿ.ನರಸೀಪುರ: ಮಾರ್ಚ್ 19ರಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಪಂಚರತ್ನ ರಥಯಾತ್ರೆ ತಿ.ನರಸೀಪುರಕ್ಕೆ ಆಗಮಿಸಲಿದ್ದು, ತಲಕಾಡು ಹೋಬಳಿ ಮಡವಾಡಿಯಿಂದ ಆರಂಭವಾಗಲಿರುವ ರಥಯಾತ್ರೆಯನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಬೇಕಿದೆ. ಮಡವಾಡಿಯಿಂದ ಆರಂಭವಾಗುವ ರಥಯಾತ್ರೆ ಮೇದನಿ, ಬಣವೆ ಮೂಲಕ ತಲಕಾಡು ಪ್ರವೇಶಿಸಲಿದೆ. ತದನಂತರ ಹೆಮ್ಮಿಗೆ ಸೇತುವೆ, ಮಾದಾಪುರ ಗ್ರಾಮಕ್ಕೆ ತೆರಳಲಿದ್ದು, ಕುರುಬೂರು, ಮೂಗೂರು, ವಾಟಾಳು ಗ್ರಾಮದ ಮೂಲಕ ತಿ.ನರಸೀಪುರ ಪ್ರವೇಶಿಸಿ ನಂತರ ಬನ್ನೂರಿಗೆ ತೆರಳಲಿದೆ. ಬನ್ನೂರಿನ ಫುಟ್‌ಬಾಲ್ ಮೈದಾನದಲ್ಲಿ ಸಮಾವೇಶ ನಡೆಯಲಿದೆ. ಕ್ಷೇತ್ರ ವ್ಯಾಪ್ತಿಗೊಳಪಡುವ ಗ್ರಾಮಸ್ಥರು, ಮುಖಂಡರು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ರಥಯಾತ್ರೆ ಯಶಸ್ವಿಗೊಳಿಸುವಂತೆ ಶಾಸಕ ಅಶ್ವಿನ್‌ಕುಮಾರ್ ಮನವಿ ಮಾಡಿದರು.

ಹುಣಸೂರು ನಗರಸಭೆಗೆ ಮಂಜುನಾಥ್ ಪೌರಾಯುಕ್ತ




ಹುಣಸೂರು, ಮಾ.9– ಇಲ್ಲಿನ ನಗರಸಭೆ ನೂತನ ಪೌರಾಯುಕ್ತರಾಗಿ ಮಂಜುನಾಥ್ ಅಧಿಕಾರ ವಹಿಸಿಕೊಂಡರು.

ಈ ಹಿಂದಿನ ಪೌರಾಯುಕ್ತೆ ಮಾನಸ ಅವರನ್ನು ಚುನಾವಣಾ ಆಯೋಗದ ಸೂಚನೆ ಮೇರೆಗೆ ಬೇರೆಡೆಗೆ ವರ್ಗಾವಣೆ ಮಾಡಲಾಗಿತ್ತು. ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಶಿಡ್ಲಘಟ್ಟ ನಗರಸಭೆ ಪೌರಾಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಂಜುನಾಥ್ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ಈ ಹಿನ್ನೆಲೆಯಲ್ಲಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಖಂಡನೆ

ತಿ.ನರಸೀಪುರ, ಮಾ.9– ಬಿಜೆಪಿ ಮೇಲ್ಜಾತಿ ಪಕ್ಷ, ಸಂವಿಧಾನದ ಪರ ಇಲ್ಲ ಎಂಬ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಯನ್ನು ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಖಂಡಿಸಿದ್ದಾರೆ.



ಪಟ್ಟಣದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ಮೇಲ್ಜಾತಿ, ಕೀಳು ಜಾತಿ ಎಂಬ ಪದ ಬಳಸುವ ಮೂಲಕ ಸಂವಿಧಾನ ವಿರೋಧಿ ನಡೆ ಅನುಸರಿಸಿ ಆ ಮೂಲಕ ಬಸವಣ್ಣ, ಕನಕದಾಸರು ಹಾಗೂ ಅಂಬೇಡ್ಕರ್ ಆದರ್ಶಗಳಿಗೆ ಅಪಮಾನವೆಸಗಿದ್ದಾರೆ. ನಮ್ಮ ಪಕ್ಷದ ನಾಲ್ವರು ಕಾರ್ಯಕರ್ತರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಕೀಳು ಜಾತಿಯವರು ಎಂಬಂತೆ ಬಿಂಬಿಸಿ ಮಾತನಾಡಿದ್ದಾರೆ. ಆ ಮೂಲಕ ಅಂಬೇಡ್ಕರ್‌ಗೆ, ದಲಿತರಿಗೆ ಹಾಗೂ ಸಂವಿಧಾನಕ್ಕೆ ಅಪಮಾನವಾಗುವಂತೆ ಮಾಡಿದ್ದಾರೆ. ಕೂಡಲೇ ಅವರು ಕಾರ್ಯಕರ್ತರ ಹಾಗೂ ದಲಿತರ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ ಅವರು, ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ 150 ಸ್ಥಾನ ಗಳಿಸುವ ಮೂಲಕ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.


ನಗರಸಭಾ ಸದಸ್ಯನ ಸದಸ್ಯತ್ವ ರದ್ದು

ಹುಣಸೂರು, ಮಾ.9– ನಗರಸಭೆ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಹುಣಸೂರು ನಗರಸಭಾ ಸದಸ್ಯರೊಬ್ಬರ ಸದಸ್ಯತ್ವವನ್ನು ರದ್ದುಗೊಳಿಸಿ ಮೈಸೂರಿನ ಪ್ರಾದೇಶಿಕ ಆಯುಕ್ತ ಡಾ.ಜೆ.ಸಿ.ಪ್ರಕಾಶ್ ಆದೇಶ ಹೊರಡಿಸಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.



ನಗರದ 8ನೇ ವಾರ್ಡ್ ಸದಸ್ಯ ಹೆಚ್.ಪಿ.ಸತೀಶ್ ಕುಮಾರ್ ಸದಸ್ಯತ್ವ ಕಳೆದುಕೊಂಡವರು. ಇವರು 2021ರ ನ.18ರಂದು ಅಂದಿನ ಪೌರಾಯುಕ್ತ ರಮೇಶ್ ಅವರನ್ನು ಅಧ್ಯಕ್ಷರ ಕಚೇರಿಗೆ ಕರೆಸಿಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆಗೆ ಮುಂದಾಗಿದ್ದರು. ಈ ವೇಳೆ ಸದಸ್ಯ ಮನು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದರು. ಈ ಸಂಬಂಧ ಪೌರಾಯುಕ್ತ ರಮೇಶ್ ಹುಣಸೂರು ಠಾಣೆಗೆ ದೂರು ನೀಡಿದ್ದರು. ಅಲ್ಲದೇ 2021ರ ನ.24ರಂದು ಸತೀಶ್ ಕುಮಾರ್ ನಗರಸಭೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಆಗಮಿಸುವ ಮೊದಲೇ ಆಗಮಿಸಿ ಎಂಎಆರ್–19 ಪುಸ್ತಕ ಹಾಗೂ ಸಾರ್ವಜನಿಕರಿಂದ ಬಂದ ಅರ್ಜಿಗಳು ಹಾಗೂ ಕಡತಗಳನ್ನು ಪರಿಶೀಲಿಸಿದ್ದರು. ಈ ದೃಶ್ಯ ನಗರಸಭೆಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಅಲ್ಲದೇ ಸಿಬ್ಬಂದಿಗೆ ತಮಗೆ ಬೇಕಾದ ಕೆಲಸ ಮಾಡಿಕೊಡುವಂತೆ ಒತ್ತಾಯ ಮಾಡಿ, ಕಡತಗಳನ್ನು ಅವರೇ ನೋಡಿ ಕೆಲವು ತಿದ್ದುಪಡಿಗೂ ಮುಂದಾಗಿದ್ದರು. ಈ ಎಲ್ಲಾ ಕಾರಣಗಳಿಂದ ನಗರಸಭೆಯ ದಾಖಲೆಗಳ ಭದ್ರತೆಯ ಹಿತದೃಷ್ಟಿಯಿಂದ ಆಯುಕ್ತರು ಮೇಲಧಿಕಾರಿಗಳಿಗೆ ವಿಷಯ ಮುಟ್ಟಿಸಿ ಸದಸ್ಯ ಸತೀಶ್ ವಿರುದ್ಧ ದೂರು ನೀಡಿದ್ದರು. ಈ ಸಂಬಂಧ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಅವರು ದೀರ್ಘಕಾಲದ ವಿಚಾರಣೆ ನಡೆಸಿದರು. ಅಲ್ಲದೇ ನಗರ ಸಭೆಯ ಸಿಸಿಟಿವಿ ಫುಟೇಜ್‌ನಿಂದ ಇವರ ವಿರುದ್ಧದ ಎಲ್ಲಾ ಆರೋಪಗಳು ಸಾಬೀತಾದ ಕಾರಣ ಅಲ್ಲದೇ ತನ್ನ ಸದಸ್ಯತ್ವಕ್ಕೆ ಅಗೌರವದಿಂದ ವರ್ತಿಸಿದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ ಕಾಯ್ದೆ 1964 ಕಲಂ41(1)ರ ಅಡಿ 2023ರ ಜ.6ರಂದು ಸತೀಶ್ ಕುಮಾರ್ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿ ಆದೇಶಿಸಿದ್ದಾರೆ.

ನೇಮಕ



ನಂಜನಗೂಡು, ಮಾ.9– ಬಿಜೆಪಿ ಗ್ರಾಮಾಂತರ ಮಂಡಲ ಉಪಾಧ್ಯಕ್ಷರಾಗಿ ಗೋವರ್ಧನ್ ಅವರನ್ನು ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಪಿ.ಮಹೇಶ್ ನೇಮಕ ಮಾಡಿದ್ದಾರೆ.ದೇವರಸನಹಳ್ಳಿ ಡೈರಿ ಅಧ್ಯಕ್ಷ ಹಾಗೂ ಗ್ರಾಪಂ ಸದಸ್ಯರಾಗಿರುವ ಗೋವರ್ಧನ್ ಅವರನ್ನು ಪಕ್ಷ ಸಂಘಟನೆ ಹಿತದೃಷ್ಟಿಯಿಂದ ಶಾಸಕ ಬಿ.ಹರ್ಷವರ್ಧನ್ ಸಲಹೆ ಮೇರೆಗೆ ಗ್ರಾಮಾಂತರ ಮಂಡಲ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ವೇತನ ಪರಿಷ್ಕರಣೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ

ನಂಜನಗೂಡು, ಮಾ.9– ವೇತನ ಪರಿಷ್ಕರಣೆಗೆ ಆಗ್ರಹಿಸಿ ತಾಲೂಕಿನ ಬಣ್ಣಾರಿ ಅಮ್ಮನ್ ಶುಗರ್ಸ್ ಕಾರ್ಖಾನೆ ಎದುರು ಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.



ಕಾರ್ಖಾನೆ ಎದುರು ಜಮಾಯಿಸಿದ ಕಾರ್ಮಿಕರು ತಮಗೆ ಸಿಗಬೇಕಾದ ನ್ಯಾಯಯುತ ವೇತನ ದೊರೆಯುವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಬಣ್ಣಾರಿ ಅಮ್ಮನ್ ಶುಗರ್ಸ್ ಕಾರ್ಖಾನೆ ಕಾರ್ಮಿಕ ಸಂಘದ ಅಧ್ಯಕ್ಷ ಮಂಜುನಾಥಯ್ಯ ಮಾತನಾಡಿ, ರಾಜ್ಯದಲ್ಲಿ 84 ಸಕ್ಕರೆ ಕಾರ್ಖಾನೆಗಳಿದ್ದು, 4 ವರ್ಷಕ್ಕೊಮ್ಮೆ ಸರ್ಕಾರವೇ ಕಾರ್ಮಿಕರ ವೇತನ ಪರಿಷ್ಕರಣೆ ಮಾಡುವಂತೆ ಕಾರ್ಖಾನೆಗಳಿಗೆ ನಿರ್ದೇಶನ ನೀಡುತ್ತದೆ. ಅಂತೆಯೇ ಶೇ.13.5ರಷ್ಟು ವೇತನ ಹೆಚ್ಚಳ ಮಾಡುವಂತೆ ಸರ್ಕಾರ ನಿರ್ದೇಶನ ನೀಡಿದರೂ ಬಣ್ಣಾರಿ ಅಮ್ಮನ್ ಕಾರ್ಖಾನೆಯಲ್ಲಿ ವೇತನ ಪರಿಷ್ಕರಿಸದೇ ವಿಳಂಬ ಮಾಡಲಾಗುತ್ತಿದೆ. ರಾಜ್ಯದ ಬಹುತೇಕ ಎಲ್ಲಾ ಕಾರ್ಖಾನೆಗಳಲ್ಲೂ ಸಂಬಳ ಹೆಚ್ಚಿಸಲಾಗಿದೆ. ಆದರೆ ನಮ್ಮ ಕಾರ್ಖಾನೆ ಆಡಳಿತ ಮಂಡಳಿ ಮಾತ್ರ ಮೀನಾಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು.

ಕಾರ್ಖಾನೆಯಲ್ಲಿ ಒಟ್ಟು 600 ಕಾರ್ಮಿಕರಿದ್ದು, ಇಂದಿನಿಂದ ಕೆಲಸ ಬಿಟ್ಟು ಹೋರಾಟದಲ್ಲಿ ಭಾಗವಹಿಸಲಿದ್ದಾರೆ. ನಮಗೆ ವೇತನ ಪರಿಷ್ಕರಣೆ ಮಾಡುವರೆಗೂ ಹೋರಾಟ ಮುಂದುವರೆಸಲಾಗುವುದು. ಆಡಳಿತ ಮಂಡಳಿ ಮಧ್ಯೆ ಪ್ರವೇಶಿಸಿ ನಮ್ಮ ಬೇಡಿಕೆ ಈಡೇರಿಸುವವರೆಗೂ ಹೋರಾಟ ಹಿಂಪಡೆಯುವ ಪ್ರಶ್ನೆಯೇ ಇಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷ ಎ.ಆರ್.ನಾಗನಾಯ್ಕ, ಜಿ.ಆರ್.ಮಹದೇವ, ಎನ್.ಶ್ರೀಕಂಠ, ಪ್ರಧಾನ ಕಾರ್ಯದರ್ಶಿ ಎಂ.ವೀರಭದ್ರಪ್ಪ, ಜಂಟಿ ಕಾರ್ಯದರ್ಶಿಗಳಾದ ಜಗದೀಶ್, ಡಿ.ಆರ್.ಗಿರೀಶ್, ನಾಗರಾಜು, ಖಜಾಂಚಿ ಎಂ.ರಮೇಶ್ ಸೇರಿದಂತೆ ಇತರರಿದ್ದರು.

ಬಿಜೆಪಿಯದು 40 ಪರ್ಸೆಂಟ್ ಯಾತ್ರೆ: ಧ್ರುವ ಕಿಡಿ

ಮಲ್ಲುಂಡಿ, ಮಾ.9– ರಾಜ್ಯದಲ್ಲಿ ಬಿಜೆಪಿ ಮಾಡುತ್ತಿರುವುದು ವಿಜಯಸಂಕಲ್ಪ ಯಾತ್ರೆಯಲ್ಲ. ಭ್ರಷ್ಟಾಚಾರದ ಸಂಕಲ್ಪ ಯಾತ್ರೆ. ಇದಕ್ಕೆ 40 ಪರ್ಸೆಂಟ್ ಯಾತ್ರೆ ಎಂದು ಕರೆದರೂ ತಪ್ಪಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕಿಡಿಕಾರಿದರು.



ನಂಜನಗೂಡು ವಿಧಾನಸಭಾ ಕ್ಷೇತ್ರದ ಹಗಿನವಾಳು ಗ್ರಾಪಂ ವ್ಯಾಪ್ತಿಯ ಅಂಬಳೆ, ಹಲ್ಲರೆ ಗ್ರಾಪಂ ವ್ಯಾಪ್ತಿಯ ಮಲ್ಲುಂಡಿ ಗ್ರಾಮದಲ್ಲಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಗ್ಯಾಸ್, ಪೆಟ್ರೋಲ್, ಡೀಸೆಲ್ ಸೇರಿದಂತೆ ದಿನ ಬಳಕೆಯ ವಸ್ತುಗಳ ಬೆಲೆ ಏರಿಸಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಬಿಜೆಪಿ ಭ್ರಷ್ಟಾಚಾರ ನಡೆಸಿದ್ದು ಬಿಟ್ಟರೆ ಜನಪರ ಯೋಜನೆ ಜಾರಿಗೊಳಿಸಿಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಬಡವರ ಹಸಿವು ನೀಗಿಸಲು 10 ಕೆಜಿ ಅಕ್ಕಿ, ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ, ಉಚಿತ ಸೈಕಲ್ ನೀಡಲಾಗುತ್ತಿತ್ತು. ಅಲ್ಲದೇ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿತ್ತು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಹೆಚ್ಚು ಅನುದಾನ ನೀಡಿದ್ದು ಕಾಂಗ್ರೆಸ್ ಸರ್ಕಾರ ಎಂದ ಅವರು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಗೃಹಲಕ್ಷ್ಮಿ ಯೋಜನೆಯಡಿ 2 ಸಾವಿರ ರೂ, ಗೃಹಜ್ಯೋತಿ ಯೋಜನೆ ಜಾರಿಗೊಳಿಸಲಾಗುವುದು. ಈ ಸಂಬಂಧ ಈಗಾಗಲೇ ಗ್ಯಾರಂಟಿ ಕಾರ್ಡ್ ವಿತರಿಸಲಾಗುತ್ತಿದೆ. ಭ್ರಷ್ಟ ಬಿಜೆಪಿ ಸರ್ಕಾರ ತೊಲಗಿಸಿ ಕಾಂಗ್ರೆಸ್ ಅಧಿಕಾರಕ್ಕೆತರಲು ಕಾರ್ಯಕರ್ತರು ಶ್ರಮಿಸಬೇಕಿದೆ ಎಂದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಉಸ್ತುವಾರಿ ಸೋಮೇಶ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಹೆಚ್.ಸಿ.ಬಸವರಾಜ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಮಹದೇವು, ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ, ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಸೋಮೇಶ್, ರಾಜು, ಮಹೇಶ್, ಶಂಕರಪ್ಪ, ಮಹದೇವು, ಮಣಿಕಂಠ, ಅಶೋಕ್, ಜಗದೀಶ್ ಇತರರಿದ್ದರು.

ಅದ್ಧೂರಿ ಶ್ರೀಕನ್ನಂಬಾಡಿ ಅಮ್ಮ, ಮಸಣಿಕಮ್ಮ ರಥೋತ್ಸವ



ಪಿರಿಯಾಪಟ್ಟಣ, ಮಾ.9– ಪಟ್ಟಣದ ಗ್ರಾಮ ದೇವತೆಗಳಾದ ಶ್ರೀಕನ್ನಂಬಾಡಿ ಅಮ್ಮ ಹಾಗೂ ಮಸಣಿಕಮ್ಮನವರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ರಥೋತ್ಸವ ಅಂಗವಾಗಿ ದೇವಸ್ಥಾನದಲ್ಲಿ ಗಣಪತಿ ಹೋಮ, ನವಗ್ರಹ ಪೂಜೆ ಸೇರಿದಂತೆ ಪೂಜಾ ಕೈಂಕರ್ಯಗಳು ನಡೆಯಿತು. ಬಳಿಕ ಮಧ್ಯಾಹ್ನ 12.15ರ ಬ್ರಾಹ್ಮಿ ಮುಹೂರ್ತದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಭಕ್ತರು ಅಮ್ಮನವರಿಗೆ ಜೈಕಾರ ಹಾಕಿ ರಥ ಎಳೆದರು. ಅಲ್ಲದೇ ರಥಕ್ಕೆ ಹಣ್ಣು ಜವನ ಎಸೆದು ಭಕ್ತಿಭಾವ ಮೆರೆದರು. ಜಾತ್ರೆಯಲ್ಲಿದ್ದ ಭಕ್ತರಿಗೆ ವಿವಿಧ ಸಂಘಟನೆಗಳಿಂದ ತಂಪು ಪಾನೀಯ, ಮಜ್ಜಿಗೆ, ಹಣ್ಣು ಐಸ್‌ಕ್ರೀಂ, ಮೊಸರನ್ನ, ಪಲಾವ್ ಸೇರಿದಂತೆ ಸಿಹಿ ಹಂಚಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಈ ವೇಳೆ ಮೈಮುಲ್ ಅಧ್ಯಕ್ಷ ಪ್ರಸನ್ನ, ಮಾಜಿ ಶಾಸಕ ಕೆ.ವೆಂಕಟೇಶ್, ಮಾಜಿ ಶಾಸಕ ವಿಜಯ ಶಂಕರ್, ಮುಖಂಡ ಗಣೇಶ್ ಸೇರಿದಂತೆ ಇನ್ನಿತರರು ಇದ್ದರು.

ಶೇ.50ರಷ್ಟು ಮಹಿಳಾ ಮೀಸಲಾತಿ ನಿಗದಿಯಾದರೆ

ಹುಣಸೂರು, ಕೆ.ಆರ್.ನಗರ ಮಹಿಳಾ ಮೀಸಲು ಕ್ಷೇತ್ರ



ಕೆ.ಆರ್.ನಗರ, ಮಾ.9– ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ನೀಡಿದರೆ ಮುಂದಿನ ದಿನಗಳಲ್ಲಿ ಹುಣಸೂರು ಅಥವಾ ಕೆ.ಆರ್.ನಗರ ಕ್ಷೇತ್ರ ಮಹಿಳಾ ಮೀಸಲು ಕ್ಷೇತ್ರವಾಗಲಿದೆ ಎಂದು ಶಾಸಕ ಸಾರಾ ಮಹೇಶ್ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ತಾಲೂಕು ಯುವ ರೈತ ವೇದಿಕೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಸ್ವಾವಲಂಬಿ ಬದುಕಿಗೆ ಅನೇಕ ಕಾರ್ಯಕ್ರಮಗಳನ್ನು ತರಲಾಗಿದ್ದು, ತಮ್ಮ ಅಧಿಕಾರವಧಿಯಲ್ಲಿ ತಾಲೂಕಿನ ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ ಯಾವುದೇ ತೊಂದರೆ ಕೊಟ್ಟಿಲ್ಲ. ನಿಮ್ಮಲ್ಲಿ ತಾಳ್ಮೆ ಇರುವುದರಿಂದ ಪೋಷಕರು ನಿಮ್ಮ ಬಳಿ ಮಕ್ಕಳನ್ನು ಕಳುಹಿಸುತ್ತಾರೆ. ನೀವುಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ ಎಂದು ಮನವಿ ಮಾಡಿದರು.

ಹೆಣ್ಣು ಸಂಸಾರದ ಕಣ್ಣು ಇಡೀ ಸಂಸಾರದ ಜವಾಬ್ದಾರಿ ಹೊರುವ ಜೊತೆಗೆ ಅನೇಕ ಕಷ್ಟಸುಖಗಳಲ್ಲಿ ಭಾಗಿಯಾಗಿರುತ್ತಾಳೆ. ಹೆಣ್ಣನ್ನು ಪೂಜಿಸುವುದು ನಾಡಿನ ಹಾಗೂ ನಮ್ಮೆಲ್ಲರ ಕರ್ತವ್ಯ ಎಂದ ಶಾಸಕರು, ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಕ್ಷೇತ್ರಗಳಲ್ಲಿನ ಅವರ ಸಾಧನೆ, ಸಮಾಜಕ್ಕೆ ಅವರ ಕೊಡುಗೆಗಳನ್ನು ಸಂಭ್ರಮಿಸುವ ದಿನ ಇದಾಗಿದೆ. ಮಹಿಳೆಯರು ನಿರಂತರವಾಗಿ ವೈಯಕ್ತಿಕ ಮತ್ತು ವೃತ್ತಿಪರವಾಗಿ ಅಭಿವೃದ್ಧಿಗೆ ಹಲವು ಕೊಡುಗೆ ನೀಡುತ್ತಿದ್ದಾರೆ. ಎಲ್ಲಾ ಮಹಿಳೆಯರು ತಮ್ಮ ಕಠಿಣ ಪರಿಶ್ರಮದ ಮೂಲಕ ಮೆಚ್ಚುಗೆ ಪಡೆಯುತ್ತಿದ್ದಾರೆ. ಅದೇ ರೀತಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ನ್ಯಾಯಾಧೀಶರು, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಅನೇಕ ಇಲಾಖೆಯಲ್ಲಿ ಮಹಿಳಾ ಅಧಿಕಾರಿಗಳೇ ಇದ್ದಾರೆ. ನಾನು ಯಾವತ್ತು ತಾಲೂಕಿನಲ್ಲಿ ಮಹಿಳಾ ಅಧಿಕಾರಿಗಳು ಕರ್ತವ್ಯ ನಿರ್ವಹಿಸಲು ಬೇಡ ಎಂದು ಹೇಳಿಲ್ಲ. ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುವವರಿಗೆ ಪ್ರಶಂಸೆ ವ್ಯಕ್ತಪಡಿಸಿದ್ದೇನೆ ಎಂದು ತಿಳಿಸಿದರು.

ಮಹಿಳಾ ಸಾಧಕರಾದ ಡಾ.ಸ್ವರೂಪರಾಣಿ, ವಿಕಲಚೇತನ ಕ್ರೀಡಾಪಟು ಕೆ.ಎಸ್.ಶಿಲ್ಪ, ವಿ.ಸಿ.ಫಾರಂ ಸಹ ಪ್ರಾಧ್ಯಾಪಕಿ ಡಾ.ಚಂದ್ರಕಲಾ ಹಣಗಿ, ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ. ದಯಾಮಣಿ.ಕೆ.ಜೆ ಅವರನ್ನು ಗುರುತಿಸಿ, ಸನ್ಮಾನಿಸಲಾಯಿತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಆರ್.ಪೂರ್ಣಿಮಾ, ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್.ಗುರುಪ್ರಸಾದ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಎನ್.ಪ್ರಸನ್ನ, ತಾಲೂಕು ಆರೋಗ್ಯಾಧಿಕಾರಿ ಡಾ.ಕೆ.ಆರ್. ಮಹೇಂದ್ರಪ್ಪ, ತಾಲೂಕು ಸ್ತ್ರೀ ಶಕ್ತಿ ಸಂಘಗಳ ಒಕ್ಕೂಟದ ಅಧ್ಯಕ್ಷೆ ಹರದನಹಳ್ಳಿ ಮಂಜುಳಾ ರಮೇಶ್, ಮಾಜಿ ಅಧ್ಯಕ್ಷರಾದ ಸಾಲಿಗ್ರಾಮ ರತ್ನಮ, ಭೇರ್ಯ ಶಿವಮ್ಮ, ರೇಣುಕಮ್ಮ, ಪ್ರಾಧ್ಯಾಪಕರಾದ ಡಾ.ಸಿ.ರಾಮಚಂದ್ರ, ನಾಗೇಂದ್ರಸ್ವಾಮಿ, ಡಾ.ವಿಷಕಂಠ, ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಗರುಡಗಂಭಸ್ವಾಮಿ, ಯುವ ರೈತ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಮ್ ಪ್ರಸಾದ್, ಶಿಶು ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಾದ ರತ್ನಮ್ಮ, ಗಾಯಿತ್ರಿ, ಸೇರಿದಂತೆ ಅನೇಕ ಮಹಿಳೆಯರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	65 (ಇಂ): ಬೆ.11.50ಕ್ಕೆ, ರಾ.7.25ಕ್ಕೆ, ರಾ.9.45ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1.55ಕ್ಕೆ, ಸಂ.4.40ಕ್ಕೆ.
ಸ್ಕ್ರೀನ್ 2	ಸ್ಕ್ರೀಂ 5(ಇಂ): ಬೆ.11.30ಕ್ಕೆ, ರಾ.7.10ಕ್ಕೆ, ಚೌಕಾಬಾರ (ಕ): ಮ.2.15ಕ್ಕೆ, ಕೊಂಡ್ರಾಲ್ ಪಾವಂ (ತ): ಸಂ.4.40ಕ್ಕೆ.
ಸ್ಕ್ರೀನ್ 3	ತುರಮುಖಂ (ಮ): ಬೆ.10.50ಕ್ಕೆ, ರಾ.9.45ಕ್ಕೆ, ಮಂಡಲ (ಕ): ಮ.2.05ಕ್ಕೆ, ಟ್ಯಾಕ್ಸಿ (ತೆ): ಸಂ.4.30ಕ್ಕೆ, ಸಿಎಸ್‌ಐ ಸನಾತನ್ (ತೆ): ರಾ.7.05ಕ್ಕೆ.
ಸ್ಕ್ರೀನ್ 4	ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.10.40ಕ್ಕೆ, ರಾ.8.45ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.2.05ಕ್ಕೆ, ತುರಮುಖಂ (ಮ): ಸಂ.5.05ಕ್ಕೆ.
ಸ್ಕ್ರೀನ್ 2	ತು ಜೂಥಿ ಮೇನ್ ಮಕ್ಕರ್ (ಹಿಂ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.11.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	65 (ಇಂ): ಬೆ.10.30ಕ್ಕೆ, ಮ.3.35ಕ್ಕೆ, 1 ರಾಬರಿ ಕಥೆ (ಕ): ಮ.12.40ಕ್ಕೆ, ಮೇರಿ (ಕ): ಸಂ.5.45ಕ್ಕೆ, ಮಂಡಲ (ಕ): ರಾ.7.50ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪುಲಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಒಂದು ರಾಬರಿ ಕಥೆ (ಕ) 2 ಪ್ರದರ್ಶನಗಳು, ಕಾಸಿನ ಸರ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಠಾಣ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ದೂರದರ್ಶನ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಗಿಲನ್ (ತ)	4 ಪ್ರದರ್ಶನಗಳು
ಸಂಗಂ	
ತು ಜೂಟಿ ಮೈ ಮಾಚನ್ (ಹಿ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಲವ್ ಬರ್ಡ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಗೌಳಿ (ಕ)	4 ಪ್ರದರ್ಶನಗಳು

ಕೋಟೆಯಲ್ಲಿ ಮಹಿಳಾ ದಿನಾಚರಣೆ



ಹೆಚ್.ಡಿ.ಕೋಟೆ, ಮಾ.9– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಸಿಡಿಪಿಓ ಆಶಾ ಮಾತನಾಡಿ, ಪ್ರಸ್ತುತ ಮಹಿಳೆಯರು ರಾಷ್ಟ್ರಪತಿ ಹುದ್ದೆ, ಸೇನೆ ಸೇರಿದಂತೆ ಈ ಎಲ್ಲಾ ಕ್ಷೇತ್ರಗಳನ್ನು ಪ್ರತಿನಿಧಿಸಿರುವುದು ಶ್ಲಾಘನೀಯ. ಮಹಿಳೆಯರು ಯಾವುದೇ ಕ್ಷೇತ್ರದಲ್ಲಿ ಅವಕಾಶ ಸಿಕ್ಕರೂ ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿದ್ದು, ಪೋಷಕರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಪ್ರತಿಯೊಬ್ಬರೂ ಉದ್ಯೋಗಕ್ಕಾಗಿ ಪದವೀಧರರಾಗದೆ, ಜ್ಞಾನಕ್ಕಾಗಿ ಶಿಕ್ಷಣ ಪಡೆಯಬೇಕಾಗಿದೆ ಎಂದರು. ವಕೀಲೆ ಸರಸ್ವತಿ ಮಾತನಾಡಿ, ತನ್ನ ಹಕ್ಕುಗಳಿಗೆ ಧಕ್ಕೆಯಾದಾಗ ಪುಟಿದೇಳುವ ಸಾಮರ್ಥ್ಯವನ್ನು ಮಹಿಳೆಯರು ಬೆಳೆಸಿಕೊಳ್ಳಬೇಕು. ಎಲ್ಲವೂ ಸರಿ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಸಂದರ್ಭಕ್ಕೆ ಅನುಗುಣವಾಗಿ ಹೋರಾಟ ಮಾಡಬೇಕು ಎಂದರು.

ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ಹಕ್ಕುಗಳ ಕುರಿತು ವಕೀಲರಾದ ನಯನಾ, ನಾಗಶ್ರೀ, ನಾಗೇಶ್, ಮಣಿರಾಜು, ದಿನೇಶ್, ಕುಮಾರ್ ಅರಿವು ಮೂಡಿಸಿದರು.

ಇದೇ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಆಶಾ ಅವರನ್ನು ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ಅಭಿನಂದಿಸಿದರು. ಈ ವೇಳೆ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಂಗನವಾಡಿ ಕಾರ್ಯಕರ್ತರನ್ನು ಇಲಾಖೆಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ನ್ಯಾಯಿಕ ದಂಡಾಧಿಕಾರಿಗಳಾದ ಸತೀಶ್, ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಶೈಲಾ, ಸುಧಾಮಣಿ, ಇಂದುಶ್ರೀ ಸೇರಿದಂತೆ ಅಂಗನವಾಡಿ ಕಾರ್ಯಕರ್ತರು ಇದ್ದರು.

ರಾಯಚೂರು ಜಿಲ್ಲೆಯ ಚುನಾವಣಾ ಐಕಾನ್ ಆಗಿ ನಿರ್ದೇಶಕ ಎಸ್‌ಎಸ್ ರಾಜಮೌಳಿ

ರಾಯಚೂರು: ರಾಯಚೂರು ಜಿಲ್ಲೆಗೆ ಚುನಾವಣಾ ರಾಯಭಾರಿಯಾಗಿ ಖ್ಯಾತ ನಿರ್ದೇಶಕ ಎಸ್.ಎಸ್ ರಾಜಮೌಳಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಚಂದ್ರಶೇಖರ್ ನಾಯಕ್ ತಿಳಿಸಿದ್ದಾರೆ. ಮೂಲತಃ ರಾಯಚೂರಿನ ಮಾನ್ವಿ ತಾಲೂಕಿನವರಾದ ರಾಜಮೌಳಿ ಅವರು ಮತದಾನ ಜಾಗೃತಿ ಕುರಿತು ಚುನಾವಣಾ ಸ್ವೀಪ್ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ವೀಡಿಯೋ ಕ್ಲಿಪ್‌ಗಳ ಮೂಲಕ ಜಾಗೃತಿ ಮೂಡಿಸುತ್ತಾರೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಚುನಾವಣಾ ಆಯೋಗ ಸೂಚಿಸಿದಂತೆ ರಾಜಮೌಳಿ ಅವರು ವಿಡಿಯೋ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು. ಇದರಲ್ಲಿ ಯಾವುದೇ ಪಕ್ಷಗಳಿಗೆ ಬೆಂಬಲಿಸುವಂತಹ ಸಂದೇಶ ಇರುವುದಿಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ಕ್ರೀನ್ ರೈಟರ್ ಹಾಗೂ ಚಿತ್ರಸಂಭಾಷಣೆಗಾರರನ್ನು ಆಯ್ಕೆ ಮಾಡಲಾಗಿದೆ.

ಯಾದವಗಿರಿಯ ಲಲಿತಾ ಪ್ರೌಢಶಾಲೆಯಲ್ಲಿ 'ಇಂಟರ‍್ಯಾಕ್ಟಿವ್ ಸ್ಮಾರ್ಟ್ ಬೋರ್ಡ್' ಸೌಲಭ್ಯ

ನೈರುತ್ಯ ರೈಲ್ವೆ ಮೈಸೂರು ವಿಭಾಗದ ಮಹಿಳಾ ಕಲ್ಯಾಣ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ಪೂಜಾ ಅಗರ್ವಾಲ್ ಚಾಲನೆ



ಮೈಸೂರು, ಮಾ.9(ಎಸ್‌ಬಿಡಿ)– ಮೈಸೂರಿನ ಯಾದವಗಿರಿಯ ಲಲಿತಾ ಪ್ರೌಢಶಾಲೆಯಲ್ಲಿ 'ಇಂಟರ‍್ಯಾಕ್ಟಿವ್ ಸ್ಮಾರ್ಟ್ ಬೋರ್ಡ್' ಸೌಲಭ್ಯ ಕಲ್ಪಿಸಲಾಗಿದೆ.

ಸ್ಮಾರ್ಟ್ ಬೋರ್ಡ್ ಬಳಕೆಗೆ ವಿಧ್ಯುಕ್ತವಾಗಿ ಚಾಲನೆ ನೀಡಿದ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಮಹಿಳಾ ಕಲ್ಯಾಣ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಪೂಜಾ ಅಗರ್ವಾಲ್ ಮಾತನಾಡಿ, ವಿದ್ಯುನ್ಮಾನ ಉಪಕರಣಗಳ ಮೂಲಕ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ನಮ್ಮ ಸಂಸ್ಥೆ ಉದ್ದೇಶವಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣದೊಂದಿಗೆ ವಿದ್ಯುನ್ಮಾನ ಸೌಕರ್ಯಗಳನ್ನು ಹಂತ ಹಂತವಾಗಿ ಉನ್ನತೀಕರಿಸಲಾಗುವುದು ಎಂದು ತಿಳಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ಲಭ್ಯವಿರುವ ವಿದ್ಯುನ್ಮಾನ ಪರಿಕರಗಳನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಲು ಶಾಲೆಯ ಶಿಕ್ಷಕರು ಸಿದ್ಧವಿರಬೇಕು. ಈ ಮೂಲಕ ವಿದ್ಯಾರ್ಥಿಗಳನ್ನು ಹೊಸ ಕೌಶಲ್ಯಗಳಿಗೆ ಪ್ರೋತ್ಸಾಹಿಸುವುದರೊಂದಿಗೆ ಅವರನ್ನು ಉದ್ಯೋಗಶೀಲರನ್ನಾಗಿ ರೂಪಿಸಲು ಅನುಕೂಲವಾಗುತ್ತದೆ. ಆಧುನಿಕ ಶಿಕ್ಷಣದಲ್ಲಿ ಬಳಕೆಯಾಗುವ ಈ ಇಂಟರ‍್ಯಾಕ್ಟಿವ್ ಸ್ಮಾರ್ಟ್ ಬೋರ್ಡ್ ತುಂಬಾ ಪ್ರಯೋಜನಕಾರಿಯಾಗಲಿದೆ ಎಂದು ಅಭಿಪ್ರಾಯಿಸಿದರು.

ಈ ಸಂದರ್ಭದಲ್ಲಿ ನೈಋತ್ಯ ರೈಲ್ವೆಯ ಮಹಿಳಾ ಕಲ್ಯಾಣ ಸಂಸ್ಥೆಯ ಕಾರ್ಯಕಾರಿ ಸದಸ್ಯರು, ಶಾಲಾ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಒಂಟಿಕೊಪ್ಪಲು ದೇವಾಲಯದ ಎದುರಿನ ಲಲಿತಾ ಪ್ರೌಢಶಾಲೆ 1972ರಲ್ಲಿ ಸ್ಥಾಪನೆಯಾಗಿದ್ದು, ಇದು ಅನುದಾನರಹಿತ ಶಿಕ್ಷಣ ಸಂಸ್ಥೆಯಾಗಿದೆ. ನೈಋತ್ಯ ರೈಲ್ವೆ ಮೈಸೂರು ವಿಭಾಗ ಹಂತದಲ್ಲಿ ಮಹಿಳಾ ಸಬಲೀಕರಣ, ವಿದ್ಯುಚ್ಛಕ್ತಿ ಸಂರಕ್ಷಣೆ, ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಸಾಮಾಜಿಕ ಚಿಂತನೆಯೊಂದಿಗೆ ಅಸ್ತಿತ್ವಗೊಂಡಿರುವ 'ಮಹಿಳಾ ಕಲ್ಯಾಣ ಸಂಸ್ಥೆ' ಈ ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುತ್ತಿದೆ.

ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬದ ಅಂಗವಾಗಿ ಹೊನಲು ಬೆಳಕು ಕಬಡ್ಡಿ ಪಂದ್ಯಾವಳಿ



ಮೈಸೂರು, ಮಾ.9(ಜಿಎ)– ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬದ ಪ್ರಯುಕ್ತ ಆಯೋಜಿಸಿರುವ ಹೊನಲು ಬೆಳಕು ಕಬಡ್ಡಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಬಡ್ಡಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಿ, ಮಾತನಾಡಿದ ಪಂದ್ಯಾವಳಿಯ ಪ್ರಧಾನ ಸಂಚಾಲಕ ಚೇತನ್, ಶಿವಣ್ಣ ಸ್ಮಾರಕ ವತಿಯಿಂದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ಅವರ ನೇತೃತ್ವದಲ್ಲಿ ಮಾ.12 ಮತ್ತು 13 ರಂದು ಒಂಟಿಕೊಪ್ಪಲಿನ ಕಾಳಿದಾಸ ರಸ್ತೆ ಕೆಇಬಿ ಪಕ್ಕದಲ್ಲಿರುವ ಸ್ಥಳದಲ್ಲಿ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಸುಮಾರು 30ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಗೆದ್ದ ತಂಡಗಳಿಗೆ ಮೊದಲ ಬಹುಮಾನ 30 ಸಾವಿರ ರೂ. ಆಕರ್ಷಕ ಟ್ರೋಫಿ, ಎರಡನೇ ಬಹುಮಾನ 15 ಸಾವಿರ ರೂ., ಮೂರನೇ ಬಹುಮಾನ 10 ಸಾವಿರ ರೂ., ಸಮಾಧಾನಕರ ಬಹುಮಾನ ವಿತರಿಸಲಾಗುವುದು. ಆಸಕ್ತರು ದೂ.7349719639, 9341043489, 9341726360, 8722226604 ಕರೆ ಮಾಡಿ ನೋಂದಾಣಿಸಿಕೊಳ್ಳಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗುರುರಾಜ್, ಪ್ರಸನ್ನ ಕುಮಾರ್, ಹೇಮಂತ್ ಇದ್ದರು.

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ಸಹಾಯಕ ತೋಟಗಾರಿಕೆ ನಿರ್ದೇಶಕರು
(ಉದ್ಯಾನವನ ಮತ್ತು ತೋಟಗಳು)
ಗಾಂಧಿವನ ಎದುರು, ಇಟ್ಟಿಗೆಗೂಡು, ಮೈಸೂರು – 570010
Ph:0821-2422256 E-mail:adhpngmysore@gmail.com

ಅಲ್ಪಾವಧಿ ಮ್ಯಾನ್ಯುವಲ್ ಟೆಂಡರ್ –ಪ್ರಕಟಣೆ

2022–23ನೇ ಸಾಲಿನಲ್ಲಿ ಈ ಕಚೇರಿಯ ಅಧೀನ ಬರುವ ಲಿಂಗಾಂಬುಧಿ ಸಸ್ಯಕಾಶಿಯ ಉದ್ಯಾನವನಕ್ಕೆ ಸಂಬಂಧಿಸಿದಂತೆ Bonsai Garden ಕಾಮಗಾರಿಗೆ ಅಲ್ಪಾವಧಿ ಮ್ಯಾನ್ಯುವಲ್ ಟೆಂಡರ್ ಅನ್ನು ಕೆ.ಟಿ.ಟಿ.ಪಿ ಕಾಯ್ದೆ ಅನ್ವಯ ಪ್ರತ್ಯೇಕವಾಗಿ ದ್ವಿ–ಲಕೋಟೆಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಪ್ರತಿ ಕಾಮಗಾರಿಯ ಟೆಂಡರ್ ಮೊತ್ತಕ್ಕೆ ಶೇಕಡಾ 2 ರಷ್ಟು ಇ.ಎಂ.ಡಿ.ಮೊತ್ತವು ಆಗಿರುತ್ತದೆ, ಟೆಂಡರ್ ಫಾರಂಗಳನ್ನು ದಿ: 03.03.2023 ರಿಂದ 09.03.2023 ಗಳಲ್ಲಿ ಕೆಳ ಸಹಿದಾರರ ಕಚೇರಿಯಲ್ಲಿ ನೀಡಲಾಗುವುದು, ಮೋಹರಾದ ಟೆಂಡರ್ ಸಲ್ಲಿಸಲು ಕೊನೆಯ ದಿ: 13.03.2023ರ ಸಂಜೆ 4.30ರ ಒಳಗೆ ಮುದ್ದಾಂ ಮೂಲಕ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಸಂಸ್ಥೆಯವರು ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ: 0821–2422256 ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ತೋಟಗಾರಿಕೆ ನಿರ್ದೇಶಕರು, ಉದ್ಯಾನವಗಳು ಮತ್ತು ತೋಟಗಳು, ಮೈಸೂರು

DIPR/DDMYS/KSMCA/1157/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 40/2022–23/6844–48, ದಿನಾಂಕ: 06.03.2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಲೆ.ಶೀ : 5054 – ಅಪೆಂಡಿಕ್ಸ್ 'ಇ' ಅಡಿಯಲ್ಲಿ ಮಡಿಕೇರಿ ತಾಲ್ಲೂಕು ವ್ಯಾಪ್ತಿಯಲ್ಲಿನ 1 & ಸೋಮವಾರಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿನ 2 ಕಾಮಗಾರಿಗೆ ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಅಂದಾಜು ಮೊತ್ತ ರೂ.100.00 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ: 07.03.2023 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15–03–2023 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ http://www.eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ / ಮಾರ್ಪಾಡುಗಳನ್ನು ಇ– ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.